
ರಂಜನೆ ಬೋಧನೆ ಪ್ರಬೋಧನೆ

ಗೌರಿ ಲಂಕೇಶ್


18 ಮೇ 2016 ಪುಟ 20 ರೂ. 15/-



ಮರೆಯಾದ ಗೆಳೆಯ



ಬೇಕು ಜಿಶಾಳಿಗೆ ನ್ಯಾಯ




ಡಾ.ರವೀಂದ್ರ ವಿರುದ್ಧ ಷಡ್ಯಂತ್ರ

ಉತ್ತರ ಕನ್ನಡ

ಜಿಪಂ ಅಧ್ಯಕ್ಷೆ ಜಯಶ್ರೀ ಪರಿಶಿಷ್ಟ ಜಾತಿಯವರಾ?






ಹರಿಹರ

ಅಲೆಮಾರಿ ಹರೀಶನ ಪೊಲಿಟಿಕಲ್ ಚೇಷ್ಟೆಗಳು

ಮೈಸೂರು

ಬಿಜೆಪಿ-ಜೆಡಿಎಸ್ ದೋಸ್ತಿಗೆ ಕಾಂಗ್ರೆಸ್ ತಿರುಮಂತ್ರ?






ಧಾರವಾಡ

ಸೋಲಿನಲ್ಲೇ ಖುಷಿ ಕಾಣುತ್ತಿರುವ ಕಾಂಗ್ರೆಸ್ಸಿಗರು!

ಎನ್‌ಡಿಎ ಸರ್ಕಾರಕ್ಕೆ ಎರಡನೇ ಬಾರಿಗೆ ಇಕ್ಕಿದ ಗಾರ್ಮೆಂಟ್ ಮಹಿಳೆಯ



ಮೊನ್ನೆ ಬೆಂಗಳೂರಿನಲ್ಲಿ (ಮತ್ತು ನಂತರ ಮಂಡ್ಯ ಜಿಲ್ಲೆಯಲ್ಲಿ) ಬೀದಿಗಿಳಿದ ಲಕ್ಷಾಂತರ ಗಾರ್ಮೆಂಟ್ ಮಹಿಳೆಯರು ಅಭೂತಪೂರ್ವವಾದ ಗೆಲುವೊಂದನ್ನು ದಾಖಲಿಸಿದರು. (ಆದಾಗಿ ಮೂರೇ ದಿನದಲ್ಲಿ ಬೇರೊಂದು ರೂಪದಲ್ಲಿ ಕೇಂದ್ರ ಸರ್ಕಾರವು ಅದೇ ಆದೇಶವನ್ನು ಜಾರಿಗೆ ತಂದಿದೆ. ಅದರ ಕುರಿತು ಇನ್ನೂ ವಿಶ್ಲೇಷಣೆಗೆ ಒಳಪಡಬೇಕಿದೆ.) ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದವರಿಗೆ ಬಿಟ್ಟು, ಉಳಿದವರಿಗೆ ಗೊತ್ತಿಲ್ಲದ ಸಂಗತಿಯೊಂದಿದೆ. ಈ ಸರ್ಕಾರ ಹೀಗೆ ಮಾಡಬಹುದೆಂಬುದರ ವಾಸನೆ ಗಾರ್ಮೆಂಟ್ ಮಹಿಳೆಯರಿಗೆ 15 ವರ್ಷಗಳ ಮುಂಚೆಯೇ ಹತ್ತಿತ್ತು, ಆಗಲೇ ಅವರು ಪ್ರತಿಭಟನೆ ನಡೆಸಿ ಸರ್ಕಾರವನ್ನು ಹಿಮ್ಮೆಟ್ಟಿಸಿದ್ದರು. ಮತ್ತೆ ಅದೇ ಅಪ್ಪಟ ಕಾರ್ಮಿಕ ವಿರೋಧಿ ನೀತಿಯನ್ನು ಜಾರಿಗೆ ತರಬೇಕೆಂದರೆ, ಎನ್‌ಡಿಎ ಸರ್ಕಾರವೇ ಬರಬೇಕಾಯಿತು. ಅದೂ ಮೋದಿ ನೇತೃತ್ವದಲ್ಲಿ, ಘಾತುಕ ಬಹುಮತದೊಂದಿಗೆ!

ಜುಲೈ 24, 2001ರಲ್ಲಿ ಬೆಂಗಳೂರಿನ ಪೀಣ್ಯದಲ್ಲಿ ಗಾರ್ಮೆಂಟ್ಸ್ ಮಹಿಳೆಯರು ಪಿಎಫ್ ವಿಚಾರಕ್ಕೇ ಪ್ರತಿಭಟನೆ ನಡೆಸಿದ್ದರು. ಈ ಸಾರಿ ಪಿಎಫ್ ಅನ್ನು 58 ವರ್ಷವಾಗುವ ತನಕ ಮಧ್ಯೆ ಹಿಂಪಡೆಯುವ ಹಾಗಿಲ್ಲ ಎಂಬ ಆದೇಶದ ವಿರುದ್ಧ ಕಾರ್ಮಿಕರು ತಿರುಗಿಬಿದ್ದಿದ್ದಾರೆ. 2001ರಲ್ಲಿ 45 ವರ್ಷವಾಗುವ ತನಕ ಪಿಎಫ್ ಹಿಂಪಡೆಯುವಂತಿಲ್ಲ ಎಂಬ 'ವದಂತಿ' ಹರಡಿತ್ತು. ಅಂದೂ ಸಹ, ಕಾರ್ಮಿಕರು ಸೀದಾ ಪಿಎಫ್ ಕಚೇರಿಗೇ ಜಾಥಾ ನಡೆಸಿದ್ದರು. ಅಂದೂ ಆ ನಡಿಗೆಗೆ ಯಾವ ಯೂನಿಯನ್ನೂ ನೇತೃತ್ವ ಕೊಟ್ಟಿರಲಿಲ್ಲ. ಆ ಪ್ರತಿಭಟನೆಯ ಮರುದಿನವೂ ಪತ್ರಿಕೆಗಳಲ್ಲಿ 'ಈ ಪ್ರತಿಭಟನೆಯ ಹಿಂದೆ ಯಾವುದೋ ಪಟ್ಟಭದ್ರ ಹಿತಾಸಕ್ತಿಗಳು ಇದ್ದಿರಬಹುದು' ಎಂದು ಬರೆಯಲಾಗಿತ್ತು. ಈ ಸಾರಿಯೂ, 'ಪೊಲೀಸರಿಗೆ ಬೇಕಾದ ಕೆಲವು ಸಮಾಜಘಾತುಕ ಶಕ್ತಿಗಳು ಇದರಲ್ಲಿ ಪಾಲ್ಗೊಂಡಿದ್ದರು, ಕಾರ್ಖಾನೆಯ ಮಾಲೀಕರೇ ಅದನ್ನು ಪ್ರಚೋದಿಸಿರುವ ಸಾಧ್ಯತೆ ಇದೆ' ಎಂದಷ್ಟೇ ಅಲ್ಲದೇ, 'ರಾಜ್ಯದ ಕಾಂಗ್ರೆಸ್ ಸರ್ಕಾರವೇ ಹೀಗೆ ಮಾಡಿಸಿರುವ ಸಾಧ್ಯತೆ ಇದೆ' ಎಂತಲೂ ಹೇಳಲಾಯಿತು.

2001ರಲ್ಲಿ ಪಿಎಫ್ ಕಚೇರಿಗೆ ಹೋಗಿದ್ದ ಕಾರ್ಮಿಕರಿಗೆ, ಪಿಎಫ್ ಅನ್ನು 45 ವರ್ಷವಾಗುವ ತನಕ ಹಿಂಪಡೆಯುವಂತಿಲ್ಲ ಎಂಬುದು 'ಕೇವಲ ವದಂತಿ' ಎಂದು ಹೇಳಲಾಯಿತು. ಅದನ್ನೇ ಬಹುತೇಕರು ನಂಬಿಕೊಂಡರು. ಅದು ವಾಸ್ತವವಾಗಿರಲಿಲ್ಲ, ಈ ಸಾರಿ ಯಾವ ಆದೇಶವನ್ನು ಜಾರಿ ಮಾಡಲು ಹೊರಟಿದ್ದರು ಮತ್ತು ಇನ್ನೂ ಸಹ ಹಿಂಬಾಗಿಲಿನಿಂದ ಮಾಡಲು ಹೊರಟಿದ್ದಾರೆ, ಅದರ ಮೂಲ 2000ನೇ ಇಸವಿಯಲ್ಲೇ ಇದೆ. ಅದರ ವಾಸನೆ ಕಾರ್ಮಿಕರಿಗೆ ಹತ್ತಿತ್ತು.

ಇದನ್ನು ಅರ್ಥಮಾಡಿಕೊಳ್ಳಬೇಕೆಂದರೆ, ನಿವೃತ್ತಿ ಸೌಲಭ್ಯಗಳ ಕುರಿತಂತೆ ಕೆಲವು ಮಾಹಿತಿಗಳನ್ನು ಮೊದಲು ನೋಡಬೇಕು. ಈ ಹಿಂದೆಯೂ ಸರ್ಕಾರೀ ನೌಕರರಂತೆ, ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಅಥವಾ ಖಾಸಗಿ ಕಂಪೆನಿಗಳಲ್ಲಿ ನಿವೃತ್ತಿ ವೇತನ ಇರಲಿಲ್ಲವಾದರೂ, ಪಿಎಫ್ ಮತ್ತು ಗ್ರಾಚ್ಯುಟಿ ಅವರೆಲ್ಲರಿಗೂ ಇತ್ತು, ಗ್ರಾಚ್ಯುಟಿ ಈಗ ವಿಶೇಷ ಸವಲತ್ತಾಗಿಬಿಟ್ಟಿದೆ. 2006ರ ನಂತರ ಸರ್ಕಾರೀ ಉದ್ಯೋಗಿಗಳಿಗೂ ನಿವೃತ್ತಿ ವೇತನ ಇಲ್ಲ, ಹಾಗಾಗಿ ಬಹುತೇಕ ಕಾಯಂ ನೌಕರರಿಗೂ ಖಾತರಿಯಾಗಿ ಸಿಗುತ್ತಿರುವುದು ಪಿಎಫ್ ಮಾತ್ರವಾಗಿದೆ. ಪಿಎಫ್ ಎಂದರೆ, ಪ್ರತೀ ತಿಂಗಳೂ ಕಾರ್ಮಿಕರ ವೇತನದ 12% ಅನ್ನು ಕಡಿತಗೊಳಿಸಿ, ಅದಕ್ಕೆ ಮಾಲೀಕರ 12% ಸೇರಿಸಿ, ಅದಕ್ಕೆ ವರ್ಷದಿಂದ ವರ್ಷಕ್ಕೆ ಪಿಎಫ್ ಮಂಡಳಿಯು ನಿರ್ಧರಿಸುವ ಬಡ್ಡಿ ಸೇರಿಸಿ ಇಟ್ಟಿರುವುದು. ಅದನ್ನು ಕಾರ್ಮಿಕರು ನಿವೃತ್ತಿಯಾದಾಗ ಅವರಿಗೆ ಒಂದಷ್ಟನ್ನು ಇಡುಗಂಟಾಗಿ ನೀಡಿ, ಉಳಿದದ್ದರಲ್ಲಿ ಇಂತಿಷ್ಟು ನಿವೃತ್ತಿ ವೇತನ ಎಂದು ನೀಡುವ ವ್ಯವಸ್ಥೆಯೇ ಪಿಎಫ್ (provident fund) ಅಥವಾ ಭವಿಷ್ಯ ನಿಧಿ.

ಈ ಪಿಎಫ್ ಮೇಲೆ ಮೋದಿ ಸರ್ಕಾರ ಮಾತ್ರ ಕಣ್ಣು ಹಾಕಿದ್ದಲ್ಲ, ಇವರದ್ದೇ ಎನ್‌ಡಿಎ ಸರ್ಕಾರವಿದ್ದಾಗ 2000ರಲ್ಲೂ ಪಿಎಫ್‌ಗೆ ಕೈ ಹಾಕಿದ್ದರು. ಅವರಿಗೆ ಈ ವಿಚಾರದಲ್ಲಿ ಮಾದರಿಯಾಗಿದ್ದು ಯಥಾಪ್ರಕಾರ ಅಮೆರಿಕ. ಅಲ್ಲಿ 401 ಕೆ ಎಂಬ ಕಾರ್ಮಿಕ ವಿರೋಧಿ ನೀತಿಯಡಿ, ಕಾರ್ಮಿಕರ ನಿವೃತ್ತಿ ಭತ್ಯೆಗಳ ಮೇಲೆ ಬಂಡವಾಳಿಗರ ಕರಾಳ ಹಸ್ತಗಳು ಚಾಚಿದ್ದವು. ಈ ನೀತಿಯನ್ನು ಅಮೆರಿಕ ಜೊತೆ ಮತ್ತು ಜಾಗತಿಕವಾಗಿ ಡಬ್ಲ್ಯುಟಿಓ ಒಪ್ಪಂದಕ್ಕೆ ಸಹಿ ಹಾಕಿದ್ದ ಇತರ ದೇಶಗಳೂ ಪಾಲಿಸಲಾರಂಭಿಸಿದವು.

ಅದರ ಭಾಗವಾಗಿ ವಾಜಪೇಯಿ ಸರ್ಕಾರವು 2000ನೇ ಜನವರಿಯಲ್ಲಿ ಡಾ.ದವೆ ಸಮಿತಿ ಎಂಬುದನ್ನು ರಚಿಸಿತ್ತು, ಈ ವರದಿಯ ಹೆಸರು ಓಯಸಿಸ್. (Old Age Social and Income Security- Project)

ಈ ವರದಿಯ ಪ್ರಕಾರ ಭಾರತದಲ್ಲಿ ಮುಂದಿನ ವರ್ಷಗಳಲ್ಲಿ ನಿವೃತ್ತಿದಾರರ ಸಂಖ್ಯೆ ಹೆಚ್ಚಾಗುತ್ತಾ ಹೋಗುವುದರಿಂದ 'ಅಭಿವೃದ್ಧಿ' ಯೋಜನೆಗಳಿಗೆ ಹಣ ಇಲ್ಲದಂತಾಗಿ, ಸರ್ಕಾರೀ ಬೊಕ್ಕಸದಿಂದ ನಿವೃತ್ತಿ ವೇತನ ನೀಡಲೆಂದೇ ಬಹಳ ಹಣ ಖರ್ಚಾಗುತ್ತದೆ. ಆದ್ದರಿಂದ ನಿವೃತ್ತಿ ವೇತನ ಮತ್ತು ಪಿಎಫ್‌ಗೆ ಪ್ರತ್ಯೇಕ ನಿಧಿಯನ್ನು ಸ್ಥಾಪಿಸಬೇಕು. ಕಾರ್ಮಿಕರಿಗೆ ಪ್ರತೀ ತಿಂಗಳು ಕೊಡುವ ಸಂಬಳದಲ್ಲೇ ಒಂದು ಭಾಗವನ್ನು ನಿವೃತ್ತಿ ವೇತನದ ನಿಧಿಗೆ ಎತ್ತಿಡಬೇಕು. (ಅಂದರೆ ಸರ್ಕಾರದ ಅಥವಾ ಮಾಲೀಕರ ಪಾಲು ಇರುವುದಿಲ್ಲ). ಇದು ಜಾರಿಗೆ ಬಂದಿದ್ದು 2006ರ ನಂತರ. ಆದರೆ ಈ ಹೊತ್ತಿಗೆ ಸರ್ಕಾರೀ ನೌಕರರ ಸಂಬಳ ವೇತನ ಆಯೋಗಗಳ ಪರಿಣಾಮವಾಗಿ ವಿಪರೀತ ಹೆಚ್ಚಳವಾಗಿತ್ತು, ಹೀಗಾಗಿ ಅಷ್ಟು ಸಂಬಳದಲ್ಲಿ ಒಂದಷ್ಟನ್ನು ನೌಕರರ ಸಂಬಳದಲ್ಲೇ ನಿವೃತ್ತಿ ವೇತನಕ್ಕೆ ಕಡಿತಗೊಳಿಸುತ್ತೇವೆನ್ನುವುದು ನೌಕರದಾರ ವರ್ಗಕ್ಕೆ ದೊಡ್ಡ ಸಮಸ್ಯೆ ಅನ್ನಿಸಲಿಲ್ಲ. ಜೊತೆಗೆ, ಅದು ಅನ್ವಯವಾಗುವುದೇನಿದ್ದರೂ, 2006ರ ನಂತರ ನೇಮಕಗೊಂಡವರಿಗೆ. ಹೀಗಾಗಿ ಸರ್ಕಾರೀ ನೌಕರರ ಸಂಘಗಳೂ ಇದನ್ನು ಸಮಸ್ಯೆಯನ್ನಾಗಿ ಪರಿಗಣಿಸಲಿಲ್ಲ.

ನಿಧಾನಕ್ಕೆ ಈ ಹೊಸ ನೌಕರರ ಸಂಖ್ಯೆ ಹೆಚ್ಚಾದಂತೆಲ್ಲಾ, ಅವರುಗಳಿಗೆ ತಮ್ಮ ಸಂಬಳದ ದೊಡ್ಡ ಪಾಲು ನಿವೃತ್ತಿ ವೇತನ ನಿಧಿಗೆಂದು ಸರ್ಕಾರ ಕಡಿತಗೊಳಿಸುತ್ತಿರುವ ಹಣ (ಇದನ್ನು ಎನ್‌ಪಿಎಸ್- New pension scheme ಎಂದು ಕರೆಯಲಾಗುತ್ತದೆ) ದೊಡ್ಡ ಪ್ರಮಾಣದ್ದು ಅನ್ನಿಸತೊಡಗಿತು. ತಮ್ಮದೇ ಜೊತೆಗಾರ ಹಿರಿಯ ನೌಕರರು ನಿವೃತ್ತಿ ವೇತನಕ್ಕೆ ಈ ರೀತಿ ಹಣ ನೀಡದೇ ಇರುವಾಗ, ತಮ್ಮ ಸಂಬಳದಲ್ಲಿ ಮಾತ್ರ ಇಷ್ಟೊಂದು ಕಿತ್ತುಕೊಳ್ಳುವುದು ಸರಿಯಲ್ಲ ಎಂಬುದು ಒಂದು ತಕರಾರು ಆಗಿದ್ದರೆ, ತಮ್ಮ ಸಂಬಳದಲ್ಲಿ ಕಡಿತಗೊಳಿಸುವ ಹಣದಲ್ಲಿ, ನಿವೃತ್ತಿಯ ನಂತರ ಎಷ್ಟು ಹಣ ಸಿಗುತ್ತದೆ, ಅದರಲ್ಲಿ ನಿವೃತ್ತಿ ವೇತನ ಎಷ್ಟು ಎಂಬುದರ ಬಗ್ಗೆ ಸಂಬಂಧಪಟ್ಟವರ ಹತ್ತಿರ ಮಾಹಿತಿಯೇ ಇರದಿದ್ದುದು ಗಂಭೀರ ಪ್ರಶ್ನೆಗಳಿಗೆ ದಾರಿ ಮಾಡಿಕೊಟ್ಟಿತು.

ಅಸಲೀ ಸಮಸ್ಯೆ ಇರುವುದು ಇಲ್ಲಿಯೇ. ಸದರಿ ನಿಧಿಯನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲಾಗುತ್ತದೆ ಎಂದು ಹೇಳಲಾಗಿತ್ತು. ಅಂದರೆ, ಬಂಡವಾಳಶಾಹಿಗಳ ಅದರಲ್ಲೂ ಸಟ್ಟಾ ವ್ಯಾಪಾರಿಗಳ ಜೂಜುಕಟ್ಟೆಗೆ ಈ ಹಣವನ್ನು ಒಡ್ಡಲಾಗುತ್ತದೆ. ಆದರರ್ಥ ತಮಗೆ ಖಾತರಿಯಾಗಿ ಎಷ್ಟು ಹಣ ಸಿಗುತ್ತದೆ ಎಂಬುದು ಖಚಿತವಿಲ್ಲ, ಇದು ಕೇವಲ ನಿವೃತ್ತಿ ನಿಧಿಯ ಸಮಸ್ಯೆಯಲ್ಲ, ಬದಲಿಗೆ, ಪಿಎಫ್ ವಿಚಾರದಲ್ಲಿ ಆದದ್ದೂ ಅದೇನೇ. ಈ ಹಿಂದೆ ಪಿಎಫ್ ಮಂಡಳಿಗೆ ಹೋಗಿಸೇರುವ ಹಣವು ಸರ್ಕಾರಕ್ಕೆ ಸಾಲದ ರೂಪದಲ್ಲಿ ಸಿಗುತ್ತಿತ್ತು, ಇದೀಗ ಆ ಹಣವು ಷೇರು ಮಾರುಕಟ್ಟೆಗೆ, ಬಂಡವಾಳಿಗರ ಅನುಕೂಲಗಳಿಗೆ ತಕ್ಕಂತೆ ಸಿಗಬೇಕು ಎಂಬುದು ಅಸಲೀ ಹುನ್ನಾರವಾಗಿದೆ. ಈ ರೀತಿ ಪಿಎಫ್ ಮಂಡಳಿಗೆ ಹೋಗಿ ಸಂಗ್ರಹವಾಗುವ ಹಣದ ಪ್ರಮಾಣದ ಲಕ್ಷ ಕೋಟಿಗಳಲ್ಲಿರುತ್ತದೆ. ನಿವೃತ್ತಿಯ ನಂತರ ಈ ಹಣವನ್ನು ತೆಗೆಯಬೇಕಾದರೂ, ಅದರ ಮೇಲೆ ಸಾಲ ತೆಗೆದುಕೊಳ್ಳುವ ಹಕ್ಕು ಪಿಎಫ್ ಚಂದಾದಾರ ನೌಕರ/ಕಾರ್ಮಿಕ ವರ್ಗಕ್ಕಿರುತ್ತದೆ. ಅಷ್ಟು ಮಾತ್ರವಲ್ಲದೇ, ತಾನು ಕೆಲಸವನ್ನೇ ಬಿಟ್ಟು ಬಿಟ್ಟೆ ಎಂದು ಘೋಷಿಸಿದರೆ, ಮಾಲೀಕರ ಪತ್ರ ಅದನ್ನು ದೃಢಪಡಿಸಿದರೆ 60 ದಿನಗಳಲ್ಲಿ ಪಿಎಫ್ ಹಣ (ನೌಕರರ ತಿಂಗಳ ವೇತನದ 12%, ಮಾಲೀಕರ ಪಾಲು 12% ಮತ್ತು ಬಡ್ಡಿ) ಅವರಿಗೆ ಸಂಪೂರ್ಣ ಸಿಗುತ್ತದೆ.

ಮಧ್ಯೆ ಮಧ್ಯೆ ಈ ರೀತಿ ಹಣ ತೆಗೆದುಕೊಂಡರೆ ಪಾಪ, ಭಾರೀ ದೊಡ್ಡ ಬಂಡವಾಳಿಗರ ಪಾಡೇನು ಹೇಳಿ?! ಅವರ ಹೊಟ್ಟೆಪಾಡು ನಡೆಯುವುದೇ ಈ ರೀತಿ ಸಾರ್ವಜನಿಕರ ಹಣವನ್ನು ನುಂಗುವುದರಿಂದ. ಅವರದ್ದು ದೊಡ್ಡ ಹೊಟ್ಟೆಯಾದ್ದರಿಂದ ಸಾವಿರ ಕೋಟಿಗಳು, ಲಕ್ಷ



ಕೋಟಿಗಳು ನುಂಗುತ್ತಾರೆ ಅಷ್ಟೇ. ಹೀಗಾಗಿ ಮಧ್ಯೆ ಪಿಎಫ್ ಚಂದಾದಾರರು ಹಣ ವಾಪಸ್ ತೆಗೆಯದಂತೆ ಬಂಡವಾಳಸ್ಥರ ಏಜೆಂಟರಾಗಿರುವ ಸರ್ಕಾರಗಳು ದಾರಿ ಹುಡುಕಲಾರಂಭಿಸಿದವು.

ಸದರಿ ಓಯಸಿಸ್ ನೀತಿ 2000ದಲ್ಲಿ ಜಾರಿಗೆ ಬಂದಾಗಲೇ ಅದರ ಸುಳಿವು ಗಾರ್ಮೆಂಟ್ ಕಾರ್ಮಿಕರಿಗೆ ಸಿಕ್ಕಿತ್ತು, 2000ನೇ ಇಸವಿಯ ಜುಲೈ 24ರಂದು ಅವರು ಪೀಣ್ಯದಲ್ಲಿ ಬೀದಿಗೆ ಇಳಿದು ಪ್ರತಿಭಟಿಸಿದ್ದರು. ಅಂದು ಕನಿಷ್ಠ 10,000 ಮಹಿಳಾ ಕಾರ್ಮಿಕರು ತುಮಕೂರು ರಸ್ತೆಯಲ್ಲಿ ಕುಳಿತಿದ್ದರು. ಅಂದೂ ಇದೇ ರೀತಿ 'ಹಿಂಸೆ' ನಡೆದಿತ್ತು, ಅದರ ಫಲವಾಗಿ ಎನ್‌ಡಿಎ ಸರ್ಕಾರವು ತನ್ನ ಹುನ್ನಾರದಿಂದ ಹಿಂದೆ ಸರಿದಿತ್ತು, ಅಂದು ಬೆಂಗಳೂರಿನಲ್ಲಿ ಸುಮಾರು 70,000 ಗಾರ್ಮೆಂಟ್ ಕಾರ್ಮಿಕರಿದ್ದಾರೆಂದು ಅಂದಾಜಿಸಲಾಗಿತ್ತು, (ಈ ಕುರಿತು ಅಂದು ಸಮಾಜಶಾಸ್ತ್ರಜ್ಞೆ ಜಾನಕಿ ನಾಯರ್ ಅತ್ಯುತ್ತಮವಾದ ಲೇಖನವನ್ನೂ ಬರೆದಿದ್ದರು. ಇದೇ ಪುಟದಲ್ಲಿ ಈ ಹಿಂದೆ ಅಂಕಣ ಬರೆಯುತ್ತಿದ್ದ ಶಿವಸುಂದರ್ ಮಾಹಿತಿ ಹೆಕ್ಕಿ, ಸದರಿ ಹುನ್ನಾರದ ಬಗ್ಗೆ ಚರ್ಚೆಗಳನ್ನು ಏರ್ಪಡಿಸಿದ್ದರು.) ಈಗ ಬೆಂಗಳೂರಿನಲ್ಲಿ ಕನಿಷ್ಠ ಐದು ಲಕ್ಷ ಗಾರ್ಮೆಂಟ್ಸ್ ಕಾರ್ಮಿಕರಿದ್ದಾರೆಂದು ಅಂದಾಜಿಸಲಾಗಿದೆ. ಮೊನ್ನಿನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರು ಒಂದು ಲಕ್ಷ ಕಾರ್ಮಿಕರೆಂದು ಹೇಳಲಾಗುತ್ತಿದೆ.

ಈ ಸಾರಿ ಅದು 'ಕೇವಲ ವದಂತಿ'ಯಾಗಿರಲಿಲ್ಲ, ಕೇಂದ್ರ ಸರ್ಕಾರದ ಸ್ಪಷ್ಟ ಆದೇಶ ಕಾರ್ಮಿಕರಿಗೆ ಸಿಕ್ಕಿತ್ತು, 58 ವರ್ಷದೊಳಗೆ ಕಾರ್ಮಿಕರು ಪಿಎಫ್ ಹಿಂಪಡೆದರೆ, ಅವರಿಗೆ ಬಡ್ಡಿಯೂ ಸಿಗುವುದಿಲ್ಲ; ಮಾಲೀಕರ ಪಾಲಿನ ಅರ್ಧ ಹಣವೂ ಸಿಗುವುದಿಲ್ಲ ಎಂಬುದೇ '...
ಅದಕ್ಕೆ ಸರ್ಕಾರವು ನೀಡುತ್ತಿರುವ 'ಕಾಮಿ...
ಕಾರಣವೊಂದಿದೆ. ಅದೇನೆಂದರೆ, ಈ ಕಾರ್ಮಿ...
ನಿವೃತ್ತಿಯ ನಂತರ ಉಪಯೋಗಕ್ಕೆ...
ಭವಿಷ್ಯನಿಧಿಯಾಗಿ ನೋಡದೇ, ಮ...
ತೆಗೆದುಕೊಂಡುಬಿಡುತ್ತಿದ್ದಾರೆ. ಅದನ್ನು ತಡೆಗಟ್ಟ...
ಹೀಗೆ ಮಾಡುತ್ತಿದ್ದೇವೆ. ಅವರು 58 ವ...
ಇಟ್ಟುಕೊಂಡರೆ ಅವರಿಗೇ ಒಳ್ಳೆಯದಲ್ಲವೇ? ...
ಒಂದು ವಾದ. ಇದೇ ಮೋದಿ ಸರ್ಕಾರದ ...
ಬಜೆಟ್‌ನಲ್ಲಿ ಜೇಟ್ಲಿ ಮಾಡಲು ಹೊರ...
ಎಂಬುದನ್ನೂ ಇಲ್ಲಿ ನೆನೆಯಬೇಕು. ಕಾಮಿ...
ಹಣಕ್ಕೆ ಇದುವರೆಗೂ ತೆರಿಗೆ ಹಾಕುವ ...
ಯಾವ ಸರ್ಕಾರವೂ ಮಾಡಿರಲಿಲ್ಲ, ಆದರೆ ಜೇ...
ತೆರಿಗೆ ಹಾಕುವುದಾಗಿ ಪ್ರಕಟಿಸಿದರು. ಆ ನಂತ...

ಕಾರ್ಮಿಕರು ಪಿಎಫ್ ಹಣವನ್ನು ವಾಪಸ್ ...
ಸಂಪೂರ್ಣವಾಗಿ ನಿವೃತ್ತಿವೇತನ ಪಡೆಯಲೆಂದ...
ತೊಡಗಿಸುವುದಾದಲ್ಲಿ ತಾವು ಅದಕ್ಕೆ ತೆರಿಗೆ ಹಾ...
ಎಂದರು. ಅದಕ್ಕೂ ಪ್ರತಿರೋಧ ಬಂದನಂತರ ...
ತೆಗೆದುಕೊಂಡರು.

ನಿಜ ಏನೆಂದರೆ, ನಿವೃತ್ತಿಯ ನಂತರವೂ ಕಾ...
ಆ ಹಣ ಬಳಕೆಯಾಗದೇ, ನಿವೃತ್ತಿ ವೇತನ ಪ...
ಹೆಸರಿನಲ್ಲಿ ಬಂಡವಾಳಶಾಹಿಗಳಿಗೇ ಸಿಗುವಂತಾ...
ಎಂಬುದು ಮೋದಿ ಸರ್ಕಾರದ ಹುನ್ನಾರವಾಗಿತ್ತು...
ದುಷ್ಟತನ ಇನ್ನಾವ ಸರ್ಕಾರಕ್ಕೂ ಇರಲಿಲ್ಲ, ...
ಜಾರಿಗೆ ಬಾರದೇ ಹೋಗಿದ್ದರಿಂದ, ಈಗ ಇಂತಹ...
ಆದೇಶವನ್ನು ಮಾಡಿ, ಕನಿಷ್ಠ 58 ವರ್ಷದವರೆ...
ಹಣ ಪಿಎಫ್ ಮಂಡಳಿಯಲ್ಲಿಯೇ ಉಳಿದರೆ, ...
ಅದಾನಿಗೋ ಮತ್ತಾರಿಗೋ ನೀಡಬಹುದೆಂಬುದು...
ಅಸಲೀ ಯೋಜನೆ. ಸರಿಯಾಗಿ ಹೇಳಬೇಕೆಂದರ...
ಭವಿಷ್ಯದ ಹೆಸರಿನಲ್ಲಿ ವರ್ತಮಾನದ ಬದುಕನ್ನು ಕ...
ದ್ರೋಹ. ಅದು ಹೇಗೆಂಬುದು ಅರ್ಥವಾಗಬೇ...
ಗಾರ್ಮೆಂಟ್ಸ್ ಮಹಿಳೆಯರ ಬದುಕನ್ನೇ ಅವಲೋಕಿ...


ಗಾರ್ಮೆಂಟ್ಸ್ ಕಾರ್ಮಿಕರಲ್ಲಿ ಗಣನೀಯ ಸಂ...
ಇನ್ನೂ ಮದುವೆಯಾಗದ ಮಹಿಳೆಯರಿದ್ದಾರೆ. ...
ಮದುವೆಗೆ ಹಣ ಕೂಡಿಸಲೆಂದು ಬೆಂಗಳೂರಿಗೆ ...
ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿದು ನಾಲ್ಕೈದು ...
ನಂತರ ಕೆಲಸ ಬಿಟ್ಟಂತೆ ಮಾಡಿ, ಪಿಎಫ್ ...
ತೆಗೆದುಕೊಳ್ಳುತ್ತಾರೆ. ಇದೇ ಥರದಲ್ಲಿ ತಮ್ಮ ಬ...
ನೂರೆಂಟು ಅಗತ್ಯಗಳಿಗೆ ಈ ಹೆಣ್ಣುಮಕ್ಕಳು ...
ಹಣವನ್ನೇ ನೆಚ್ಚಿಕೊಂಡಿದ್ದಾರೆ. ಇವರ ಜೀವ...
ನೀಡಲಾಗುವ ಐದರಿಂದ ಏಳು ಸಾವಿರ ಹ...
ನಿವೃತ್ತಿಯ ಜೀವನಕ್ಕೆ ಹಣ ತೊಡಗಿಸಬೇಕು, ...
ಸಹ ಭಾರೀ ಬಂಡವಾಳಶಾಹಿಗಳಿಗೆ ಸಾಲ ...
ಸಲುವಾಗಿ ಎಂದು ಹೇಳುವುದು ಕೇವಲ ಕ್ರೌರ್ಯ...
ನರಹಂತಕರಿಗೆ ಮಾತ್ರ ಹೊಳೆಯುವ ಹುನ್ನಾರ...

ಇವೆಲ್ಲಾ ವಿವರಗಳೊಂದಿಗೆ ಸದರಿ ಮಹಿ...
ಬೀದಿಗಿಳಿದಿದ್ದಲ್ಲ, ಅವರಿಗೆ ತಮ್ಮನ್ನು ಜೀತದಾಳ...
ದುಡಿಸಿಕೊಳ್ಳುವ ಮಾಲೀಕರು, ಕಿರುಕುಳ ...
ಮಧ್ಯಮಸ್ತರದ ಆಡಳಿತ ಮಂಡಳಿ, ಏರುತ್ತಿರುವ ಬೆ...
ಅಭದ್ರ ನೌಕರಿ ಎಲ್ಲವೂ ಸೇರಿ ಆಕ್ರೋಶ ತರಿ...
ನೀವು 58 ವರ್ಷವಾಗುವತನಕ ಪಿಎಫ್ ಹಿಂಪ...
ವಂತಿಲ್ಲ ಎಂದು ಹೇಳಿದ್ದು, ಬೀದಿಗಿಳಿಯುವಂತೆ ಮ...
ಈ ಹೋರಾಟವನ್ನು ವ್ಯವಸ್ಥಿತವಾಗಿ ಮುಂದುವರೆಸ...
ಮತ್ತು ಕೇಂದ್ರ ಸರ್ಕಾರದ ಪಂಚರಂಗಿ ಸಂಚುಗಳ ...
ಪದೇಪದೇ ಸಮರ ಸಾರುವುದು ಅಷ್ಟು ಸುಲ...
ಅಷ್ಟಕ್ಕೂ, ಈ ಹೋರಾಟವನ್ನು ನಡೆಸಬೇ...
ಗಾರ್ಮೆಂಟ್ಸ್ ಮಹಿಳೆಯರು ಮಾತ್ರವಲ್ಲ, ...
ಮೊದಲನೇ ಹೆಜ್ಜೆಯನ್ನು ಭಾರೀ ಸದ್ದಿನೊಂದಿಗೆ ಇ...
ಅವರಿಗೆ ನಾವೆಲ್ಲರೂ ಅಭಿನಂದನೆ ಹೇಳಬೇಕು.



ಜಿಶಾಳಿಗೆ ಸಹೋದರಿ ಶೆಹ್ಲಾ ಪತ್ರ





ಕೇರಳದಲ್ಲಿ ದಲಿತ ಯುವತಿ ಜಿಶಾಳ ಮೇಲೆ ಆದ ಭೀಕರ ದಾಳಿ ಮತ್ತು ಅತ್ಯಾಚಾರದ ವಿವರಗಳನ್ನು ಓದುತ್ತಿದ್ದಂತೆ ನಾನು ನಡುಗಿಹೋದೆ. ದೆಹಲಿಯಲ್ಲಿ ನಿರ್ಭಯಾಳಿಗೆ ಹೀಗೇ ಆದಾಗ ನನ್ನ ಎದೆಯಲ್ಲಿ ನೋವು, ಕರುಳೆಲ್ಲ ರಭಸವಾಗಿ ಕಿತ್ತುಕೊಂಡು ಬರುತ್ತಿರುವಂತೆ ಯಾತನೆ, ದೇಹದಲ್ಲಿ ಕಿಂಚಿತ್ತೂ ಶಕ್ತಿ ಇಲ್ಲದಂತಹ ಅಸಹಾಯಕತೆ, ಹೃದಯವೇ ಬತ್ತಿಹೋದಂತೆ ಶೂನ್ಯತೆ, ಜೀವಂತವಾಗಿದ್ದರೂ ಸತ್ತುಹೋಗಿರುವಂತಹ ದುಃಖ. ಅಂತಹದ್ದೇ ನೋವು ಮತ್ತು ಯಾತನೆ ಮತ್ತೊಮ್ಮೆ ನನ್ನನ್ನು ಆವರಿಸಿಕೊಂಡಿತು.

ಮನುಷ್ಯನಿಂದ ಇಂಥಾ ಕ್ರೌರ್ಯ ಅದ್ಹೇಗೆ ಸಾಧ್ಯ? ಅದ್ಯಾವ ಪುರುಷಗುಣ ಓರ್ವ ಮಹಿಳೆಯನ್ನು ಹೀಗೆ ನಡೆಸಿಕೊಳ್ಳಲು ಪ್ರಚೋದಿಸುತ್ತದೆ? ಯಾವ ಮೃಗಕ್ಕೂ ಇಲ್ಲದ ಈ ಮನೋಸ್ಥಿತಿ ಅದು ಹೇಗೆ ಮನುಷ್ಯ ಪುರುಷ ಪ್ರಾಣಿಗೆ ಅಂಟಿಕೊಂಡಿತು? ಆ ಯುವತಿ- ನಿರ್ಭಯಾ ಳಂತೆಯೇ- ಅದೆಷ್ಟು ದೈಹಿಕ ಮತ್ತು ಮಾನಸಿಕ ನೋವನ್ನು ಅನುಭವಿಸಿರಬೇಡ? ಅದೆಷ್ಟು ಭಯಭೀತಳಾಗಿರಬೇಡ?

ಅಬ್ಬಾ!... ಕಳವಳ, ಅಸಹಾಯಕತೆ, ನೋವು... ಕಂಬನಿ ತೊಟ್ಟಿಕ್ಕಲಾರಂಭಿಸಿತು.

ಹಲವು ಇಂಗ್ಲಿಷ್ ಟಿವಿ ಚಾನೆಲ್‌ನವರು ಫೋನ್ ಮಾಡಿ ನನ್ನ ಅಭಿಪ್ರಾಯ ಕೇಳಿದರು. ಏನೆಂದು ಹೇಳಲಿ? ಆ ಯುವತಿಯ ಯಾತನೆಯನ್ನು ಕಲ್ಪಿಸಿಕೊಳ್ಳಲಿಕ್ಕೂ ಆಗದಿರುವಾಗ, ಆಕೆಯ ಮೇಲೆ ದಾಳಿ ಮತ್ತು ಅತ್ಯಾಚಾರವನ್ನು ಮಾಡಿದ ಆ ಪುರುಷ/ಪುರುಷರ ಕ್ರೌರ್ಯವನ್ನು ಖಂಡಿಸಲೂ ನನ್ನಲ್ಲಿ ಸೂಕ್ತವಾದ ಪದಗಳೇ ಇಲ್ಲದಿರುವಾಗ ಏನೆಂದು ಹೇಳಲಿ? ಆ ಯುವತಿಗೆ ನ್ಯಾಯ ಸಿಗಲಿ ಎಂದಷ್ಟೇ ಹೇಳಿ ಸುಮ್ಮನಾದೆ. ಆದರೆ ಆಕೆಗೆ ನ್ಯಾಯ ಸಿಗುವುದೆ? ಎಂತಹ ನ್ಯಾಯ ಆಕೆಗೆ 30 ಬಾರಿ ಇರಿದ ಚೂರಿಯನ್ನು ಮೊಂಡುಗೊಳಿಸಿ ಇನ್ನೆಂದೂ ಆಕೆಯ ದೇಹವನ್ನು ತಾಗದಂತೆ ನೋಡಿಕೊಳ್ಳುವುದು? ಎಂತಹ ನ್ಯಾಯ ಆಕೆಯ ಮೇಲಾದ ಅತ್ಯಾಚಾರವನ್ನು ಅಳಿಸಿಹಾಕಬಹುದು? ಎಂತಹ ನ್ಯಾಯ ಆಕೆಯ ಪ್ರಾಣವನ್ನು ಹಿಂದಿರುಗಿಸಬಹುದು?

ನೋವು ಮತ್ತು ಅಸಹಾಯಕತೆ ತುಂಬಿದ ಪರಿಸ್ಥಿತಿಯಲ್ಲಿ ನನ್ನಲ್ಲಿದ್ದ ಎಲ್ಲ ಪದಗಳೂ ಆವಿಯಾಗಿ ಹೋಗಿದ್ದವು. ಸಾಂತ್ವನಕ್ಕೆ ತಡಕಾಡಿದೆ. ಗೆಳತಿ ಕೆ.ಎಸ್.ವಿಮಲಾಗೆ ಫೋನ್ ಮಾಡಿದೆ. ಆಕೆಯಾದರೂ ಏನು ಮಾಡಿಯಾರು. ಇಬ್ಬರೂ ಕಣ್ಣೀರಿಟ್ಟೆವು.

ಮಗಳು ಇಶಾಳ ನೆನಪಾಯಿತು. ಅವಳನ್ನು ಅಪ್ಪಿಕೊಂಡು ಆಕೆಯನ್ನು ಈ ಜಗತ್ತಿನ ಎಲ್ಲ ಅನ್ಯಾಯ ಮತ್ತು ದೌರ್ಜನ್ಯಗಳಿಂದ ರಕ್ಷಿಸಬೇಕು ಅನ್ನಿಸಿತು. ತಂಗಿ ಬೇಬಿ (ಕವಿತಾ) ಕೂಡ ಸುದ್ದಿಯನ್ನು ಕೇಳಿ ದಿಗ್ಭ್ರಾಂತಳಾದಳು.

ಈಗಲೂ ನನ್ನಲ್ಲಿ ಪದಗಳೇ ಇಲ್ಲ.

ಈ ವಾರ ಮುಖಪುಟ ವರದಿಗಾಗಿ ಇತರೆ ಸಿದ್ಧತೆಗಳನ್ನು ನಮ್ಮ ತಂಡ ಮಾಡಿಕೊಂಡಿತ್ತು. ಆದರೆ ಕೇರಳದಿಂದ ಈ ಘೋರ ಪ್ರಕರಣದ ಬಗ್ಗೆ ಸುದ್ದಿ ಬಂದಾಗ ಅವುಗಳನ್ನೆಲ್ಲ ಬದಿಗಿಟ್ಟು ಇದನ್ನೇ ಮುಖಪುಟ ವರದಿಯನ್ನಾಗಿಸುವ ನಿರ್ಧಾರ ತೆಗೆದುಕೊಂಡೆವು. ಅದನ್ನು ಬರೆಯುವ ಜವಾಬ್ದಾರಿಯನ್ನು ನಮ್ಮ ಹಿರಿಯ ವರದಿಗಾರ ಡಾ. ಸೋಮನಾಥ್ ಅವರಿಗೆ ವಹಿಸಿದ ನಾನು ಪದಗಳಿಗಾಗಿನ ಹುಡುಕಾಟದಲ್ಲೇ ಇದ್ದೆ. ಆಗ ನನ್ನ ಕಣ್ಣಿಗೆ ಬಿದ್ದದ್ದು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಟನೆಯ ಉಪಾಧ್ಯಕ್ಷೆ ಆಗಿರುವ ಸಹೋದರಿ ಶೆಹ್ಲಾ ರಷೀದ್ ಬರೆದಿರುವ ಲೇಖನ. ಇದು ನನ್ನಲ್ಲಿರುವ ಆತಂಕಗಳಲ್ಲಿ ಹಲವನ್ನು ಬಿಂಬಿಸಿರುವುದರಿಂದ ಅದನ್ನು ಇಲ್ಲಿ ಅನುವಾದಿಸಿ ಕೊಡುತ್ತಿದ್ದೇನೆ.

ಪ್ರೀತಿಯ ಜಿಶಾ, ನಿನ್ನ ಪರಿಚಯ ನನಗಿರಲಿಲ್ಲ, ಹಾಗೆಯೇ ನಿನಗೂ ನಾನು ಗೊತ್ತಿರಲಿಲ್ಲ.

ನೀನೋರ್ವ 'ಸಾಮಾನ್ಯ' ವಿದ್ಯಾರ್ಥಿನಿ ಆಗಿದ್ದು ನಿನ್ನ ಓದನ್ನು ಮುಂದುವರೆಸುತ್ತಾ, ನಿನಗಾಗಿ ಮತ್ತು ಈ ದೇಶಕ್ಕಾಗಿ ಉತ್ತಮ ಭವಿಷ್ಯದ ಕನಸು ಕಾಣುತ್ತಿದ್ದೆ ಅನ್ನಿಸುತ್ತದೆ. ಬಹುಶಃ ನೀನು ರೋಹಿತ್ ವೇಮುಲನಂತೆ ನಕ್ಷತ್ರ ಮತ್ತು ಆಕಾಶಗಳ ಕುರಿತು ಕನಸು ಕಾಣುತ್ತಿದ್ದೆ. ನೀನು ಕಾನೂನು ವಿದ್ಯಾರ್ಥಿ ಆಗಿದ್ದೆ ಎಂದು ಕೇಳಲ್ಪಟ್ಟೆ. ಆದರೆ ಈ ದೇಶದ ಕಾನೂನು ನಮ್ಮ ಪಾಲಿಗೆ ವಿಫಲವಾಗಿದೆ ಎಂದು ಹೇಳಲು ವಿಷಾದವಾಗುತ್ತಿದೆ.

ಓರ್ವ ಭನ್ವಾರಿ ದೇವಿಗೆ ನ್ಯಾಯ ಸಿಗದಿದ್ದುದರಿಂದ ಭಾಗಾನ ತರಹದ ಜಾಗದಲ್ಲಿ ಸಾಮೂಹಿಕ ಅತ್ಯಾಚಾರಗಳು ನಡೆಯುತ್ತವೆ. ಭಾಗಾನದಲ್ಲಿ ಒಬ್ಬರಿಗೂ ನ್ಯಾಯ ಸಿಗದಿದ್ದರಿಂದ ಡೆಲ್ಟಾ ಮೇಘ್ವಾಲ್ ತರಹದ ಯುವತಿಯ ಮೇಲೆ ಅನ್ಯಾಯ ಎಸಗಲ್ಪಡುತ್ತದೆ. ಡೆಲ್ಟಾ ಮೇಘ್ವಾಲ್‌ಳಿಗೆ ನ್ಯಾಯ ಸಿಗದಿದ್ದರಿಂದ ನಿನಗೆ ಆದದ್ದು ಆಗುತ್ತದೆ. ನೋವಿನಸಂಗತಿ ಯಾವುದೆಂದರೆ, ನಿನಗೂ ನ್ಯಾಯ ಸಿಗುವುದಿಲ್ಲ ಎಂದು ನಾನು ಈಗಲೇ ಖಚಿತವಾಗಿ ಭವಿಷ್ಯ ನುಡಿಯಬಲ್ಲೆ ಎಂಬುದು.

ಇದು ಯಾಕೆ ಅಂದರೆ ನೀನು ಓದುತ್ತಿದ್ದ ಕಾನೂನು ಈ ದೇಶವನ್ನು ಆಳುತ್ತಿರುವ ಕಾನೂನು ಅಲ್ಲ. ಬದಲಾಗಿ ಮನುಸ್ಮೃತಿ ಎಂಬ ಪರ್ಯಾಯ ಕಾನೂನು ನಮ್ಮ ದೇಶವನ್ನು ಆಳುತ್ತಿದೆ. ಈ ಮನುಸ್ಮೃತಿಯನ್ನು ನಮ್ಮ ನ್ಯಾಯ ಮೂರ್ತಿಗಳು ತಮ್ಮ ತೀರ್ಪುಗಳಲ್ಲಿ ಆಗಾಗ್ಗೆ ಉಲ್ಲೇಖಿಸುತ್ತಿರುತ್ತಾರಾದರೂ ನೀನು ಪ್ರಾಯಶಃ ಈ ಮನುಸ್ಮೃತಿ ಎಂಬ ಕಾನೂನನ್ನು ಕುರಿತು ಕಾನೂನಿನ ಕಾಲೇಜಿನಲ್ಲಿ ಓದಿರುವುದಿಲ್ಲ. ಈ ಮನುಸ್ಮೃತಿ ಎಂಬ ಕಾನೂನೇ ಮಹಿಳೆಯರಿಗೆ ಮತ್ತು ದಲಿತರಿಗೆ ಇತಿಮಿತಿಗಳನ್ನು ವಿಧಿಸುವುದು.

ನಿರ್ದಿಷ್ಟ ಸಮಯದ ನಂತರ ಮಹಿಳೆಯರು ಹೊರಗೆ ಹೋಗಬಾರದು, ಮಹಿಳೆಯರು ಶಿಕ್ಷಣ ಪಡೆಯಬಾರದು, ದಲಿತರು ಶಿಕ್ಷಣವನ್ನಾಗಲಿ ಕುಶಲತೆಗಳನ್ನಾಗಲಿ ಪಡೆಯಬಾರದು ಎಂಬೆಲ್ಲ ನಿಯಮಗಳು ನಮ್ಮನ್ನಾಳುತ್ತಿರುವ ಮನುಸ್ಮೃತಿ ಎಂಬ ಕಾನೂನಿನಲ್ಲಿ ಹುದುಗಿವೆ.



ಕಂಡಹಾಗೆ


• ಗೌರಿ ಲಂಕೇಶ್
editorlankesh@gmail.com

ನೀನು ಪ್ರಾಯಶಃ ಈ ದೇಶವನ್ನು ಇಷ್ಟಪಡುತ್ತಿದ್ದೆ. ಆದರೆ ಈ ದೇಶ ಮಹಿಳೆಯರಿಗಲ್ಲ ಎಂದು ಹೇಳಲು ವಿಷಾದಿಸುತ್ತೇನೆ. ಅಷ್ಟೇ ಅಲ್ಲ, ನೀನು ಎಂದಾದರೂ ಇಲ್ಲಿನ ಪುರುಷಪ್ರಧಾನ ವ್ಯವಸ್ಥೆಯನ್ನಾಗಲಿ, ಜಾತಿ, ವರ್ಗ ಇತ್ಯಾದಿಗಳನ್ನಾಗಲಿ ಪ್ರಶ್ನಿಸಿದ್ದರೆ ಅವರು ನಿನ್ನ ಗಂಟಲಿನಲ್ಲಿ ಒಂದೆರಡು ಸ್ಲೋಗನ್‌ಗಳನ್ನು ತುರುಕುತ್ತಿದ್ದರು. ಇವತ್ತು ಯಾರೇ ಆಗಲಿ, ಅನ್ಯಾಯದ ವಿರುದ್ಧ ದನಿ ಎತ್ತಿದರೆ ನಮ್ಮ ಸರ್ಕಾರ ಪ್ರತಿಕ್ರಿಯಿಸುವುದು 'ಬೋಲೋ ಭಾರತ್ ಮಾತಾ ಕಿ ಜೈ' ಮತ್ತು 'ಬೋಲೋ ಒಂದೇ ಮಾತರಂ' ಎಂಬ ಎರಡು ಸ್ಲೋಗನ್‌ಗಳ ಮೂಲಕ.

ನೀನು ಓರ್ವ ದೇಶಭಕ್ತಳಾಗಿದ್ದು ನಿನ್ನ ಈ ದೇಶವನ್ನು ಇಷ್ಟಪಡುತ್ತಿದ್ದೆ ಎಂದು ಊಹಿಸುತ್ತೇನೆ. ಆದರೆ ದುರದೃಷ್ಟವಶಾತ್, ನಿನ್ನ ಮೇಲೆ ಅತ್ಯಾಚಾರ ನಡೆಯುತ್ತಿದ್ದಾಗ ಮತ್ತು ನೀನು ಕೊಲೆ ಆಗುತ್ತಿದ್ದಾಗ ನೀನು 'ಭಾರತ್ ಮಾತಾ ಕಿ ಜೈ' ಎಂದಿದ್ದರೂ ಅದು ನಿನ್ನ ನೆರವಿಗೇನೂ ಬರುತ್ತಿರಲಿಲ್ಲ. ನಿನ್ನ ಮೇಲಿನ ದಾಳಿ ಕುರಿತ ವಿವರಗಳನ್ನು ಕೇಳಿ ನಾನು ತತ್ತರಿಸುತ್ತಿದ್ದೇನೆ. ಹಲವರು ಹೆಣ್ಣು ಮಕ್ಕಳು ಹುಟ್ಟುತ್ತಿದ್ದಂತೆಯೇ ಅವರನ್ನು ಕೊಂದು ಹಾಕುತ್ತಾರಲ್ಲ, ಅವರೆಲ್ಲ ಪ್ರಾಯಶಃ ಸರಿಯಾದದ್ದನ್ನೇ ಮಾಡುತ್ತಿದ್ದಾರೆ ಎಂದು ನನಗೆ ಅನ್ನಿಸಲಾರಂಭಿಸಿದೆ. ಗಟ್ಟಿಗಿತ್ತಿ ಎಂದೂ, ತಾಳ್ಮೆ ಕಳೆದುಕೊಳ್ಳುವವಳಲ್ಲ ಎಂದೂ ಬಣ್ಣಿಸಲ್ಪಟ್ಟ ನನ್ನಂಥವಳಲ್ಲೇ ಇಂತಹ ಹತಾಶ ಭಾವನೆ ಹುಟ್ಟುತ್ತದೆಂದರೆ! ಆದರೆ ನಿನಗಾದದ್ದು ನನಗೂ ಆಗಬಹುದು, ಮತ್ತಿನ್ಯಾರ ಮೇಲೋ ಆಗಬಹುದು. ನೀನು ನನಗೆ ಗೊತ್ತಿರಲಿಲ್ಲ, ಆದರೆ ನೀನು ಅನುಭವಿಸಿದ ಭೀಕರತೆಯನ್ನು ನಾನು ಊಹಿಸಬಲ್ಲೆ.

⇨11

ಉತ್ತರ ಕನ್ನಡ: ಜಿಪಂ ಅಧ್ಯಕ್ಷೆ ಜಯಶ್ರೀ ಪರಿಶಿಷ್ಟ ಜಾತಿಯವರಾ


ಉಜ್ವಲ್‌ಕುಮಾರ್ ಘೋಷ್

ಉತ್ತರ ಕನ್ನಡ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಆಯ್ಕೆ ನೀರಸವಾಗಿ ನಡೆದುಹೋಗಿದೆ. ಜಿಪಂನ ಈ ಕಿರೀಟ ದೀಕ್ಷೆ ಜಿಲ್ಲೆಯ ಅನಭಿಷಕ್ತ ದೊರೆಯಂತೆ ಹಾರಾಡುತ್ತಿರುವ ಮುದಿ ಹುಲಿ ಆರ್.ವಿ. ದೇಶಪಾಂಡೆ ಮತ್ತಾತನ ಸ್ವ-ಪಕ್ಷದ ವೈರಿ ಶಾಸಕರ ನಡುವೆ ಮತ್ತೊಂದು ಸುತ್ತಿನ ಬೀದಿ ಕಿತ್ತಾಟಕ್ಕೆ ಕಾರಣವಾಗುವ ಕುತೂಹಲ ಮೂಡಿಸಿತ್ತು; ಕೆಡಿಸಿಸಿ ಬ್ಯಾಂಕಿನ ಗದ್ದುಗೆ ಗುದ್ದಾಟದಂತೆ ಅಥವಾ ಕಾಂಗ್ರೆಸ್‌ನ ಎಮ್ಮೆಲ್ಸಿ (ಸ್ಥಳೀಯ ಸಂಸ್ಥೆ ಕ್ಷೇತ್ರ) ಕ್ಯಾಂಡಿಡೇಟ್ ಆಯ್ಕೆ ಜಗಳದಂತೆ ಜಿಪಂ ಪೀಠಪ್ರಧಾನ 'ಕಾರ್ಯಕ್ರಮ' ಆಡಳಿತಾರೂಢ ಕಾಂಗ್ರೆಸ್‌ನ ಒಣಬಡಿದಾಟಕ್ಕೆ ವೇದಿಕೆ ಆಗಬಹುದೆಂಬ ಭಾವನೆ ಜಿಲ್ಲೆಯಲ್ಲಿತ್ತು. ಆದರೆ ಜಿಲ್ಲೆಯ ಪಂಚ ಶಾಸಕರ ಸ್ವ-ಹಿತಾಸಕ್ತಿ ಸಂಘರ್ಷವೇ ಈ ಸಿಂಡಿಕೇಟ್‌ನ ಏಕೈಕ ಘನಘೋರ ಶತ್ರು ದೇಶಪಾಂಡೆಯ ಮದಿಬ್ಬೆ ಈಡೇರಿಕೆಗೆ ವರವಾಗಿದ್ದು ಮಸ್ತ್‌ಮಜಾ ಆಗಿದೆ!

ಜಿಪಂ ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮತ್ತು ಉಪಾಧ್ಯಕ್ಷ ಪೀಠ ಹಿಂದುಳಿದ ಅ ವರ್ಗಕ್ಕೆ ಮೀಸಲಾಗಿತ್ತು. ಅಧಿಕಾರ ನಡೆಸುವ ಬಹುಮತ ಹೊಂದಿದ್ದ ಕಾಂಗ್ರೆಸ್‌ನಲ್ಲಿ ಅಧ್ಯಕ್ಷತೆಗೆ ಜಾತಿ ಅರ್ಹತೆಯಿರುವ ಇಬ್ಬರು ಹೆಂಗಸರಿದ್ದರೆ, ಉಪಾಧ್ಯಕ್ಷತೆ 'ಯೋಗ್ಯತೆ'ಯವರು ಹಲವರಿದ್ದರು. ಅನಾದಿಕಾಲದಿಂದಲೂ ಜಿಪಂ ಅಧಿಕಾರ ಹಿಡಿಯುತ್ತ ಬಂದಿರುವುದು ದೇಶಪಾಂಡೆ ಕಾಲಲ್ಲಿ ತೋರಿಸಿದ್ದನ್ನು ತಲೆಮೇಲೆ ಹೊತ್ತು ಮೆರೆಸುವ ಹೆಬ್ಬೆಟ್ಟು ವೀರ-ವೀರೆಯರೇ. ಹಿಂದೆಲ್ಲ ದೇಶಪಾಂಡೆ ತನ್ನ ಗುಲಾಮರನ್ನು ಏಕಪಕ್ಷೀಯವಾಗಿ ಪೀಠದಲ್ಲಿ ಪ್ರತಿಷ್ಠಾಪಿಸಿದಾಗ ಕಾಂಗ್ರೆಸ್‌ನಲ್ಲಿ ಆಂತರಿಕ ಅಲ್ಲೋಲಕಲ್ಲೋಲವೇ ಭುಗಿಲೆದ್ದಿತ್ತು. ಪಕ್ಷ ಹೋಳಾಗಿ ಹೋಯ್ತು ಎನ್ನುವಷ್ಟರತನಕ ಜಂಗೀಕುಸ್ತಿಗಳಾಗಿದ್ದೂ ಇದೆ. ಆದರೆ ಮ್ಯಾಗಿಯಂಥ ಮ್ಯಾಗಿಯನ್ನೇ ಮಣಿಸಿ ಇಡೀ ಜಿಲ್ಲಾ ಕಾಂಗ್ರೆಸ್ ಮೇಲೆ ಹಿಡಿತ ಸಾಧಿಸಿ ಭಿನ್ನಮತ ಜೀರ್ಣಿಸಿಕೊಂಡಿದ್ದರು ಡಾನ್ ದೇಶಪಾಂಡೆ.

ಆದರೆ ದೇಶಪಾಂಡೆ ಮೊದಲಿನ ಖದರು ಕಳೆದುಕೊಂಡಿದ್ದಾರೆ. ಶಾಸಕರಾದ ಶಿವರಾಮ ಹೆಬ್ಬಾರ್, ಮಂಕಾಳ್ ವೈದ್ಯ, ಸತೀಶ್ ಸೈಲ್, ಶಾರದಾ ಶೆಟ್ಟಿ ಮತ್ತು ಎಮ್ಮೆಲ್ಸಿ ಶ್ರೀಕಾಂತ ಘೋಟನೇಕರ್ ದೊರೆಯ ದಬ್ಬಾಳಿಕೆ ವಿರುದ್ಧ ಸಿಡಿದೇಳುತ್ತಿದ್ದಾರೆ. ಇವರೆಲ್ಲ ಒಂದಾಗಿ ಯುವರಾಜ ಪ್ರಶಾಂತ ದೇಶಪಾಂಡೆಯನ್ನು ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಹೀನಾಯವಾಗಿ ಸೋಲಿಸಿ ಆತನ ಅಪ್ಪ ದೇಶಪಾಂಡೆ ಸಾಹೇಬರ ಪಳಗಿಸುವ ಖೆಡ್ಡಾ ತೋಡಿದ್ದರು! ಕೆಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿ ಎಲೆಕ್ಷನ್‌ನಲ್ಲಿ ದೇಶಪಾಂಡೆಗೆ ಮಣ್ಣು ಮುಕ್ಕಿಸಿದ್ದರು; ಎಮ್ಮೆಲ್ಸಿಯಾಗಿ ಗೆದ್ದಿರುವ ಘೋಟನೇಕರ್‌ನೂ ರಿವೋಲ್ಟ್ ಕ್ಯಾಂಡಿಡೇಟೇ ದೇಶಪಾಂಡೆ ಪ್ರಭುತ್ವದ ಪಾಲಿಗೆ!


ದೇಶಪಾಂಡೆಗೆ ಭಟ್ಕಳದ ಹೆಬಳೆ ಜಿಪಂ ಕ್ಷೇತ್ರದ 'ನಕಲಿ' ಪರಿಶಿಷ್ಟ ಜಾತಿ ಸದಸ್ಯೆ ಜಯಶ್ರೀ ಮೊಗೇರ್‌ಗೆ ಅಧ್ಯಕ್ಷೆ ಮತ್ತು ತನ್ನ ಹಳಿಯಾಳದ ತೇರಗಾಂವ್ ಕ್ಷೇತ್ರದ 'ಕೇಸರಿ ಪೋರ' ಸಂತೋಷ್ ರೇಣಕೆಯನ್ನು ಉಪಾಧ್ಯಕ್ಷನಾಗಿ ನೇಮಿಸುವ ಯೋಚನೆ ಆರಂಭದಿಂದಲೇ ಇತ್ತು. ಇದಕ್ಕೆ ತಕ್ಕಂತೆಯೇ ಆತ ಮೀಸಲಾತಿ ನಿಗದಿಯಲ್ಲಿ ಆಟ ಆಡಿದ್ದ. ರೊಟೇಷನ್‌ನಂತೆ ಉತ್ತರ ಕನ್ನಡ ಜಿಪಂ ಅಧ್ಯಕ್ಷತೆ ಒಮ್ಮೆಯೂ ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸಿಕ್ಕಿಲ್ಲ. ಇದನ್ನು ಪರಿಗಣಿಸದೇ ಚುನಾವಣಾ ಆಯೋಗ ಮೀಸಲಾತಿಮಂತ್ರ ಪಠಣ ಮಾಡುವಂತೆ ನೋಡಿಕೊಂಡಿರುವ ದೇಶಪಾಂಡೆ ತಾನು ಹಾಕಿದ ಗೆರೆ ದಾಟದ ಪೆದ್ದುಗಳಿಗೆ ಅಧಿಕಾರ ಕೊಡಿಸುವ ಹಿಕಮತ್ತು ವ್ಯವಸ್ಥಿತವಾಗಿ ನಡೆಸಿದ್ದಾರೆ. ಜಿಪಂ ಅಧಿಕಾರ ತನ್ನ ಹಳಿಯಾಳದಲ್ಲೇ ಕೇಂದ್ರೀಕೃತವಾದರೆ ಮುಂದಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಗೆಲ್ಲಲು ಅನುಕೂಲವಾಗುತ್ತದೆಂಬ ದೂ(ದು)ರಾಲೋಚನೆ ದೋಷಪಾಂಡೆಯದು.

ಕಾಂಗ್ರೆಸ್‌ನಿಂದ ಗೆದ್ದಿರುವ ಜಿಪಂ ಸದಸ್ಯರಲ್ಲಿ ಪರಿಶಿಷ್ಟ ಜಾತಿ ಕೋಟಾದ ಇಬ್ಬರು ಮಹಿಳೆಯರಿದ್ದಾರೆ. ಒಬ್ಬರು ಭಟ್ಕಳದ ಜಯಶ್ರೀ ಮೊಗೇರ; ಮತ್ತೊಬ್ಬರು ಮುಂಡಗೋಡದ ಜಯಮ್ಮ ಹೀರಳ್ಳಿ. ದೇಶಪಾಂಡೆಗೆ ಜಯಶ್ರೀ ಮೊಗೇರ್‌ಗೆ ದೀಕ್ಷೆ ಕೊಡುವ ಮನಸ್ಸಾದರೆ, ಯಲ್ಲಾಪುರದ ಶಾಸಕನೂ-ದೇಶಪಾಂಡೆ ವಿರೋಧಿ ಗ್ಯಾಂಗಿನ ಕಪ್ತಾನನೂ ಆದ ಶಿವರಾಮ ಹೆಬ್ಬಾರ್ ತವರು ಕ್ಷೇತ್ರದ ಜಯಮ್ಮ ಹೀರಳ್ಳಿ ಪರ ವಕಾಲತ್ತು ನಡೆಸಿದ್ದರು. ಆಕಟಕಟಾ.... ಎಲ್ಲಾದರೂ ಉಂಟೇ? ದೇಶಪಾಂಡೆ ತನ್ನ ಪ್ರಭುತ್ವಕ್ಕೆ ಸವಾಲಾಗಿರುವ ಹಾವರ ಹೆಬ್ಬಾರನ ಕೈಮೇಲಾಗಲು ಬಿಡುವುದುಂಟೇ? ಉಪಾಯವಾಗಿ ಭಟ್ಕಳದ ಶಾಸಕ ಮಂಕಾಳ ವೈದ್ಯನ ಒಲಿಸಿಕೊಂಡ ದೇಶಪಾಂಡ ಜಯಶ್ರೀ ಮೊಗೇರ್ ಅಧ್ಯಕ್ಷಳಾಗಲು ಹೆಬ್ಬಾರ್‌ನ ವಿರೋಧ ಬರದಂತೆ ಸ್ಕೆಚ್ ಹೆಣೆದರು. ತನ್ನ ತಂಡದ ವೈದ್ಯ ಶಿಷ್ಯೆ ಜಿಪಂ ಅಧ್ಯಕ್ಷಳಾದರೆ ತೊಂದರೆಯೇನಿಲ್ಲ ಎಂಬ ತೀರ್ಮಾನಕ್ಕೆ ಬಂದ ಹೆಬ್ಬಾರ್‌ಗೆ ಉಪಾಧ್ಯಕ್ಷನಾಗಿ ತನ್ನ ಕ್ಯಾಂಡಿಡೇಟ್ ಕಣಕ್ಕಿಳಿಸುವ ಅವಕಾಶವೂ ಇಲ್ಲದಾಯ್ತು.

ಘಟ್ಟದ ಕೆಳಗಿನ (ಕರಾವಳಿ) ಜಯಶ್ರೀ ಮೊಗೇರ್ ಅಧ್ಯಕ್ಷರಾದರೆ ಮಲೆನಾಡಿನ ಪ್ರದೇಶಕ್ಕೆ ಉಪಾಧ್ಯಕ್ಷತೆ ಕೊಡುವುದು ಅನಿವಾರ್ಯವಾಯ್ತು. ಇದನ್ನು ಬಳಸಿಕೊಂಡ ದೇಶಪಾಂಡೆ ಹಳಿಯಾಳದ ಸಂತೋಷ್ ರೇಣಕೆ ಎಂಬ ತನ್ನ ಬಗಲಬಚ್ಚಾನಿಗೆ ಉಪಾಧ್ಯಕ್ಷತೆ ಕೊಡಿಸಿದರು. ಬಿಜೆಪಿ-ಸಂಘಪರಿವಾರದಲ್ಲಿ ಸಕ್ರಿಯನಾಗಿದ್ದ ಈ ಹಿಂದೂತ್ವದ ಹುಡುಗನನ್ನು ಜಿಪಂ ಎಲೆಕ್ಷನ್ ಹೊತ್ತಲ್ಲಿ ಹೈಜಾಕ್ ಮಾಡಿದ್ದ ದೇಶಪಾಂಡೆ, ಆತನಿಗೆ ಟಿಕೆಟ್ಟೂ ಕೊಡಿಸಿದ್ದರು. ಧರ್ಮೋನ್ಮಾದದ ಯುವಕರ ತಂಡ ಕಟ್ಟಿಕೊಂಡು 'ಜನಪ್ರಿಯ'ನಾಗಿರುವ ರೇಣಕೆ ಹಳಿಯಾಳದ ಬಹುಸಂಖ್ಯಾತ ಮರಾಠ ಪಂಗಡದವನು. ಈ ಹುಡುಗ ತನ್ನ ಅಥವಾ ವಂಶೋದ್ಧಾರದ ಪ್ರಶಾಂತ್‌ನ ಅಸೆಂಬ್ಲಿ ಯಾತ್ರೆಗೆ ಸಹಾಯಕನೆಂಬ ಲೆಕ್ಕಾಚಾರ ದೇಶಪಾಂಡೆಯದು.


ಭಟ್ಕಳ ಭಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ಮೊಗೇರರು ತಾವು ಮುಗೇರಾ ಎಂದು ಪರಿಶಿಷ್ಟ ಜಾತಿ ಮೀಸಲಾತಿ ಪ್ರಮಾಣಪತ್ರ ಪಡೆಯಲು ಶುರು ಮಾಡಿದ್ದು 1970ರ ದಶಕದಲ್ಲಿ. ಅದು ಸಾಮಾಜಿಕ ನ್ಯಾಯರಥದ ಸಾರಥಿ ಎಂದೇ ಬಿಂಬಿಸಲ್ಪಟ್ಟಿದ್ದ ದೇವರಾಜ ಅರಸುರ ಯುಗ. ಅಂದು ಅರಸರಿಗೆ ಆಪ್ತ ಸಚಿವನಾಗಿದ್ದ ಭಟ್ಕಳದ ಎಸ್.ಎಂ. ಯಾಹ್ಯಾ ತನ್ನ ಓಟ್‌ಬ್ಯಾಂಕ್ ರಾಜಕಾರಣಕ್ಕಾಗಿ ಮೊಗೇರರು ಕಾನೂನುಬಾಹಿರವಾಗಿ ಎಸ್‌ಸಿ ಸರ್ಟಿಫಿಕೇಟ್ ಪಡೆಯಲು ನೆರವಾಗಿದ್ದರು. ಸ್ಪೃಶ್ಯ ಜಾತಿಯ ಮೊಗೇರರು ಯಾಹ್ಯಾ ಸಾಹೇಬರ ಚಿತಾವಣೆಯಿಂದ ಅಸ್ಪೃಶ್ಯರ ಮೀಸಲಾತಿ ಪಡೆದು ಘೋರ ಮೋಸ-ವಂಚನೆ ಮಾಡುತ್ತಿರುವುದು ಅರಸುಗೆ ಗೊತ್ತಾಗುವಾಗ ಆತ ಅಧಿಕಾರ ಕಳೆದುಕೊಂಡಾಗಿತ್ತು.


ಅರಸು-ಯಾಹ್ಯಾರ ನಂತರ ಅಧಿಕಾರಕ್ಕೇರಿದವರೂ ಬಹುಸಂಖ್ಯಾತ ಮೊಗೇರರ ಉಸಾಬರಿ ತಮಗೇಕೆಂಬ ಉದಾಸೀನದಲ್ಲೇ ಕಾಲ ಕಳೆದರು. ದಲಿತರಿಗೂ ತಮಗೆ ಮೊಗೇರರು ಮೋಸ ಮಾಡುತ್ತಿರುವುದನ್ನು ವಿರೋಧಿಸುವಷ್ಟು ಸಂಘಟನಾತ್ಮಕ ಧ್ವನಿ ಇಲ್ಲದಾಗಿತ್ತು. ಆದರೆ ಸುಮಾರು ಒಂದೂಕಾಲು ದಶಕದ ಹಿಂದೆ ಇದ್ದಕ್ಕಿದ್ದಂತೆ ಒಂದಿಷ್ಟು ಸ್ಥಿತಿವಂತ ದಲಿತರು ಮೊಗೇರರು ನೈಜ ಪರಿಶಿಷ್ಟರಲ್ಲ ಎಂಬ ಕೂಗು ಹಾಕಿದರು. ಇದಕ್ಕೆ ಕಾರಣವಾಗಿದ್ದು ಹೊನ್ನಾವರದ ಕಾಸರಗೋಡ ಎಂಬಲ್ಲಿ ಮೀನುಗಾರ ಪಂಗಡದ 'ಮೊಗೇರ್' ಒಬ್ಬನಿಗೆ ಪರಿಶಿಷ್ಟ ಕೋಟಾದಲ್ಲಿ ಮಂಜೂರಿಯಾದ ಪೆಟ್ರೋಲ್ ಬಂಕ್!! ನೈಜ ದಲಿತನಾದ ಗೋಲ್‌ಮಾಲ್ ವೀರನೊಬ್ಬ ಈ ಪೆಟ್ರೋಲ್ ಬಂಕ್‌ಗೆ ಅರ್ಜಿ ಹಾಕಿದ್ದ. ಆದರೆ ಮೊಗೇರ್ ಪಂಗಡ ಜಿಪಂ ಮಾಜಿ ಸದಸ್ಯನಿಗೆ ದೇಶಪಾಂಡೆ ಸಾಹೇಬರ ಕೃಪೆಯಿಂದ ಎಸ್‌ಸಿ ಕೋಟದಲ್ಲಿ ಈ ಪೆಟ್ರೋಲ್ ಬಂಕ್ ಸ್ಯಾಂಕ್ಷನ್ ಆಗಿತ್ತು.. ಆಗ ಕೆರಳಿದ ವಂಚಿತ ದಲಿತ ನ್ಯಾಯಾಲಯದ ಒಳಗೆ ಮತ್ತು ಹೊರಗೆ ಮೊಗೇರರ ವಂಚನೆ ವಿರುದ್ಧ ಹೋರಾಟ ಶುರು ಮಾಡಿದ್ದ. ಈ ಹೋರಾಟ-ಹಾರಾಟದಿಂದ ಆ ಗೋಲ್‌ಮಾಲ್ ವೀರನ ತಂಡ ಅದೆಷ್ಟು ಕೊಬ್ಬಿತೆಂದರೆ, ಅಸಲಿ ದಲಿತರ ಮೇಲೆಯೇ ಸವಾರಿ ಮಾಡುವಂಥ ರೋಲ್‌ಕಾಲ್ ರಾಜರಂತಾದರು; ಅಟ್ರಾಸಿಟಿ ಅಸ್ತ್ರ ಝಳಪಿಸುತ್ತ ಪಾಪದರ ಸುಲಿವ ದಂಧೆಕೋರರಾದರು!!



ಜಯಶ್ರೀ ಮೊಗೇರ

ಆದರೆ ಭಟ್ಕಳಕ್ಕೆ ಬಂದ ತಹಶೀಲ್ದಾರ್‌ಗಳೆಲ್ಲ ಸ್ಥ... ಶಾಸಕ ಮಂಕಾಳ ವೈದ್ಯನ ಅಣತಿಗೆ ಅಂಜಿ ಜಿಲ್ಲಾ... ಆದೇಶ ಕುಂಡಿಯಡಿ ಹಾಕಿಕೊಂಡು ಕೂಡ್ರುತ್ತಿದ್ದಾರೆ. ಕೆ... ಎಸ್‌ಸಿ ಸರ್ಟಿಫಿಕೇಟ್ ಪಡೆಯುತ್ತಿರುವ ಮೊಗ... ಕುಲಕಂಠೀರವನಾದ ಶಾಸಕ ಮಂಕಾಳ ವೈದ್ಯನಿಗೆ ... ಹೆದರುವ ಪೈಕಿಯಲ್ಲ ಎಂದು ಪೋಸು ಕೊಡುತ್ತಿ... ಜಿಲ್ಲಾಧಿಕಾರಿ ಅತುಲ್‌ಕುಮಾರ್ ಘೋಷ್ ಅ... ತಹಸೀಲ್ದಾರ್ ಮೇಲೆ ಕ್ರಮ ಕೈಗೊಳ್ಳದಿರುವುದು ಅ... ಅನುಮಾನ ಮೂಡಿಸಿದೆ. ಇಂಥ ಎಡಬಿ... ಕಾರ್ಯವೈಖರಿಯಿಂದಾಗಿಯೇ ಇವತ್ತು ಉತ್ತರ ಕನ್ನ... ವಿವಾದ-ಗುಲ್ಲು-ಗೌಜಿಗೆ ಸಿಲುಕಿದ್ದಾರೆ. ದೇಶಪಾಂಡೆ ವ... ಕೀಳದ ಆಡಳಿತಾರೂಢ ಪಕ್ಷದ ಪಂಚ ಶಾಸಕರ ಕೆಣಕುತ್ತಿ... ಅಸೆಂಬ್ಲಿ ಅಧಿವೇಶನದಲ್ಲೇ ಸ್ಪೀಕರ್ ಕಾಗೋಡು ತಿಮ್ಮಪ್ಪ... ಉಗಿಸಿಕೊಂಡಿದ್ದಾರೆ.

ಜಿಪಂ ಅಧ್ಯಕ್ಷರಾಯ್ಕೆ ಹೊತ್ತಲ್ಲೇ ಅತ್ತ ಧಾರವಾ... ಹೈಕೋರ್ಟ್ ಪೀಠದಿಂದ ಜಿಪಂ ಸದಸ್ಯೆ ಜಯ... ಗುರುದಾಸ ಮೊಗೇರ್ ಮತ್ತಿತರ 11 ಮಂದಿ ಪ... ನಕಲಿ ಎಸ್‌ಸಿ ಸರ್ಟಿಫಿಕೇಟ್ ಪ್ರಶ್ನಿಸಿ ಹೂಡಲಾಗಿದ್ದ ... ಅರ್ಜಿ ವಿಚಾರಣೆ ಬಂದಿತ್ತು. ನಕಲಿ ಎ... ಪ್ರಮಾಣಪತ್ರ ರದ್ದು ಮಾಡದ ತಹಸೀಲ್ದಾರ್, ... ಮತ್ತು ಮೇಲಧಿಕಾರಿಗಳ ಕಾರ್ಯವೈಖರಿ ... ಅಸಮಾಧಾನ ಹೈಕೋರ್ಟ್ ವ್ಯಕ್ತಪಡಿಸಿದೆ. ಖೊ... ಜಾತಿ ಪ್ರಮಾಣಪತ್ರಗಳನ್ನು ರದ್ದು ಪಡಿ... ತಹಸೀಲ್ದಾರ್ ಮೇಲೆ ಜಿಲ್ಲಾಧಿಕಾರಿ ಹಾ... ಮೇಲಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳದಿ... ಬಗ್ಗೆ ಹೈಕೋರ್ಟ್ ನ್ಯಾಯಾಧೀಶರು ಸಿಡಿ... ಗೊಂಡಿದ್ದಾರೆ. ಡಿಸಿ ಮತ್ತು ಮೇಲಧಿಕಾರಿ... ತಹಸೀಲ್ದಾರ್ ಮೇಲೆ ಕ್ರಮ ಕೈಗೊಳ್ಳದಿರು... ದರಿಂದಲೇ ರಿಟ್ ನ್ಯಾಯಾಲಯಕ್ಕೆ ಸಲ್ಲಿಕೆ ಆಗುವ... ಗಿದೆ. ಇದರಿಂದ ನ್ಯಾಯಾಲಯದ ಸಮ... ವ್ಯರ್ಥವಾಗಿದೆ ಎಂದು ನ್ಯಾಯಾಧೀಶರು ಹೇಳಿದ...


ಶಿವರಾಮ ಹೆಬ್ಬಾರ್


ಆರ್.ವಿ. ದೇಶಪಾಂಡೆ


ಜಯಮ್ಮ ಹೀರಳ್ಳಿ

ಈಗ ಜಿಪಂ ಅಧ್ಯಕ್ಷೆಯಾಗಿರುವ ಜಯಶ್ರೀ ಮೊಗೇರ್ ನೈಜ ದಲಿತಳಲ್ಲ ಎಂಬ ಕೂಗು ಆರಂಭದಿಂದಲೂ ಕೇಳಿಬಂದಿತ್ತು. ಈ ಖೋಟಾ ಪರಿಶಿಷ್ಟಗಳ ಬದಲಿಗೆ ಅಸಲಿ ದಲಿತರಾದ ಮುಂಡಗೋಡದ ಜಯಮ್ಮ ಹೀರಳ್ಳಿಯನ್ನು ಅಧ್ಯಕ್ಷರಾಗಿಸಬೇಕೆಂದು ದಲಿತ ಸಂಘಟನೆಯವರು ಕಾಂಗ್ರೆಸ್‌ನ ಬಹುಸಂಖ್ಯಾತ ಕಾರ್ಯಕರ್ತರು ದೇಶಪಾಂಡೆಯಲ್ಲಿ ಪರಿಪರಿಯಾಗಿ ವಿನಂತಿಸಿದ್ದರು. ಆದರೆ ಹೆಬ್ಬಾರ್‌ನನ್ನು ಹಣಿಯುವ ಒಂದೇ ಒಳಉದ್ದೇಶದಿಂದ ದೇಶಪಾಂಡೆ ಪಕ್ಕಾ ದಲಿತಳಿಗೆ ಅನ್ಯಾಯ ಮಾಡಿಬಿಟ್ಟರು. ವಿರೋಧಿ ಬಳಗದಲ್ಲಿದ್ದರೂ ಹುಂಬ ಮಂಕಾಳ್ ವೈದ್ಯನನ್ನಾದರೂ ದೇಶಪಾಂಡೆ ಹತ್ತಿರ ಬಿಟ್ಟುಕೊಳ್ಳುತ್ತಾರೆ; ಹೆಬ್ಬಾರ್‌ನನ್ನು ಮಾತ್ರ ಯಾವ ಹಂತದಲ್ಲೂ ನಂಬುವ ಸ್ಥಿತಿಯಲ್ಲಿಲ್ಲ. ಮೀನುಗಾರ ಪಂಗಡಕ್ಕೆ ಸೇರಿದ ಜಯಶ್ರೀ ಖೋಟಾ ದಲಿತ ಸರ್ಟಿಫಿಕೇಟ್ ಪಡೆದ ಪುರಾಣ ಗೊತ್ತಿದ್ದೂ ಕಂತ್ರಿ ರಾಜಕಾರಣಕ್ಕಾಗಿ ದೇಶಪಾಂಡೆ ಆಕೆಯನ್ನು ಜಿಪಂ ಗದ್ದುಗೆಗೆ ಏರಿಸಿದ್ದು ಈಗ ದೊಡ್ಡ ಭಾನ್ಗಡಿ ಆಗುವ ಸಕಲ ಸಂಕೇತ ಬಿತ್ತರವಾಗುತ್ತಿದೆ....

ಮೀನುಗಾರಿಕೆ ಕುಲಕಸುಬಾಗಿಸಿಕೊಂಡಿರುವ 'ಮೊಗೇರ್' ಎಂಬ ಜಾತಿಯ ಜನರು ಉತ್ತರ ಕನ್ನಡದಲ್ಲಿದ್ದಾರೆ. ದಕ್ಷಿಣ ಕನ್ನಡದ ಸುಳ್ಯ-ಕೊಡಗು ಗಡಿಯಲ್ಲಿ ಹಾಗೂ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲದಲ್ಲಿ ಬುಟ್ಟಿ ಹೆಣೆದು-ಮೊಲಗಳ ಬೇಟೆಯಾಡಿ ಬದುಕುವ 'ಮುಗೇರಾ' ಎಂಬ ಜನ ಜಾತಿಯಿದೆ. ಉತ್ತರ ಕನ್ನಡದ ಮೊಗೇರರು ಪ್ರವರ್ಗ-1ಕ್ಕೆ ಸೇರಿದ್ದರೆ, ಕೊಳ್ಳೆಗಾಲದ ಮುಗೇರರು ಪರಿಶಿಷ್ಟ ವರ್ಗದ ಮೀಸಲಾತಿ ಪಟ್ಟಿಯಲ್ಲಿದ್ದಾರೆ. ಉತ್ತರ ಕನ್ನಡದ

ಅದಿರಲಿ, ಕಳೆದೊಂದು ದಶಕದಿಂದ ಸಾಮಾಜಿಕ ಮತ್ತು ಕಾನೂನಾತ್ಮಕವಾಗಿ ಮೊಗೇರರ ವಂಚನೆ ವಿರುದ್ಧ ಪ್ರತಿಭಟನೆ-ಹೋರಾಟಗಳು ನಡೆಯುತ್ತಲೇ ಇದೆ. ಹಲವು ನ್ಯಾಯಾಂಗ, ಆಡಳಿತಾಂಗದ, ಶಾಸಕಾಂಗದ ತನಿಖೆ-ವಿಚಾರಣೆ, ಹಿಯರಿಂಗ್ ನಡೆದು ಮೊಗೇರರು ದಲಿತರಲ್ಲ ಎಂಬ ತೀರ್ಪು ಬಂದಿದೆ. ಮೊಗೇರ ಮತ್ತು ಮುಗೇರಾ ನಡುವೆ ಯಾವ ಸಾಮ್ಯತೆಯೂ ಇಲ್ಲ. ಆಚಾರ-ವಿಚಾರ, ಉಡುಗೆ-ತೊಡುಗೆ, ಧಾರ್ಮಿಕ-ಸಾಮಾಜಿಕ, ಆಚರಣೆ-ಸಂಪ್ರದಾಯ, ಮದುವೆ, ಶಿಕ್ಷಣ, ಉದ್ಯೋಗ.... ಹೀಗೆ ಯಾವುದರಲ್ಲೂ ಹೋಲಿಕೆಯೇ ಇಲ್ಲ. ಈ ಕಾರಣದಿಂದ ಮೈಸೂರಿನ ಡಾ. ಬಿ.ಆರ್. ಅಂಬೇಡ್ಕರ್ ಕುಲ ಶಾಸ್ತ್ರೀಯ ಅಧ್ಯಯನ ಸಂಸ್ಥೆ ಮೈಸೂರು ಹಾಗೂ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರೂ ಉತ್ತರ ಕನ್ನಡ ಮೊಗೇರರು ಪರಿಶಿಷ್ಟರಲ್ಲ; ಅವರೇನಿದ್ದರೂ ಪ್ರವರ್ಗ-1ಕ್ಕೆ ಸೇರಿದವರೆಂದು ಸರ್ಕಾರಕ್ಕೆ ದೊಡ್ಡದೊಂದು ವರದಿ ನೀಡಿದೆ. ನ್ಯಾಯಾಲಯಗಳಲ್ಲೂ ಇಂಥದೇ ಅಭಿಪ್ರಾಯ ವ್ಯಕ್ತವಾಗಿದೆ.

ಆಗ ಸರ್ಕಾರ ಅನಿವಾರ್ಯವಾಗಿ ಎಚ್ಚೆತ್ತುಕೊಳ್ಳಬೇಕಾಯ್ತು. ಉತ್ತರ ಕನ್ನಡ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ ಜಿಪಂ ಅಧ್ಯಕ್ಷೆ ಜಯಶ್ರೀ ಗುರುದಾಸ ಮೊಗೇರ ಸೇರಿದಂತೆ ಇತರ 11 ಮಂದಿ ಮೊಗೇರ ಜನಾಂಗದವರು ಪಡೆದ ಪರಿಶಿಷ್ಟ ಜಾತಿ ಪ್ರಮಾಣಪತ್ರ ರದ್ದು ಮಾಡುವಂತೆ ಶಿಫಾರಸ್ಸು ಮಾಡಿತು. ತಕ್ಷಣಕ್ಕೆ ಜಿಲ್ಲಾಧಿಕಾರಿ ಸದರಿ ನಕಲಿ ಪ್ರಮಾಣಪತ್ರಗಳನ್ನು ರದ್ದು ಪಡಿಸುವಂತೆ ಭಟ್ಕಳದ ತಹಸೀಲ್ದಾರ್‌ಗೆ ಆದೇಶಿಸಿದ್ದಾರೆ.

ನ್ಯಾಯಾಲಯದ ನಡವಳಿಕೆ, ಜಾತಿ ಪರಿಶೀಲ... ಸಮಿತಿಯ ಆದೇಶ, ದಲಿತ ಸಂಘಟನೆಗಳ ಸತತ ಹೋರ... ಸೂಕ್ಷ್ಮವಾಗಿ ಅವಲೋಕಿಸಿದರೆ ಇಂದಲ್ಲ ನಾಳೆಯಾದರ... ಜಿಪಂ ಅಧ್ಯಕ್ಷ ಜಯಶ್ರೀ ಮೊಗೇರ್‌ರ ಖೋಟಾ ಜಾ... ಪ್ರಮಾಣ ಪತ್ರ ರದ್ದಾಗದೇ ಇರದು ಅನ್ನಿಸುತ್ತದೆ. ಜಯ... ಗೂಟದ ಕಾರಿಂದ ಇಳಿವ ದಿನ ದೂರವೇನಿಲ್ಲ. ದುರ... ವೆಂದರೆ, ತಲೆ ಮಾಸಿದ ಸ್ವಯಂಘೋಷಿತ ಸೀನಿಯ... ಪಾಲಿಟಿಸಿಯನ್ ದೇಶಪಾಂಡೆ ಗೊತ್ತಿದ್ದೂ ಗೊತ್ತಿದ್ದೂ ಸ್ವಾ... ರಾಜಕೀಯಕ್ಕಾಗಿ ನಿಜ ದಲಿತರಿಗೆ ಅನ್ಯಾಯ ಮಾ... ಅಪರಾಧಿ ಸ್ಥಾನದಲ್ಲಿ ನಿಂತು ಒದ್ದಾಡುತ್ತಿದ್ದಾರೆ. ಶಾ... ಮಂಕಾಳು ವೈದ್ಯನ ಮೊಂಡುತನವಂತೂ ದಿನಕ್ಕೊಂ... ಆಯಾಮ ಪಡೆಯುತ್ತ ಭಟ್ಕಳ-ಹೊನ್ನಾವರ ಕ್ಷೇತ್ರಕ್ಕೆ ಪುಕ... ಮನರಂಜನೆ ನೀಡುತ್ತಿದೆ.

ಈ ಮೀಸಲಾತಿ ಮೋಸ ಪ್ರಕರಣದಲ್ಲಿ ಇಡೀ ಜಿಲ್ಲೆ... ದೃಷ್ಟಿ ಮೊನೆ ನಾಟಿರುವುದು ಖಡಕ್ ಜಿಲ್ಲಾಧಿಕಾರಿ ಎಂ... ಹುಸಿ ಇಮೇಜಿನ ಉಜ್ವಲ್‌ಕುಮಾರ್ ಘೋಷ್ ಮೇ... ನಿಷ್ಠೂರ-ಪ್ರಾಮಾಣಿಕ-ಪಾರದರ್ಶಕ ಡಿಸಿ ತಾನೆಂ... ಗೆಟಪ್‌ನಲ್ಲಿ ಓಡಾಡುವ ಘೋಷ್‌ಗೆ ಜುಜು... ತಹಸೀಲ್ದಾರ್‌ನಿಂದ ನಕಲಿ ಎಸ್‌ಸಿ ಸರ್ಟಿಫಿಕೇಟ್‌ಗಳ... ರದ್ದು ಮಾಡಿಸಲಾಗದಿರುವುದು ನಾಚಿಕೆಗೇಡು. ಅಕ್ರಮ... ಕೆಲಸ ಮಾಡಿಸುವ ಮಂತ್ರಿ ಶಾಸಕನಿಗೆ ಬಗ್ಗದ ಡಿಸಿಯ... ಈತ? ಸಂವಿಧಾನದ ಸಮಾನತೆ ತತ್ವದ ಪರಿಪಾಲನೆಯ... ಪರಿಯಾ ಇದು?

■ ನಮುಷ...

ಹರಿಹರ: ಅಲೆಮಾರಿ ಹರೀಶನ ಪೊಲಿಟಿಕಲ್ ಚೇಷ್ಟೆಗಳು

ನರ್ಸ್ ರೇಣುಕನೇ ಯಡ್ಡಿಯ ಬಲಗೈ ಅನ್ನೋ ಮಾತು ಚಾಲ್ತಿಯಲ್ಲಿದ್ದ ಸಮಯದಲ್ಲಿ ಅದೇ ಯಡ್ಡಿಯ 'ಎಡಗೈ' ಆಗಿ ಬಿಜೆಪಿಗಳು ಗುರುತಿಸುತ್ತಿದ್ದದು ಹರಿಹರದ ಬಿಪಿ ಹರೀಶನನ್ನು. ಅಷ್ಟರಮಟ್ಟಿಗೆ ಈತ ಯಡ್ಡಿಯ ಅಪ್ಪಟ ಶಿಷ್ಯ. ಬಿಜೆಪಿಯನ್ನೇ ಧಿಕ್ಕರಿಸಿ ಯಡ್ಡಿ ಹೊರಬಂದು ಕೆಜೆಪಿಯನ್ನು ಕಟ್ಟಿದಾಗ ಆತನ ಬಾಲದಂತೆ ಅಲ್ಲಿಗೂ ಬಂದುನಿಂತು ಹರಿಹರದ ಜನರ ಕೈಲಿ 'ತೆಂಗಿನಕಾಯಿ' ಎರಡು ಹೋಳಾಗುವಂತೆ ಹೊಡೆಸಿಕೊಳ್ಳುವಷ್ಟರ ಮಟ್ಟಿಗೆ ಅವನ ಸ್ವಾಮಿನಿಷ್ಠೆ ಮುಡಿಪಾಗಿತ್ತು. ಅಂಥಾ ಹರೀಶನನ್ನೇ ಕ್ಯಾರೇ ಎನ್ನದೆ ಯಡ್ಡಿ ಯಾವಾಗ ಮೋದಿ 'ಜ(ನ)ಪ್' ಮಾಡುತ್ತಾ ಮತ್ತೆ ಬಿಜೆಪಿಗೆ ಬಂದು ನಿಂತನೋ ಆಗಿನಿಂದ ಬಿಪಿ ಹರೀಶನ ಪೊಲಿಟಿಕಲ್ ಬೀಪಿಯೇ ಯರ್ರಾಬಿರ್ರಿ ಇಳಿದುಹೋಗುತ್ತಿದೆ. ಈಗಾತ ಯಾರಿಗೂ ಬೇಡವಾದ ಗುಜುರಿ ಐಟಮ್ಮು!


ಒಮ್ಮೆ ಸಿಪಿಐ, ಮತ್ತೆರಡು ಬಾರಿ ಕಾಂಗ್ರೆಸ್, ಇನ್ನೆರಡು ಬಾರಿ ಬಿಜೆಪಿ, ಒಮ್ಮೆ ಕೆಜೆಪಿ ಅಂತ ಪಕ್ಷದಿಂದ ಪಕ್ಷಕ್ಕೆ ಜೀಕಾಡುವುದನ್ನೇ ತನ್ನ ಖಯಾಲಿಸಿಯಾಗಿಸಿಕೊಂಡಿರೋ ಹರೀಶನ ತಂದೆ ದಿ|| ಬಸವನಗೌಡರು ಸಮಾಜಮುಖಿ ರಾಜಕಾರಣಿ ಆಗಿದ್ದರು ಮಾತ್ರವಲ್ಲ, ದಾವಣಗೆರೆ ಕಾರ್ಮಿಕವರ್ಗದ ನಾಯಕರಾಗಿ, ಎಡಪಂಥೀಯ ಚಿಂತಕರಾಗಿ ಭಾರತ ಕಮ್ಯುನಿಸ್ಟ್ ಪಾರ್ಟಿಯ ಸಕ್ರಿಯ ಕಾರ್ಯಕರ್ತರಾಗಿ ಜನಮೆಚ್ಚುಗೆ ಪಡೆದಿದ್ದವರು ಅಂದರೆ ಎಂತವರಿಗೂ ಅಚ್ಚರಿಯಾಗದಿರದು. ಅಂತವರ ಹೊಟ್ಟೆಯಲ್ಲಿ ಇಂಥಾ ಮಗನೇ?


ಹರೀಶನ 'ಕೈ' ಜಂಪ್

ಅಪ್ಪನ ಹಾದಿಯಲ್ಲೇ ಹೆಜ್ಜೆ ಶುರುಮಾಡಿದ ಹರೀಶ್ ಕೂಡ ಒಂದಷ್ಟು ದಿನ ಸಿಪಿಐ ಪಾರ್ಟಿಯಲ್ಲಿ ಕಾಲಕಳೆದು ನಂತರ ಕೈಪಾರ್ಟಿಗೆ ವಲಸೆ ಹೋಗುವ ಮೂಲಕ ಪರದಾಟ ರಾಜಕಾರಣಕ್ಕೆ ಮುನ್ನುಡಿ ಬರೆದುಕೊಂಡಿದ್ದ. ಹಾಗೆ ನೋಡಿದರೆ ದಾವಣಗೆರೆಯ ಸಮಸ್ತ ಕೈ ಪಾರ್ಟಿ ಶಾಮನೂರು ಶಿವಶಂಕರಪ್ಪ ಎಂಬ ಸಾಧು ಲಿಂಗಾಯತ ಕಮ್ ಶಿಕ್ಷಣ ವ್ಯಾಪಾರಿಯ ಬಂಧನದಲ್ಲಿತ್ತು. ಅಂಥಾ ಸಂದರ್ಭದಲ್ಲಿ ಹರೀಶ್‌ನಂತ ಕಾಂಜಿಪಿಂಜಿಗಳು ಮೊಣಕಾಲು ನೋವಿಡಿಯುವವರೆಗೂ ತೆಪ್ಪಗೆ ಚಕ್ಕಳಮಕ್ಕಳ ಕುಂತಿರುವುದಷ್ಟೇ ಆಗಿತ್ತು. 70ರ ದಶಕದಿಂದ ಹೆಚ್ಚೂಕಮ್ಮಿ 2000ರ ತನಕ ಶಿವಶಂಕರಪ್ಪನವರ ಕುಟುಂಬದ ಪಕ್ಕಾ ಆಸ್ತಿಯಾಗಿತ್ತು ಕೈ ಪಾರ್ಟಿ. ಈ ಹರೀಶ್ ಸಿಪಿಐ ಪಾರ್ಟಿ ಬಿಟ್ಟು ಅಪ್ಪನ ಆದರ್ಶ, ಬದ್ಧತೆಯ ಗಟ್ಟಿ ರಾಜಕಾರಣವನ್ನು ಬದಿಗೊತ್ತಿ ಶಾಮನೂರು ಶಿವಶಂಕರಪ್ಪ ಅಂಡ್ ಸನ್ಸ್ ಕೈಪಾರ್ಟಿಗೆ ಎಂಟ್ರಿ ಕೊಟ್ಟವನು ಅಜಮಾಸು ದಶಕಗಳಿಂದ ಕೈಪಾರ್ಟಿಯಲ್ಲಿ ನಿರಾಶ್ರಿತ ರಾಜಕಾರಣಿಯಂತೆ ಕಾಲಕಳೆದಿದ್ದ. ತಾನೂ ಕೂಡಾ ಶಾಮನೂರು ಶಿವಶಂಕರಪ್ಪನವರ ಸಾಧು ಲಿಂಗಾಯತ ಜಾತಿಗೆ ಸೇರಿರುವುದರಿಂದ ಧಣಿಗಳು ತನಗೊಂದು ರಾಜಕೀಯ ಬುನಾದಿ ಹಾಕಿಕೊಡಬಹುದೆನ್ನುವ ದೂರಾಲೋಚನೆಯ ಕನಸು ಹರೀಶನದಾಗಿತ್ತು, ಆದರೆ ಯಾವಾಗ ತನ್ನೆದುರಿನ ಹುಡುಗ ಮಲ್ಲಿಕಾರ್ಜುನ್ (ಶಿವಶಂಕರಪ್ಪನ ಮಗ) 1999ರಲ್ಲಿ ಶಾಸಕರಾಗಿ ಮಂತ್ರಿಯೂ ಆದರೋ ಆಗ ಇಲ್ಲಿ ಸ್ವಜಾತಿಯವರಿಗೂ ರಾಜಕೀಯ ಎಟಕುವುದಿಲ್ಲ, ಎಟಕಲು ಶಾಮನೂರು ಧಣಿ ಬಿಡುವುದಿಲ್ಲ, ಅವರಿಗೆ ತಮ್ಮ ಫ್ಯಾಮಿಲಿಯ ಹೊರತಾಗಿ ಮತ್ಯಾರೂ ಬೆಳೆಯುವ ಜರೂರಿಲ್ಲ ಅನ್ನೋದು ಹರೀಶನಿಗೆ ಅರ್ಥವಾಗಿತ್ತು. ಅಲ್ಲಿಂದ ಹೊರಬಂದು ಹರೀಶ ಬಿಜೆಪಿಯ ಯಡ್ಡಿಯನ್ನು ಹಿಂಬಾಲಿಸಿಹೊರಟ.

ದಾವಣಗೆರೆಯ ಸಾಧು ಲಿಂಗಾಯತರೂ ಶಿವಶಂಕರಪ್ಪನ ಕುಟುಂಬ ರಾಜಕಾರಣವನ್ನು ಕಂಡು ಒಳಗೊಳಗೇ ಕುದಿಯುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಯಡ್ಡಿ ಬಿಜೆಪಿ ರಥವನ್ನು ಭರ್ಜರಿಯಾಗಿ ಎಳೆದಾಡುತ್ತಾ ದಾವಣಗೆರೆ ನಡುಮನೆಗೇ ತಂದುನಿಲ್ಲಿಸಿಬಿಟ್ಟ. ಆಗಲೇ ದಾವಣಗೆರೆಯ ಹರೀಶ್, ಚನ್ನಗಿರಿಯ ಮಾಡಾಳು ವಿರುಪಾಕ್ಷಪ್ಪ, ಜಗಳೂರಿನ ಎಸ್.ವಿ.ರಾಮಚಂದ್ರ, ಮಾಯಕೊಂಡದ ಬಸವರಾಜ ನಾಯ್ಕನಂತವರು ಯಡ್ಡಿಯ ಚೆಡ್ಡಿ ಹಿಡಿದು ಕಮಲ ಪಾಳಯಕ್ಕೆ ಬಂದುನಿಂತದ್ದು.


2008ರ ಚುನಾವಣೆಯನ್ನು ಕೆದಕಿ ನೋಡಿದರೆ ಇಡೀ ಚುನಾವಣೆ ನಡೆದದ್ದೇ ಸಿಂಗಲ್‌ಲೈನ್ ಅಜೆಂಡಾದ ಮೇಲೆ; ಅದು ಯಡ್ಯೂರಪ್ಪನ ಕಣ್ಣೀರಿನ 'ಸಿಂಪಥಿ ಅಜೆಂಡಾ'. ಅಂತಾ ಯಡ್ಡಿಯ ನೆರಳಲ್ಲಿ ನಿಂತ ಇವರೆಲ್ಲ ಶಾಸಕರಾಗಿ ಗೆದ್ದುಬಂದು ಬಿಜೆಪಿಯಲ್ಲಿ ಗುರುತಿಸಿಕೊಂಡರು. ಹರೀಶನಂತೂ ಒಂದುಕೈ ಮುಂದೆಹೋಗಿ ಯಡ್ಡಿಯ ಎಡಗೈ ಬಂಟನಂತೆ ಬೆಳೆಯತೊಡಗಿದ. ಯಡ್ಡಿಯ ಪೊಲಿಟಿಕಲ್ ಪ್ರಭಾವಳಿಯಲ್ಲಿ ಮಿಂಚುವ ಭರಾಟೆಯಲ್ಲಿ ಹರೀಶ, ಹರಿಹರವನ್ನೇ ಸಂಪೂರ್ಣವಾಗಿ ನಿರ್ಲಕ್ಷಿಸಿಬಿಟ್ಟ. ತುಂಗಭದ್ರಾ ನದಿಪಾತ್ರದ ಅಕ್ರಮ ಮರಳುದಂಧೆಯ ದಗಾಕೋರರಿಗೆ ರಕ್ಷಣೆ ನೀಡಿದ್ದು ಬಿಟ್ಟರೆ ಮತ್ಯಾವ ಘನಂದಾರಿ ಕೆಲಸವೂ ಆತನಿಂದ ಆಗಲಿಲ್ಲ.



ಬಿ.ಪಿ. ಹರೀಶ್



ಯಡ್ಡಿಯೂರಪ್ಪ

ಅಷ್ಟೊತ್ತಿಗಾಗಲೇ ಹರಿಹರದ ಬಿಜೆಪಿಯೊಳಗೇ ಶಾಸಕ ಹರೀಶನ ವಿರುದ್ಧದ ದನಿ ಎದ್ದಿತ್ತು. 2013ರ ಚುನಾವಣೆಗೆ ಹರೀಶನಿಗೆ ಮತ್ತೆ ಟಿಕೆಟು ನೀಡಬಾರದೆಂದು ಹರಿಹರ ಬಿಜೆಪಿ ಘಟಕವು ಜಿಲ್ಲಾ ನಾಯಕರಿಗೆ ಖಡಕ್ಕಾಗಿ ಸಂದೇಶ ರವಾನಿಸುವಷ್ಟರಮಟ್ಟಿಗೆ ಹರೀಶ 'ಲೋಕಲ್ ವಿಲನ್' ಆಗಿಬಿಟ್ಟಿದ್ದ.

ಹರೀಶನ ಸುಯೋಗ ಅನ್ನಬೇಕೊ, ಏನೊ, ಯಾವಾಗ ಆತನ ವಿರುದ್ಧ ಹರಿಹರದ ಬಿಜೆಪಿ ವಲಯದಲ್ಲೇ ಅಸಮಾಧಾನ ಭುಗಿಲೆದ್ದಿತೊ, ಅದೇ ಸಮಯಕ್ಕೆ ಅತ್ತ ಯಡ್ಡಿಯೂ ತನ್ನ ಭ್ರಷ್ಟಾಚಾರ, ಡಿನೋಟಿಫಿಕೇಷನ್, ಜೈಲುವಾಸಗಳಿಂದ ಬಿಜೆಪಿಗೆ ಬೇಡವಾಗಿದ್ದ. ತನಗಾದ ಅವಮಾನಕ್ಕೆ ಸೆಡ್ಡು


ಎಸ್.ಎಸ್. ಮಲ್ಲಿಕಾರ್ಜುನ್


ಶಾಮನೂರು


ರೇಣುಕಾಚಾ

ಹೊಡೆಯುವಂತೆ ಬಿಜೆಪಿಯಿಂದ ಹೊರಬಂದ ಯಡ್ಡಿ ಕೆಜೆಪಿ ಕಟ್ಟಿ ರಣಕಹಳೆ ಊದಿದ್ದೇ ತಡ ಹರೀಶನೂ ಮೊದಲ ಸಾಲಿನ ಸಿಪಾಯಿಯಂತೆ ಕೆಜೆಪಿಗೆ ನೆಗೆದುಕೊಂಡಿದ್ದ. ಯಡ್ಡಿಯ ಜಾತಿಬಲದಲ್ಲೇ 2013ರ ಎಂಎಲ್‌ಎ ಎಲೆಕ್ಷನ್‌ಗೆ ಸ್ಪರ್ಧಿಸಿದ್ದ ಹರೀಶನನ್ನು ಹರಿಹರದ ಜನ ಅದೆಷ್ಟು ಹೀನಾಯವಾಗಿ ಸೋಲಿಸಿದರೆಂದರೆ ಹಾಲಿ ಶಾಸಕ ಅನ್ನೋ ಕನಿಷ್ಠ ಕಿಮ್ಮತ್ತೂ ಸಿಗದೆ ಹರೀಶ ಗಳಿಸಿದ್ದು ಜಿಜುಬಿ ಐದು ಸಾವಿರ ಓಟುಗಳನ್ನು ಮಾತ್ರ!

ಯಡ್ಡಿಯ ರೀ 'ಜಂಪ್'

2013ರ ಚುನಾವಣಾ ಫಲಿತಾಂಶ ಹೊರಬಿದ್ದಿದ್ದೇ ತಡ, ಯಡ್ಡಿಯ ಭ್ರಮಾಗೋಪುರ ದಬೇಲನೇ ಮಗುಚಿಕೊಂಡಿತ್ತು. ಆದರಡಿ ಸ್ವತಃ ಯಡ್ಡಿಯೇ ನಜ್ಜುಗುಜ್ಜಾಗಿ ಹೋದಮೇಲೆ ಪಾಪ, ಹರೀಶನ ಪಾಡು ಕೇಳಬೇಕೆ? ಕರ್ನಾಟಕದ ಮಟ್ಟಿಗೆ ಹೊಸಪಕ್ಷ ಕಟ್ಟೋ ಆಟ ನಡೆಯೋಲ್ಲ ಅಂತ ಖಾತ್ರಿ ಮಾಡಿಕೊಂಡ ಯಡ್ಡಿ 2014ರ ಪಾರ್ಲಿಮೆಂಟ್ ಚುನಾವಣೆಯ ವೇಳೆಗೆ ಹೊಸದೊಂದು ನವರಂಗಿ ಆಟ ಶುರು ಮಾಡಿಕೊಂಡ. 'ದೇಶಕ್ಕೆ ಮೋದಿ ಅನಿವಾರ್ಯವಾಗಿದ್ದು ದೇಶದ ಒಳಿತಿಗಾಗಿ ನಾನು ಮೋದಿಯ ಸ್ನೇಹಕ್ಕೆ ಕಟ್ಟುಬಿದ್ದು ಬಿಜೆಪಿಗೆ ವಾಪಸಾಗುತ್ತೇನೆ' ಅನ್ನೋ ಸಮಯಸಾಧಕ ಸ್ಲೋಗನ್ ಹರಿಬಿಟ್ಟ ಯಡ್ಡಿ ಸೀದಾ ಕಮಲ ಪಾಳಯಕ್ಕೆ ಬಂದು ನಿಂತ. ತನ್ನ ರಾಜಕೀಯ ಬದುಕು ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿದ್ದರಿಂದ ಯಡ್ಡಿ ಬೇರಾರ ಬಗ್ಗೆಯೂ ಕೇರ್ ಮಾಡಲಿಲ್ಲ, ತಾನೇ ಕಟ್ಟಿದ್ದ ಕೆಜೆಪಿಯನ್ನೇ ಬಿಜೆಪಿಗೆ ಅಡವಿಟ್ಟು ಬಂದು ದಬಾಕಿಕೊಂಡ. ಯಡ್ಡಿಯನ್ನು ನಂಬಿ ಕೆಜೆಪಿಗೆ ಹೋದವರು ಅಕ್ಷರಶಃ ಅತಂತ್ರರಾದರು. ಅವರಲ್ಲಿ ಯಡ್ಡಿಯ ಒಂದು ಕಾಲದ ಎಡಗೈ ಅರ್ಥಾತ್ ಬಿಪಿ ಹರೀಶ ಕೂಡಾ ಒಬ್ಬನಾಗಿದ್ದ!

ಹರೀಶ್ ಕಂಗಾಲಾಗಿಹೋದ. ನಂಬಿದ್ದ ಯಡ್ಡಿ ಹೀಗೆ ನಡುನೀರಿನಲ್ಲಿ ಕೈಕೊಡುತ್ತಾರೆಂದು ಆತ ಊಹಿಸಿಯೇ ಇರಲಿಲ್ಲ. ಅಸಲಿಗೆ ಯಡ್ಡಿ ಕೆಜೆಪಿ ಕಟ್ಟಿದಾಗ ದಾವಣಗೆರೆ ಜಿಲ್ಲೆಯಲ್ಲಿ ಆತನನ್ನು ಹಿಂಬಾಲಿಸಿದ್ದು ಇಬ್ಬರೇ; ಒಬ್ಬ ನರ್ಸ್ ರೇಣುಕಾ, ಮತ್ತೊಬ್ಬ ಹರೀಶ. ಎಸ್.ಎ. ರವೀಂದ್ರನಾಥ, ಬಸವರಾಜ ನಾಯ್ಕ, ಕರುಣಾಕರ ರೆಡ್ಡಿ, ಎಸ್.ವಿ.ರಾಮಚಂದ್ರ ಇವರ್ಯಾರೂ ಯಡ್ಡಿಯ ಹಿಂದೆಬಿದ್ದು ಕೆಜೆಪಿಗೆ ಹೋಗಿರಲಿಲ್ಲ. ಯಡ್ಡಿ ವಂಚನೆಯಿಂದ ದಾವಣಗೆರೆ ಜಿಲ್ಲಾ ಬಿಜೆಪಿಯಲ್ಲಿ ಹರೀಶ್ ಏಕಾಂಗಿಯಾದ.

ಧಣಿಗಳ 'ಸಂಬಂಧವೂ ಸಿಕ್ಕಲಿಲ್ಲ


ಆಗ ಹಳೇ ಗಂಡನ ಪಾದವೇ ಗತಿ ಎಂಬಂತೆ ಹರೀಶ ಬಂದು ಬಿದ್ದದ್ದು ಅದೇ ಶಾಮನೂರು ಧಣಿಯ ಕೊಟ್ಟಿಗೆಯೊಳಕ್ಕೆ. ಅದುವರೆಗೆ ಯಡ್ಡಿ ಪರ ವಕಾಲತ್ತು ವಹಿಸಿಕೊಂಡು ಶಾಮನೂರು ಕುಟುಂಬವನ್ನು ಹೀನಾಮಾನ ಬೈದಾಡುತ್ತಿದ್ದ ಹರೀಶ ಹಠಾತ್ತನೆ ಕಾಂಗ್ರೆಸ್ ಸೇರಿಕೊಂಡಿದ್ದರ ಹಿಂದೆ ಎರಡು ಅಂತೆಕಂತೆಗಳು ತೇಲಿಬಂದಿದ್ದವು. 2014ರ ಪಾರ್ಲಿಮೆಂಟ್ ಚುನಾವಣೆಗೆ ಕೈಪಾರ್ಟಿಯಿಂದ ಎಸ್.ಎಸ್. ಮಲ್ಲಿಕಾರ್ಜುನ್ ಸ್ಪರ್ಧಿಸುತ್ತಿದ್ದು ಆತ ಗೆದ್ದರೆ ಆದರಿಂದಾಗಿ ತೆರವಾಗುವ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರಕ್ಕೆ (2013ರ ಎಂಎಲ್‌ಎ ಚುನಾವಣೆಯಲ್ಲಿ ದಾವಣಗೆರೆ ಉತ್ತರದಿಂದ ಗೆದ್ದು ಮಲ್ಲಿಕಾರ್ಜುನ್ ಶಾಸಕರಾಗಿದ್ದರು) ಹರೀಶನಿಗೆ ಟಿಕೆಟು ಕೊಟ್ಟು ಗೆಲ್ಲಿಸಿಕೊಳ್ಳಲಾಗುತ್ತಂತೆ ಅನ್ನೋ ವರ್ತಮಾನ ಒಂದುಕಡೆಯದ್ದಾದರೆ, ಮತ್ತೊಂದು ತುದಿಯಿಂದ ತೀರಾ ಖಾಸಗಿ ಬಾಂಧವ್ಯ ಏರ್ಪಡುವ ಊಹಾಪೋಹಗಳೂ ಕೇಳಿಬಂದಿದ್ದವು. ಹರೀಶನಿಗೆ ಇಂಜಿನಿಯರಿಂಗ್ ಓದಿದ ಮಗನಿದ್ದಾನೆ. ಅವನಿಗೆ ಶಾಮನೂರು ಶಿವಶಂಕರಪ್ಪನ ಮೊಮ್ಮಗಳನ್ನು ತಂದುಕೊಳ್ಳುವ ಇರಾದೆಯಿತ್ತು ಎನ್ನಲಾಗುತ್ತಿತ್ತು.

ಆದರೆ ಅಷ್ಟರಲ್ಲಾಗಲೆ ಹರೀಶನ ನಸೀಬು ಅದೆಷ್ಟು ಗಬ್ಬೆದ್ದು ಹೋಗಿತ್ತೆಂದರೆ ಅತ್ತ ಎಸ್.ಎಸ್.ಮಲ್ಲಿಕಾರ್ಜುನ್ ಎಂಪಿ ಎಲೆಕ್ಷನ್‌ನಲ್ಲಿ ಗೆಲ್ಲಲೂ ಇಲ್ಲ, ಇತ್ತ ಹರೀಶನ ಮಗನ ಜೊತೆ ಮದುವೆ ಮಾಡಿಕೊಡಲಾಗುತ್ತೆ ಅನ್ನೋ ಊಹಾಪೋಹವಿದ್ದ ಶಾಮನೂರು ಶಿವಶಂಕರಪ್ಪನ ಮೊಮ್ಮಗಳ ನಿಶ್ಚಿತಾರ್ಥ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮಗನ ಜೊತೆ ಮುಗಿದೇಹೋಯ್ತು. ಅಸಲಿಗೆ, ಒಂದೊಮ್ಮೆ ಮಲ್ಲಿಕಾರ್ಜುನ್ ಪಾರ್ಲಿಮೆಂಟ್ ಕಾಳಗದಲ್ಲಿ ಗೆದ್ದಿದ್ದರೂ ದಾವಣಗೆರೆ ಉತ್ತರ ವಿಧಾನ ಸಭಾ ಕ್ಷೇತ್ರಕ್ಕೆ ಹರೀಶನನ್ನು ನಿಲ್ಲಿಸುತ್ತಿರಲಿಲ್ಲ ಅನ್ನೋದು ಚುನಾವಣೆಗು ಮೊದಲೇ ಖಾತ್ರಿಯಾಗಿತ್ತು. ತೆರವಾಗುವ ಆ ಕ್ಷೇತ್ರಕ್ಕೆ ಮಲ್ಲಿಕಾರ್ಜುನ್‌ರ ಹೆಂಡತಿ ಅಥವಾ ಶಾಮನೂರು ಶಿವಶಂಕರಪ್ಪನ ಮತ್ತೊಬ್ಬ ಮಗನನ್ನು ನಿಲ್ಲಿಸಲು ಚಟುವಟಿಕೆಗಳು ಶುರುವಾಗಿದ್ದವು!

ಧಣಿಗಳ ಕ್ಯಾಂಪಸ್‌ನಲ್ಲಿ ತನಗೆ ಆದ್ಯತೆ ಸಿಕ್ಕೋದಿಲ್ಲ ಅನ್ನೋದು ಹರೀಶನಿಗೆ ಮತ್ತೊಮ್ಮೆ ಖಾತ್ರಿಯಾಗುತ್ತಿದ್ದಂತೆಯೇ ವಿಧಿಯಿಲ್ಲದೆ ಯಡ್ಡಿಯ ಪಾದಾರವಿಂದಗಳಿಗೇ ಹರೀಶ್ ಸಾಷ್ಟಾಂಗ ಹೊಡೆದಿದ್ದಾನೆ. ಆತ ಮತ್ತೆ ಬಿಜೆಪಿಗೆ ವಾಪಾಸಾಗಿದ್ದಾನೆ. ಆದರೆ ಹತ್ತಿರದ ಭವಿಷ್ಯದಲ್ಲಿ ಆತ ಹರಿಹರದ ಶಾಸಕನಾಗುವುದಿಲ್ಲ ಅನ್ನೋದಂತೂ ಸತ್ಯ. ಯಾಕೆಂದರೆ ಬಿಜೆಪಿಯಿಂದ ಟಿಕೆಟು ಸಿಗುವುದೇ ಅನುಮಾನವಾಗಿದೆ. ಆತ ಬಿಜೆಪಿಗೆ ವಾಪಾಸಾದಾಗ ಯಾವ ಕೆಳಹಂತದ ಕಾರ್ಯಕರ್ತನೂ ಖುಷಿಯಿಂದ ಸ್ವಾಗತಿಸಲಿಲ್ಲ. 'ಬಿಪಿ ಹರೀಶ್ ಬಿಜೆಪಿ ಮರುಸೇರ್ಪಡೆ' ಅನ್ನೋ ಒನ್‌ಲೈನ್ ಸುದ್ದಿ ಲೋಕಲ್ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿದ್ದು ಬಿಟ್ಟರೆ ಹರಿಹರದಲ್ಲಿ ಆ ಬಗ್ಗೆ ಸಣ್ಣದೊಂದು ಚರ್ಚೆಯೂ ನಡೆದಿಲ್ಲ. ಒಟ್ಟನಲ್ಲಿ ಪಕ್ಷಾಂತರ ರಾಜಕಾರಣದಿಂದ ಅದೆಂತೆಂತಹ ವಿಪತ್ತುಗಳು ಕಾದಿರುತ್ತವೆಯೋ ಅದೆಲ್ಲವನ್ನೂ ಹರೀಶ ಈಗ ಅನುಭವಿಸುತ್ತಿದ್ದಾನೆ.

■ಟಿ.ಎನ್. ಷಣ್ಮುಖ

ಧಾರವಾಡ: ಸೋಲಿನಲ್ಲೇ ಖುಷಿ ಕಾಣುತ್ತಿರುವ ಕಾಂಗ್ರೆಸ್ಸಿಗರು




ಧಾರವಾಡ ಜಿಲ್ಲೆಯ ಕೈ ನಾಯಕರ ಕಿತ್ತಾಟದಿಂದಾಗಿ ಅನಾಯಾಸವಾಗಿ ದಕ್ಕಬೇಕಿದ್ದ ಜಿಲ್ಲಾ ಪಂಚಾಯತ್ ಅಧ್ಯಕ್ಷ ಗಾದಿ ಬಿಜೆಪಿ ಪಾಲಾಗುವ ಹಾದಿಯಲ್ಲಿದೆ. ಜಿಲ್ಲೆಯಿಂದ ಒಬ್ಬ ಸಚಿವ, ಒಬ್ಬ ಕ್ಯಾಬಿನೆಟ್ ದರ್ಜೆಯ ಸಂಸದೀಯ ಕಾರ್ಯದರ್ಶಿ ಇದ್ದಾಗ್ಯೂ ಜಿಲ್ಲಾ ಪಂಚಾಯತ್ ಎಲೆಕ್ಷನ್‌ನಲ್ಲಿ ಸ್ಪಷ್ಟ ಬಹುಮತವನ್ನು ಕಾಂಗ್ರೆಸ್ ಗಳಿಸಲಿಲ್ಲ ಎಂದರೆ ಅದಕ್ಕೆ ಆಂತರಿಕ ಗುಂಪುಗಾರಿಕೆಯೇ ಕಾರಣ. ಕಾಂಗ್ರೆಸ್ ಕೇವಲ 10 ಸ್ಥಾನಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಸುಸ್ತು ಹೊಡೆದರೆ ಅತ್ತ ಬಿಜೆಪಿ 11 ಸ್ಥಾನ ಗೆದ್ದು ತಾನೇ ಒಂದು ಕೈಮೇಲೆ ಅಂತ ಬೀಗುತ್ತಿದೆ. ಆದರೇನಂತೆ ಅಧಿಕಾರದ ಮ್ಯಾಜಿಕ್ ನಂಬರ್ ಎಡತಾಕಲು ಬಿಜೆಪಿಗಳಿಗೆ ಇನ್ನೂ ಒಂದು ಸ್ಥಾನದ ಕೊರತೆಯಿದೆ. ಕಡೇಪಕ್ಷ ಈಗಲಾದರೂ ಕಾಂಗ್ರೆಸ್ಸಿಗರು ಎಚ್ಚೆತ್ತುಕೊಂಡು ಒಗ್ಗಟ್ಟು ಪ್ರದರ್ಶಿಸಿದ್ದರೆ, ಅಧಿಕಾರ ಬಿಜೆಪಿಯ ಪಾಲಾಗದಂತೆ ತಡೆಯಬಹುದಾಗಿತ್ತು. ಯಾಕೆಂದರೆ ಪಕ್ಷೇತರ ಅಭ್ಯರ್ಥಿಯಾಗಿ ಬ್ಯಾಡಟ್ಟಿ ಕ್ಷೇತ್ರದಿಂದ ಗೆದ್ದು ಬಂದಿರೋ ಶಿವಾನಂದ ಕರಿಗಾರ ಬಂಡಾಯ ಕಾಂಗ್ರೆಸ್ ಅಭ್ಯರ್ಥಿ. ಆದರೆ ಕಾಂಗ್ರೆಸ್ಸಿನ ಒಳಜಗಳ ಇದನ್ನೂ ಕೈಚೆಲ್ಲಿ ಕೂತಿದೆ.


ಅಸಲಿಗೆ ಜಿಲ್ಲಾ ಪಂಚಾಯತ್ ಚುನಾವಣೆ ಘೋಷಣೆಯಾದಾಗ ಬ್ಯಾಡಟ್ಟಿ ಕ್ಷೇತ್ರದಿಂದ ಶಿವಾನಂದ ಕರಿಗಾರ ಕಾಂಗ್ರೆಸ್ಸಿನ ಟಿಕೆಟು ಕೇಳಿದ್ದ. ಗೆಲ್ಲುವ ಚಾನ್ಸ್ ಬಹಳವೇ ಇದ್ದ ಆತನಿಗೆ ಬಿ ಫಾರ್ಮ್ ಕೊಟ್ಟಿದ್ದರೆ ಇವತ್ತು ಕೈ ಅನಾಯಾಸವಾಗಿ ಅಧಿಕಾರ ಹಿಡಿಯಬಹುದಾಗಿತ್ತು. ಆದರೆ ಮಾಜಿ ಸಚಿವ ನವಲಗುಂದದ ಕೆ.ಎನ್. ಗಡ್ಡಿ ಅಡ್ಡಗಾಲು ಹಾಕಿ ಶಿವಾನಂದನಿಗೆ ಟಿಕೆಟ್ ತಪ್ಪಿಸಿದ್ದ. ಯಾಕೆಂದರೆ ಗಡ್ಡಿಯಂತೆಯೇ ಶಿವಾನಂದ ಕೂಡಾ ಕುರುಬ ಸಮುದಾಯಕ್ಕೆ ಸೇರಿದವ. ಈತನೇನಾದರು ಕ್ಷೇತ್ರದಲ್ಲಿ ಬಲಾಢ್ಯನಾಗಿ ಬೆಳೆದುನಿಂತರೆ ಮುಂದೆ ಪಕ್ಷದೊಳಗೆ ತನಗೇ ಪ್ರತಿಸ್ಪರ್ಧಿಯಾಗಬಲ್ಲ ಅನ್ನೋ ಲೆಕ್ಕಾಚಾರದಲ್ಲಿ ಗಡ್ಡಿ ಅಂತಹ ಅಡ್ನಾಡಿ ಕೆಲಸ ಮಾಡಿದ್ದ. ಅಂಥಹಾಗೆ, ಸತತ ಎರಡು ಬಾರಿ ಸೋತು ಸುಣ್ಣವಾಗಿರೋ ಗಡ್ಡಿಯ ಚಹರೆಯೇ ನವಲಗುಂದದ ಜನರಿಗೆ ಮರೆತುಹೋಗಿದೆ. ಜನ ಮತ್ತೆ ಗೆಲ್ಲಿಸುತ್ತಾರೆ ಅನ್ನುವ ಅದ್ಯಾವ ದೂರದ ಆಸೆ ಇಟ್ಟುಕೊಂಡಿದ್ದಾನೊ ಗೊತ್ತಿಲ್ಲ.

ಅವಿಭಜಿತ ಧಾರವಾಡ ಜಿಲ್ಲೆಯ ಮೇಲೆ ಸಚಿವ ಎಚ್.ಕೆ. ಪಾಟೀಲರ ಖದರು ಇದ್ದೇ ಇದೆ. ತನ್ನ ಶಿಷ್ಯ ಎಚ್.ವಿ ಮಾಡಳ್ಳಿಯನ್ನು ಧಾರವಾಡ ಜಿಲ್ಲಾ ಗ್ರಾಮೀಣ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಲ್ಲಿ ಹಾಗೂ ಮತ್ತೊಬ್ಬ ಆಪ್ತ ಮಾಜಿ ಸಚಿವ ಎ.ಎಂ. ಹಿಂಡಸಗೇರಿಯನ್ನು ಹುಬ್ಬಳ್ಳಿ-ಧಾರವಾಡ ಶಹರ ಕಾಂಗ್ರೆಸ್ ಅಧ್ಯಕ್ಷಗಿರಿಯಲ್ಲಿ ಕೂರಿಸಿರುವ ಪಾಟೀಲರು ಜಿಲ್ಲಾ ರಾಜಕಾರಣದ ಮೇಲೆ ತಮ್ಮ ಪ್ರಭಾವ ಗತಿಸಿಹೋಗದಂತೆ ಎಚ್ಚರಿಕೆಯಿಂದ ನೋಡಿಕೊಂಡಿದ್ದಾರೆ. ಆ ಮಾಡಳ್ಳಿಯ ನೆರವಿನಿಂದಲೇ ಕೆ.ಎನ್.ಗಡ್ಡಿ ಶಿವಾನಂದ ಕರಿಗಾರನಿಗೆ ಟಿಕೆಟ್ ತಪ್ಪಿಸಿದ್ದು ಈಗ ರಹಸ್ಯವಾಗೇನೂ ಉಳಿದಿಲ್ಲ.


ಜಿಲ್ಲೆಯಿಂದ ವಿನಯ್ ಕುಲಕರ್ಣಿಗೆ ಮಂತ್ರಿ ಸ್ಥಾನ ದೊರಕಿದ ದಿನದಿಂದಲೂ ಆತನ ವಿರುದ್ಧ ಶಾಸಕರಾದ ಸಿ.ಎಸ್. ಶಿವಳ್ಳಿ (ಸಂಸದೀಯ ಕಾರ್ಯದರ್ಶಿ), ವೀರಣ್ಣ ಮತ್ತಿಕಟ್ಟಿ, ಶ್ರೀನಿವಾಸ್ ಮಾನೆ, ಸಂತೋಷ್ ಲಾಡ್ (ಮಾಜಿ ಸಚಿವ) ಒಳಗಿಂದೊಳಗೆ ಕುದಿಯುತ್ತಿದ್ದಾರೆ. ಇದರಲ್ಲಿ ಎಚ್.ಕೆ. ಪಾಟೀಲರ ಪಾಲೂ ಇದೆ. ಎಚ್ಕೆ ಪಾಟೀಲರ ಗುಂಪಿಗೆ ಪರ್ಯಾಯವಾಗಿ ಡಿ.ಕೆ. ಶಿವಕುಮಾರ್ ಗುಂಪು ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಚಾಲ್ತಿಯಲ್ಲಿದೆ. ಕಾಂಗ್ರೆಸ್ ಪಾರ್ಟಿಯಲ್ಲಿ ಮುಖ್ಯಮಂತ್ರಿ ಎಲಿಮೆಂಟುಗಳು ಅಂತ ಇರೋದು ತುಂಬಾ ಕಮ್ಮಿ. ಇದ್ದುದರಲ್ಲಿ ಆ ಘನತೆ ತನಗೇ ಇ[illegible] ಅನ್ನೋ ಭ್ರಮೆಯಲ್ಲಿರುವ ಡಿ.ಕೆ.ಶಿವಕುಮಾರ್‌ಗೆ ತನ್ನ ಸಿಎಂ ಹಾದಿಗೆ ಮುಂದೊಂದು ದಿನ ಎಚ್.ಕೆ.ಪಾಟೀಲರ ಹೆಸರು ಅಡ್ಡವಾದರೂ



ವಿಜಯ್ ಕುಲಕರ್ಣಿ




ಶಿವಳ್ಳಿ



ಶಿವಾನಂದ


ಕಾಂಗ್ರೆಸ್ ಅಧ್ಯಕ್ಷಗಿರಿಗೆ ತಿಕ್ಕಾಟ



ಅನಿಲ್‌ಕುಮಾರ್

ಧಾರವಾಡ ಜಿಲ್ಲೆಯ ಗ್ರಾಮೀಣ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಗಾದಿಗಾಗಿ ತೆರೆಮರೆಯ ಕಾದಾಟ ಶುರುವಾಗಿದೆ. ಸದ್ಯದ ಅಧ್ಯಕ್ಷ ಸ್ಥಾನದಲ್ಲಿರುವ ಎಚ್ಕೆ ಪಾಟೀಲ್‌ರ ಶಿಷ್ಯ ಕಮ್ ಕುಲಬಾಂಧವ ಎಚ್.ವಿ. ಮಾಡಳ್ಳಿ ಹಾಗೂ ಎಚ್ಕೆ ಪಾಟೀಲರ ಕಟ್ಟಾ ವಿರೋಧಿಯಾದ ಅನಿಲಕುಮಾರ್ ಪಾಟೀಲ್ ನಡುವಿನ ಕಿತ್ತಾಟ ಹಾದಿರಂಪ ಬೀದಿರಂಪವಾಗಿದೆ. ಅಸಲಿಗೆ ಇದನ್ನು ಎಚ್ಕೆ ಪಾಟೀಲ ಹಾಗೂ ವಿನಯ ಕುಲಕರ್ಣಿ ನಡುವಿನ ಗುದ್ದಾಟವೆಂದೇ ಪರಿಗಣಿಸಲಾಗುತ್ತಿದೆ.

ಜಿಲ್ಲೆಯ ಮೇಲಿನ ತನ್ನ ಹಿಡಿತಕ್ಕೆ ಯಾವ ಆತಂಕವೂ ಇಲ್ಲ ಅನ್ನೋ ಭ್ರಮೆಯಲ್ಲಿದ್ದ ಎಚ್ಕೆ ಪಾಟೀಲರಿಗೆ ವಿನಯ ಕುಲಕರ್ಣಿ ಸರಿಯಾದ ಏಟನ್ನೇ ನೀಡಿದ್ದ. ಪಾಟೀಲರ ಶಿಷ್ಯ ಮಾಡಳ್ಳಿಯ ಬಳಿ ಇದ್ದ ಕಾಂಗ್ರೆಸ್ ಗ್ರಾಮೀಣ ಜಿಲ್ಲಾಧ್ಯಕ್ಷ ಪಟ್ಟವನ್ನು ತನ್ನ ಶಿಷ್ಯ ಅನಿಲಕುಮಾರ್ ಪಾಟೀಲ್‌ಗೆ ಕೆಪಿಸಿಸಿ ಅಧ್ಯಕ್ಷ ಡಾ. ಜಿ. ಪರಮೇಶ್ವರ್ ಮೂಲಕ ಒಲಿದುಬರುವಂತೆ ವಿನಯ್ ಕುಲಕರ್ಣಿ ದಾಳ ಉರುಳಿಸಿದ್ದ. ಇದಕ್ಕೆ ಕೆಂಡಾಮಂಡಲವಾದ ಎಚ್ಕೆ ಪಾಟೀಲರ ಪಟಾಲಮ್ಮು 'ಅನಿಲಕುಮಾರ್ ಪಾಟೀಲ ಕಾಂಗ್ರೆಸ್ ಬಿಟ್ಟು ಹೋದಾತ. ಮತ್ತೆ ಮರಳಿ ಬಂದಿದ್ದಾನೆ. ಅವನು ಶಹರದಲ್ಲಿ ವಾಸಿಸುತ್ತಾನೆ. ಅದಕ್ಕೆ ಗ್ರಾಮೀಣ ಅಧ್ಯಕ್ಷಗಿರಿ ನೀಡಬೇಡಿ' ಅಂತ ವಿಷಯವನ್ನು ಹೈಕಮಾಂಡ್ ಅಂಗಳಕ್ಕೆ ಹೈಜಾಕ್ ಮಾಡಿತ್ತು. ಇಂತಹ ಸಣ್ಣ ವಿಷಯದಲ್ಲಿ ಮೂಗು ತೂರಿಸಿದ ರಾಜ್ಯ ಉಸ್ತುವಾರಿ ವಹಿಸಿರೋ ದಿಗ್ವಿಜಯ ಸಿಂಗ್, ಅನಿಲ್‌ಕುಮಾರ್ ಪಾಟೀಲ್ ಅಧಿಕಾರ ಹಿಡಿಯದಂತೆ ಆದೇಶ ಮಾಡಿದ್ದಾರೆ. ಈ ಮನೆಹಾಳು ಕೆಲಸದಲ್ಲಿ ಸಚಿವ ವಂಚಿತ ವೀರಣ್ಣ ಮತ್ತಿಕಟ್ಟಿ, ಮಾಜಿ ಸಚಿವ ಲಾಡ್, ಸಂಸದೀಯ ಕಾರ್ಯದರ್ಶಿ ಸಿ.ಎಸ್. ಶಿವಳ್ಳಿ, ವಿಧಾನ ಪರಿಷತ್ ಸದಸ್ಯ ಶ್ರೀನಿವಾಸ್ ಮಾನೆ ಪಾಲ್ಗೊಂಡಿದ್ದಾರೆ ಎಂದು ಜಿಲ್ಲೆಯ ಕಾಂಗ್ರೆಸಿಗರೇ ಮಾತನಾಡಿಕೊಳ್ಳುತ್ತಿದ್ದಾರೆ.



ಮಾಡಳ್ಳಿ

ಸರ್ವಜ್ಞ ವಚನ

ಕನ್ನಡದ ಶ್ರೇಷ್ಠ ತ್ರಿಪದಿ ಕವಿ ಸರ್ವಜ್ಞ ತನ್ನ ಕಾಲದ ಎಲ್ಲ ಕಂದಾಚಾರಗಳನ್ನು ನೋಡಿ ಮನಮುಟ್ಟುವಂತೆ ವಚನಗಳನ್ನು ನಮಗೆ ಕೊಟ್ಟುಹೋಗಿದ್ದಾನೆ. ಆದರೆ ಆ ವಚನಗಳನ್ನು ಮತ್ತೆ ಓದಿದರೆ ಇಷ್ಟು ಕಾಲ ಸರಿದರೂ ಕೂಡ ಎಲ್ಲವೂ ಹಾಗೇ ನಡೆಯುತ್ತಿರುವಂತೆ ಭಾಸವಾಗುತ್ತದೆ. ಹಾರುವರ ಮಡೆಸ್ನಾನ, ಮಹಿಳೆಯರು ದೇವರನ್ನು ಮುಟ್ಟಿ ಪೂಜೆ ಮಾಡದಂತಹ ನಿರ್ಬಂಧ, ದಲಿತರು ದೇವಸ್ಥಾನ ಪ್ರವೇಶ ಮಾಡದಂತಹ ಕಟ್ಟುಪಾಡು, ಹೆಣ್ಣು ಮುಟ್ಟಾಗುವುದನ್ನು ಅಪಶಕುನವೆಂದು ಬಗೆವ ಮಂದಮತಿಗಳು, ಜಗದ್ಗುರುಗಳ ಶಯನಾಗ್ರಹದ ಕತೆಗಳೆಲ್ಲಾ ಎಂದಿನಂತೆಯೇ ಸಾಗುತ್ತಿರುವಾಗ, ವಿ.ಜಿ. ರಾಜಾರೆಡ್ಡಿಹಳ್ಳಿಯವರು ಈ ಕಾಲಕ್ಕೂ ಸಲ್ಲುವಂತಹ ಸರ್ವಜ್ಞನ ಆಯ್ದ ವಚನಗಳನ್ನು ಕಳಿಸಿದ್ದಾರೆ. ಅನಿಷ್ಟ ಪದ್ಧತಿಗಳು ಇರುವವರೆಗೂ ಮತ್ತೆ ಮತ್ತೆ ಓದಿಸಿಕೊಳ್ಳುವ ವಚನಗಳಿವು.



ಸತ್ತ ಕತ್ತೆಯ ಹೊತ್ತ । ರೆತ್ತಣವ ಹೊಲೆಯನು? ।
ಉತ್ತಮರೆಂದು ಹೆರರೊಡವೆ ಹೊತ್ತರವ ।
ನಿತ್ಯವೂ ಹೊಲೆಯ ಸರ್ವಜ್ಞ ॥

ಮುಟ್ಟಾದ ಹೊಲೆಯೊಳಗೆ । ಹುಟ್ಟಿಹುದು ಜಗವೆಲ್ಲ ।
ಮುಟ್ಟಬೇಡೆಂದು ತೊಲಗುವಾ ಹಾರುವನು ।
ಸರ್ವಜ್ಞ ॥

ಮುಟ್ಟು ಕಂಡವಳನ್ನು । ಮುಟ್ಟಲೊಲ್ಲರು ನೋಡ ।
ಮುಟ್ಟು ತಾ ತಡೆದು ಹುಟ್ಟಿದಾ ದೇಹವನು ।
ಮುಟ್ಟುತಿಹರೇಕೆ ಸರ್ವಜ್ಞ ॥

ಉತ್ತಮ ಹಾಲ್ಗಡಲೊ । ಳೆತ್ತಿಹರೆ ಜನ್ಮವನು?
ಉತ್ತಮರ ಅಧಮರೆನಬೇಡ, ಹೊಲೆಯಿಲ್ಲ ।
ದುತ್ತಮರು ಎಲ್ಲಿ ಸರ್ವಜ್ಞ ॥

ಎಂಜಲೆಂಜಲು ಎಂದು । ಅಂಜುವರು ಹಾರುವರು ।
ಎಂಜಲಿಂದಾದ ತನುವಿರಲು, ಅದನಂದು ।
ಅಂಜುತಿಹರೇಕೆ ಸರ್ವಜ್ಞ ॥

ಹಲ್ಲು ಎಲುವೆಂಬುದನು । ಎಲ್ಲರೂ ಅಂದಿಹರು ।
ಹಲ್ಲಿನಿಂದೆಲ್ಲಾ ಅಗಿದು ನುಂಗಿದ ಬಳಿಕ ।
ಎಲ್ಲಿಯದು ಶೀಲ ಸರ್ವಜ್ಞ ॥

ನಡೆವುದೊಂದೆ ಭೂಮಿ । ಕುಡಿವುದೊಂದೆ ನೀರು ।
ಸುಡುವಗ್ನಿವೊಂದೆ ಇರುತಿರಲು, ಕುಲಗೋತ್ರ ।
ನಡುವೆ ಎತ್ತಣದು ಸರ್ವಜ್ಞ ॥

ಕುಡಿವ ನೀರನು ತಂದು । ಅಡಿಗೆ ಮಾಡಿದ ಮೇಲೆ ।
ಒಡನುಣ್ಣಲಾಗದಿಂತೆಂಬ ಮನುಜರ ।
ಒಡನಾಟವೇಕೆ ಸರ್ವಜ್ಞ ॥

ಜಾತಿಹೀನನ ಮನೆಯ । ಜ್ಯೋತಿ ತಾ ಹೀನವೆ?।
ಜಾತಿವಿಜಾತಿ ಎನಬೇಡ, ದೇವನೊಲಿ ।
ದಾತನೆ ಜಾತ ಸರ್ವಜ್ಞ ॥

ಕೊಟ್ಟವರ ತಲೆಬೆನ್ನ । ತಟ್ಟುವರು ಹಾರುವರು ।
ಬಿಟ್ಟರೆ ಕುಟ್ಟಿ ಕೆಡಹುವರು, ಹಾರುವರ ।
ಬಟ್ಟೆಬೇಡೆಂದ ಸರ್ವಜ್ಞ ॥

ಅರ್ಥ ಸಿಕ್ಕರೆ ಬಿಡರು । ವ್ಯರ್ಥದಿ ಶ್ರಮ ಬಡರ ।
ನರ್ಥಕ್ಕೆ ಪರರ ನೊಂಕಿಪರು, ವಿಪ್ರರಿಂ ।
ಸ್ವಾರ್ಥರಿನ್ನಿಲ್ಲ ಸರ್ವಜ್ಞ ॥

ಯೋನಿಜರು ಯೋನಿಯನು । ಹೀನ ಮಾಡುವುದೇನು ।
ಆನಂದ ಜನನಕದು ಮೂಲ, ಶುಚಿಯಿರಲು ।
ತಾನೊಲಿವುದೆಂದ ಸರ್ವಜ್ಞ ॥

ಪುಲ್ಲೆ ಚರ್ಮವನುಟ್ಟು । ಹಲ್ಲುಬೆಳ್ಳಗೆ ಬಿಟ್ಟು ।
ಕಲ್ಲ ಮೇಲಿಪ್ಪ ತಪಸಿಯ ಮನಸೆಲ್ಲ ।
ನಲ್ಲೆ ಮೇಲಿಹುದು ಸರ್ವಜ್ಞ ॥

ಪರಪುರುಷನನು । ತನ್ನ ಪರಮಪಿತನೆಂದರಿತು ।
ಸ್ಥಿರಚಿತ್ತವುಳ್ಳ ಸುದತಿಯನು ಸನ್ನೆಯಲಿ ।
ಕರೆಯುವವರಾರು ಸರ್ವಜ್ಞ ॥

■ ವಿ.ಜಿ. ರಾಜಾರೆಡ್ಡಿಹಳ್ಳಿ

ಆಗಬಹುದು ಅನ್ನೋ ಭಯವಿದೆ. ಹಾಗಾಗಿ ಪಾಟೀಲರ ತವರಿನಲ್ಲೇ ಅವರ ಬಲ ಕುಗ್ಗಿಸಲು ದಿಕಿಶಿ ತನ್ನವೇ ಒಂದು ಗುಂಪು ರೆಡಿ ಮಾಡಿ ಸಕ್ರಿಯವಾಗಿಟ್ಟಿದ್ದಾರೆ.

ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ತಮ್ಮ ತವರು ಜಿಲ್ಲೆ ಗದಗ್‌ನಲ್ಲಿ ಕಾಂಗ್ರೆಸ್ ಪಕ್ಷವನ್ನು ಬಹುಮತದೊಂದಿಗೆ ಅಧಿಕಾರದಲ್ಲಿ ಕೂರಿಸಲು ಯಶಸ್ವಿಯಾಗಿರೋ ಎಚ್ಕೆ ಪಾಟೀಲರು ಮನಸ್ಸು ಮಾಡಿದ್ದರೆ ಧಾರವಾಡ ಜಿಲ್ಲಾ ಪಂಚಾಯ್ತಿಯನ್ನೂ 'ಕೈ' ವಶಕ್ಕೆ ತರಬಹುದಾಗಿತ್ತು. ಆದರೆ ಅದು ಎಚ್ಕೆ ಪಾಟೀಲ್ ಮತ್ತು ಅವರ ಗ್ಯಾಂಗ್‌ಗೆ ಬೇಡವಾದ ವಿಷಯವಾಗಿತ್ತು. ಯಾಕೆಂದರೆ ಹಾಗೇನಾದರು ಘಟಿಸಿಬಿಟ್ಟರೆ, ಅದರ ಸಂಪೂರ್ಣ ಕ್ರೆಡಿಟ್ಟು ಜಿಲ್ಲಾ ಉಸ್ತುವಾರಿ ಮಂತ್ರಿಯಾದ ವಿನಯ್ ಕುಲಕರ್ಣಿಗೆ ಸಲ್ಲಿಕೆಯಾಗುತ್ತೆ, ಆಗ ಆತ ಇನ್ನಷ್ಟೂ ಪ್ರಬಲನಾಗಿ ಬೆಳೆದು ಬಿಡ್ತಾನೆ ಅನ್ನೋ ಆತಂಕ ಪಾಟೀಲರ ಪ್ರಭಾವವನ್ನು ತಟಸ್ಥಗೊಳಿಸಿದ್ದರಿಂದಲೇ ಕಾಂಗ್ರೆಸ್, ಬಿಜೆಪಿಗಿಂತ ಒಂದು ಸ್ಥಾನ ಕಡಿಮೆಗೇ ತನ್ನನ್ನು ಸೀಮಿತಗೊಳಿಸಿಕೊಳ್ಳಬೇಕಾಯ್ತು.

ಮೊನ್ನೆ ಬರ ವೀಕ್ಷಣೆಗೆ ಅಂತ ಬಂದಿದ್ದ ಸಿದ್ದರಾಮಯ್ಯನ ಮುಂದೆ 'ಬಹುಬೇಡಿಕೆಯ' ಪಕ್ಷೇತರ ಅಭ್ಯರ್ಥಿ ಶಿವಾನಂದ ಕರಿಗಾರನನ್ನೇ ತಂದು ನಿಲ್ಲಿಸಿದ ವಿನಯ್ ಕುಲಕರ್ಣಿ 'ತಾವೊಂದು ಮಾತು ಹೇಳಿದರೆ ಈ ನಿಮ್ಮ ಕುಲಬಾಂಧವ ನಮಗೇ ಬೆಂಬಲ ಸೂಚಿಸ್ತಾನೆ, ಆಗ ಜಿಲ್ಲಾ ಪಂಚಾಯ್ತಿ ಅಧಿಕಾರ ನಮ್ಮದೇ ಆಗುತ್ತೆ' ಅಂತ ಅವಲತ್ತುಕೊಂಡಿದ್ದಲ್ಲದೆ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಲು ಯಾರೆಲ್ಲ ಗುಂಪುಗಾರಿಕೆ ಕಾರಣವಾಯ್ತು ಅನ್ನೋದನ್ನು ಬಿಡಿಸಿ ಹೇಳಿದ್ದ. ಆದರೆ ಜಿಲ್ಲೆಯಲ್ಲಿರುವ ಗುಂಪುಗಾರಿಕೆಯ ಬಗ್ಗೆ ಅರಿವಿದ್ದ ಸಿದ್ದರಾಮಯ್ಯ ಅಂತ ಸಾಹಸಕ್ಕೆ ಕೈಯಿಟ್ಟರೆ ಈಗಾಗಲೇ ಅತಂತ್ರದಲ್ಲಿರುವ ತಮ್ಮ ಕುರ್ಚಿಗೆ ಎಲ್ಲಿ ಮತ್ತಷ್ಟು ಕೆಂಡಗಣ್ಣುಗಳು ಬೀಳುತ್ತವೆಯೋ ಎಂಬಂತೆ 'ಈ ಸಮಸ್ಯೆಯನ್ನು ಜಿಲ್ಲೆಯಲ್ಲಿರುವ ಎಲ್ಲ ನಾಯಕರು, ಶಾಸಕರು ಒಟ್ಟಿಗೆ ಸೇರಿಸಿ ಬಗೆಹರಿಸಿಕೊಳ್ಳಿ' ಅಂತ ನಾಜೂಕಾಗಿ ತಳ್ಳಿಹೋದರು.


ಅಷ್ಟಕ್ಕೂ ನವಲಗುಂದ ವಿಧಾನಸಭಾ ಕ್ಷೇತ್ರಕ್ಕೆ ಮುಂದಿನ ಚುನಾವಣೆಯಲ್ಲಿ ತನಗೇ ಟಿಕೆಟು ನೀಡುವ ಗ್ಯಾರಂಟಿ ಕೊಟ್ಟರೆ ಕಾಂಗ್ರೆಸ್‌ಗೆ ಬೆಂಬಲ ನೀಡಲು ತನ್ನದೇನೂ ಅಭ್ಯಂತರವಿಲ್ಲ ಅಂತ ಶಿವಾನಂದ ಕರಿಗಾರ ಮುಖ್ಯಮಂತ್ರಿಯ ಮುಂದೇ ಬೇಡಿಕೆ ಇಟ್ಟಿದ್ದ. ಸಾರಿಸಾರಿ ಮಕಾಡೆ ಮಲಗುತ್ತಿರುವ ಗಡ್ಡಿಗಿಂತ ಹೊಸ ಹುಮ್ಮಸ್ಸಿನ ಶಿವಾನಂದನಿಗೆ ಒಂದು ಚಾನ್ಸು ಕೊಡುವುದರಲ್ಲಿ ಅಂತಹ ಪ್ರಮಾದವೇನೂ ಇರಲಿಲ್ಲ. ಆದರೆ ಗಡ್ಡಿಯ ಬೆನ್ನಿಗೆ ಎಚ್ಕೆ ಪಾಟೀಲರು ಇದ್ದಾರೆ ಎನ್ನುವ ಕಾರಣಕ್ಕೆ ಜೇನುಗೂಡಿಗೆ ಕಲ್ಲು ಹೊಡೆಯುವ ಸಾಹಸಕ್ಕೆ ಸಿಎಂ ಮುಂದಾಗಲಿಲ್ಲ.

ಯಾವಾಗ ಸ್ವತಃ ಸಿಎಂ ಸಾಹೇಬರೇ ಮಧ್ಯಸ್ಥಿಕೆ ವಹಿಸಲು ಅಡ್ಡಡ್ಡ ತಲೆ ಆಡಿಸಿದರೋ ಆಗ ಪಕ್ಷೇತರ ಅಭ್ಯರ್ಥಿ ಶಿವಾನಂದ ಕರಿಗಾರ ಸೀದಾ ಬಿಜೆಪಿಗೆ ಬಿಕರಿಯಾದ. ಮೊದಲೇ ಅವನನ್ನು ಸೆಳೆಯಲು ಒಂದಿಲ್ಲೊಂದು ಗಿಮಿಕ್ ಮಾಡುತ್ತಲೇ ಇದ್ದ ಬಿಜೆಪಿಗಳ ಬಳಿ ಆತ ಇಟ್ಟ ಬೇಡಿಕೆ ಒಂದೇ, 'ನನ್ನನ್ನು ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷ ಮಾಡ್ಬೇಕು' ಅಂತ! ಒಮ್ಮೆ ಉಪಾಧ್ಯಕ್ಷನಾದರೆ 5 ವರ್ಷ ಗ್ಯಾರಂಟಿ ಸೀಟು ಅಂತ ಲೆಕ್ಕ ಹಾಕಿಯೇ ಆತ ಬಿಜೆಪಿಯ ಬಾಗಿಲು ಬಡಿದದ್ದು. ಪಕ್ಷೇತರ ಅಭ್ಯರ್ಥಿಗಳಿಗೆ ಬಿಜೆಪಿ ಈ ಹಿಂದೆ ಕೈಕೊಟ್ಟ ಪ್ರಸಂಗ ಚೆನ್ನಾಗಿ ನೆನಪಿರುವುದರಿಂದಲೇ ತಾನು ಬಿಜೆಪಿ ಸೇರದೆ ಕಮಲಕ್ಕೆ ಬಾಹ್ಯ ಬೆಂಬಲ ನೀಡಿ ಪಕ್ಷೇತರನಾಗಿಯೇ ಉಳಿಯುತ್ತೇನೆ ಅಂತ ಆತ ಘೋಷಿಸಿದ್ದಾನೆ.


ಅಧಿಕಾರದ ಹಪಾಹಪಿಯಲ್ಲಿರುವ ಬಿಜೆಪಿ ಶಿವಾನಂದ ಕರಿಗಾರ ಹೇಳಿದ್ದಕ್ಕೆಲ್ಲಾ ಓಕೆ ಅನ್ನುತ್ತಿದೆ. ಹೇಗಿದ್ದರೂ ಅಧ್ಯಕ್ಷರು ತಮ್ಮ ಪಕ್ಷದವರೇ ಇರುತ್ತಾರೆ. ಉಪಾಧ್ಯಕ್ಷ ಸ್ಥಾನ ನೀಡಿದರೆ ಕಳೆದುಕೊಳ್ಳುವುದು ಏನೂ ಇಲ್ಲ, ಹೇಗೂ 2 ವರ್ಷಗಳ ತರುವಾಯ ಎದುರಾಗೋ ವಿಧಾನಸಭೆ ಚುನಾವಣೆಯಲ್ಲಿ ನಾವೇ ಅಧಿಕಾರಕ್ಕೆ ಬರುತ್ತೇವೆ, ಆಗ ನೋಡಿಕೊಂಡರಾಯ್ತು ಅನ್ನೋ ಲೆಕ್ಕಾಚಾರದಲ್ಲಿ ಬಿಜೆಪಿ ಮುಳುಗಿದೆ. ಒಟ್ಟನಲ್ಲಿ ಕಾಂಗ್ರೆಸ್‌ನ ಸೋಲುಂಗಳೇ ಬಿಜೆಪಿಯ ಗೆಲುವುಗಳು ಅನ್ನೋದನ್ನು ಧಾರವಾಡ ಕಾಂಗ್ರೆಸ್ಸಿಗರು ಸಾಬೀತುಪಡಿಸುತ್ತಲೇ ಇದ್ದಾರೆ.

■ ಹುಬ್ಬಳ್ಳಿಯಾಂವ

ಮೈಸೂರು: ಬಿಜೆಪಿ-ಜೆಡಿಎಸ್ ದೋಸ್ತಿಗೆ 'ಕೈ' ತಿರುಮಂತ್ರ?



ಮೈಸೂರು ಜಿಲ್ಲಾ ಪಂಚಾಯ್ತಿ ಕದನ ಇನ್ನಿಲ್ಲದ ರಂಗು ಪಡೆದುಕೊಳ್ಳುತ್ತಿದೆ. ಶತಾಯಗತಾಯ ಕಾಂಗ್ರೆಸ್ಸನ್ನು ಅಧಿಕಾರದಿಂದ ದೂರವಿಟ್ಟು ತವರಿನಲ್ಲೇ ಸಿದ್ದುಗೆ ಮುಖಭಂಗ ಮಾಡಬೇಕು ಅಂತ ಹಳೇ ದೋಸ್ತಿಗಳಾದ ಬಿಜೆಪಿ-ಜೆಡಿಎಸ್ ಇತ್ತ ಕೈಜೋಡಿಸಿದ್ದರೆ, ಅತ್ತ ಸಿದ್ದರಾಮಯ್ಯ ಕೂಡಾ ಹುಣಸೂರು ಶಾಸಕ ಮಂಜುನಾಥ್‌ನನ್ನು ಮುಂದಿಟ್ಟುಕೊಂಡು ಆಪರೇಷನ್ ಹಸ್ತದ ಕಸರತ್ತು ನಡೆಸುತ್ತಿದ್ದಾರೆ. ಈ ಮೊದಲು ಜಿ.ಪಂ. ಅಧ್ಯಕ್ಷ ಗಾದಿ 2ಎ ಸಾಮಾನ್ಯ ವರ್ಗಕ್ಕೂ, ಉಪಾಧ್ಯಕ್ಷ ಸ್ಥಾನವನ್ನು ಸಾಮಾನ್ಯ ವರ್ಗಕ್ಕೂ ಮೀಸಲಿಡಲಾಗಿತ್ತು. ಅದರ ಪ್ರಕಾರ ಕುರುಬ ಜನಾಂಗಕ್ಕೆ ಸೇರಿದ ಜೆಡಿಎಸ್‌ನ ಬೀರಿಹುಂಡಿ ಬಸವಣ್ಣನನ್ನು ಅಧ್ಯಕ್ಷರನ್ನಾಗಿಸಲು ಸಕಲ ಸಿದ್ಧತೆಗಳೂ ನಡೆದಿದ್ದವು. ಆದರೆ ಮೀಸಲಾತಿಯನ್ನು ಹಠಾತ್ತನೆ ಬದಲಾವಣೆ ಮಾಡಿ ಆದೇಶ ಹೊರಡಿಸಿದ ಸರ್ಕಾರ ಅಧ್ಯಕ್ಷ ಗಾದಿಯನ್ನು 2ಎ ಮಹಿಳೆಗೆ ಮೀಸಲಿಡಲಾಗಿದೆ. ಇದರಿಂದ ಬೀರಿಹುಂಡಿ ಬಸವಣ್ಣ ಮಾತ್ರವಲ್ಲ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಕಾಂಗ್ರೆಸ್‌ನ ರಾಕೇಶ್ ಪಾಪಣ್ಣ ಮತ್ತು ಎಚ್.ವಿಶ್ವನಾಥ್‌ರ ಮಗ ಅಮಿತ್ ದೇವರಹಟ್ಟಿ ಕೂಡಾ ನಿರಾಸೆ ಅನುಭವಿಸಬೇಕಾಗಿ ಬಂದಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಕುರುಬ ಜನಾಂಗದಲ್ಲಿ ಮತ್ತೋರ್ವ ವ್ಯಕ್ತಿ ತನಗೆ ಪರ್ಯಾಯವಾಗಿ ಬೆಳೆಯುವುದನ್ನು ಸಹಿಸುವುದಿಲ್ಲ, ಹಾಗಾಗಿಯೇ ಜಿ.ಪಂ ಅಧ್ಯಕ್ಷರ ಮೀಸಲಾತಿಯನ್ನು ಬದಲಾಯಿಸಿ ಬೀರಿಹುಂಡಿ ಬಸವಣ್ಣ ಅಧ್ಯಕ್ಷನಾಗೋದನ್ನು ತಪ್ಪಿಸಲಾಗಿದೆ ಅಂತ ಜೆಡಿಎಸ್‌ನವರು ಪ್ರಚಾರ ಮಾಡುತ್ತಿದ್ದಾರೆ. ಆದರೆ ಬೀರಿಹುಂಡಿ ಬಸಣ್ಣನಿಗೆ ಅಧಿಕಾರ ತಪ್ಪುವಂತೆ ಮಾಡುವಲ್ಲಿ ಸಿದ್ದರಾಮಯ್ಯನವರ ಹಿತಾಸಕ್ತಿಗಿಂತ ಅವರ ಆಪ್ತ ಕೆ.ಮರಿಗೌಡನ ಕರಾಮತ್ತೆ ದೊಡ್ಡದಿರುವುದು ಸುಳ್ಳಲ್ಲ.

ಕುದುರಿದ ದೋಸ್ತಿ

ಮೈಸೂರು ಜಿಲ್ಲಾ ಪಂಚಾಯಿತಿ ಗದ್ದುಗೆಗೆ ಬಿಜೆಪಿ ಮತ್ತು ದಳದ ಮೈತ್ರಿಗಾಗಿ ಎರಡೂ ಪಕ್ಷಗಳ ವರಿಷ್ಠರು ಅನುಮತಿ ನೀಡುತ್ತಲೇ ಬಿಜೆಪಿಯ ಸಂಸದ ಪ್ರತಾಪ ಸಿಂಹ, ಎಂ.ಎಲ್.ಸಿ ಸಿ.ಎಚ್.ವಿಜಯಶಂಕರ್, ಮಾಜಿ ಸಚಿವ ಎಂ.ಶಿವಣ್ಣ ಮಾಜಿ ಶಾಸಕರಾದ ಸಿದ್ದರಾಜು, ಸಿ. ರಮೇಶ್, ಬೀಚನಹಳ್ಳಿ ಚಿಕ್ಕಣ್ಣ ಹಾಗೂ ಜನತಾದಳದಿಂದ ಶಾಸಕರಾದ ಎಸ್. ಚಿಕ್ಕಮಾದು, ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್ ಮೊದಲಾದವರು ಭಾನುವಾರ ಸಭೆ ನಡೆಸಿ ಅಧ್ಯಕ್ಷ ಗಾದಿ ಜೆಡಿಎಸ್‌ಗೆ, ಉಪಾಧ್ಯಕ್ಷ ಸೀಟು ಬಿಜೆಪಿಗೆ ಅಂತ ಒಪ್ಪಂದಕ್ಕೆ ಬಂದಿದ್ದರು.

ದಳದಿಂದ ಅಧ್ಯಕ್ಷ ಸ್ಥಾನದ ಮೀಸಲಾತಿಯ 2ಎ ಮಹಿಳೆ ವರ್ಗದಲ್ಲಿ ಇಬ್ಬರು ಅರ್ಹರಿದ್ದಾರೆ. ಅಂತರಸಂತೆಯಿಂದ ಜಿಲ್ಲಾ ಪಂಚಾಯಿತಿಗೆ ಆಯ್ಕೆಯಾಗಿರುವ ಪರಿಮಳ ಶಾಮಸುಂದರ್ ಹಾಗೂ ಅಣ್ಣೂರು ಕ್ಷೇತ್ರದಿಂದ ಆಯ್ಕೆಯಾಗಿರುವ ನಯೀಮಾ ಸುಲ್ತಾನ. ಪರಿಮಳ ಶಾಮ್‌ಸುಂದರ್ ಅವರು ನಾಮಧಾರಿ ಒಕ್ಕಲಿಗ ಜನಾಂಗಕ್ಕೆ ಸೇರಿದ್ದು ಹಿರಿಯ ಕಾಂಗ್ರೆಸಿಗ ಎನ್.ಟಿ.ಸುಂದರ್ ದಾಸ್‌ರ ಸೊಸೆ. ಎನ್.ಟಿ.ಸುಂದರ್ ದಾಸ್ 21 ವರ್ಷಗಳ ಕಾಲ ಕೆ.ಪಿ.ಸಿ.ಸಿ ಸದಸ್ಯರಾಗಿದ್ದು ಮುಖ್ಯಮಂತ್ರಿ ದಿ. ದೇವರಾಜ್ ಅರಸು ಹಾಗೂ ಎಸ್.ಎಂ. ಕೃಷ್ಣರ ಪರಮ ಆಪ್ತರಾಗಿದ್ದರು. ಆದರೆ ಅವರ ಕಾಲಾನಂತರ ಮಗ ಶಾಮ್ ಜೆಡಿಎಸ್‌ನಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ಇನ್ನು ನಯೀಮ್ ಸುಲ್ತಾನ್ ಅವರು ಹೆಚ್.ಡಿ.ಕೋಟೆಯ ನಜೀರ್‌ರ ಪತ್ನಿಯಾಗಿದ್ದು ಪಟ್ಟಣ ಪಂಚಾಯಿತಿಗೆ ಸತತ 2 ಬರಿ ಆಯ್ಕೆಯಾಗಿದ್ದಲ್ಲದೆ ಒಮ್ಮೆ ಅಧ್ಯಕ್ಷೆ, ಉಪಾಧ್ಯಕ್ಷೆಯಾಗಿಯೂ ಅಧಿಕಾರ ಅನುಭವಿಸಿದ್ದಾರೆ.

ಅದೇರೀತಿ ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯಿಂದ ತಗಡೂರು ಕ್ಷೇತ್ರದ ಬಿ.ಎನ್. ಸದಾನಂದ ಅಥವಾ ಹದಿನಾರು ಕ್ಷೇತ್ರದ ಎ.ಎಂ. ಗುರುಸ್ವಾಮಿ ಇಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಇದುವರೆಗೂ ಅಲ್ಪಸಂಖ್ಯಾತ ಮುಸ್ಲಿಮ್ ಮಹಿಳೆಗಾಗಲಿ ಅಥವಾ ಮೈಸೂರು, ಚಾಮರಾಜನಗರ, ಹಾಸನ, ಕೊಡಗು ಜಿಲ್ಲೆಯಲ್ಲಿ ಗಣನೀಯ ಸಂಖ್ಯೆಯಲ್ಲಿರುವ ನಾಮಧಾರಿ ಒಕ್ಕಲಿಗ ಜನಾಂಗದ ವರಿಗಾಗಲಿ ಯಾವುದೇ ಸ್ಥಾನಮಾನ ಸಿಕ್ಕಿಲ್ಲ. ಎಲ್ಲಾ ಪಕ್ಷಗಳು ಇವರನ್ನು ಓಟ್ ಬ್ಯಾಂಕ್ ಆಗಿ ಬಳಸಿಕೊಂಡು ಬರುತ್ತಿವೆಯೇ ಹೊರತು ಅಧಿಕಾರದ ಸ್ಥಾನಮಾನ ನೀಡಿಲ್ಲ. ಕೆಲ ದಿನಗಳ ಹಿಂದೆ ಮೈಸೂರಿನಲ್ಲಿ ನಡೆದ ಅಖಿಲ ಕರ್ನಾಟಕ ನಾಮಧಾರಿ ಒಕ್ಕಲಿಗ ಸಮಾಜದ ಸಮಾವೇಶದಲ್ಲೂ ಈ ವಿಷಯ ಪ್ರತಿಧ್ವನಿಸಿತು. ಹಿರಿಯ ಕಾಂಗ್ರೆಸ್ಸಿಗ ವಿಶ್ವನಾಥ್‌ರು ಈ ಅಪವಾದವನ್ನು ದೇವೇಗೌಡರ ಮೇಲೆ ಎಸೆದ ಕಾರಣಕ್ಕೆ ವೇದಿಕೆ ಮೇಲಿದ್ದ ಸಾ.ರಾ.ಮಹೇಶ್ ಹಾಗೂ ವಿಶ್ವನಾಥ್ ನಡುವೆ ದೊಡ್ಡ ಜುಗಲ್‌ಬಂದಿಯೇ ನಡೆದುಹೋಯ್ತು. ಇದೆಲ್ಲವನ್ನು ಲೆಕ್ಕ ಹಾಕಿಯೇ ಜೆಡಿಎಸ್ ಈ ಬಾರಿ ಅವೆರಡೂ ಸಮುದಾಯದ ಅಭ್ಯರ್ಥಿಗಳನ್ನು ತನ್ನ ಆಯ್ಕೆಯಾಗಿಸಿಕೊಂಡಿದೆ.

ಆಪರೇಷನ್ ಹಸ್ತ

ದೋಸ್ತಿ ನಿಕ್ಕಿಯಾದರೂ ಬಿಜೆಪಿ ಮತ್ತು ಜೆಡಿಎಸ್‌ಗೆ ಆತಂಕ ಇನ್ನೂ ತಪ್ಪಿಲ್ಲ, ಯಾಕೆಂದರೆ ಒಟ್ಟು 49 ಸಂಖ್ಯಾ ಬಲದ ಜಿಲ್ಲಾ ಪಂಚಾಯ್ತಿಯಲ್ಲಿ ಕಾಂಗ್ರೆಸ್ 23, ಜೆಡಿಎಸ್ 18, ಬಿಜೆಪಿ 7 ಮತ್ತು ಒಬ್ಬ ಪಕ್ಷೇತರ ಅಭ್ಯರ್ಥಿಗಳಿದ್ದಾರೆ. ಅಧಿಕಾರ ಹಿಡಿಯಲು ಕಾಂಗ್ರೆಸ್‌ಗೆ ಇನ್ನೆರಡು ಮತಗಳು ಬೇಕಷ್ಟೆ. ಒಬ್ಬ ಪಕ್ಷೇತರನನ್ನು ಸೇರಿಸಿಕೊಂಡರೂ ಕಾಂಗ್ರೆಸ್‌ಗೆ ಮ್ಯಾಜಿಕ್ ನಂಬರ್ ತಲುಪಲು ಇನ್ನೂ ಒಂದು ಮತದ ಕೊರತೆ ಕಾಣಿಸಿಕೊಳ್ಳುತ್ತದೆ. ಹಾಗಾಗಿ ಆಪರೇಷನ್ ಹಸ್ತದ ಮೂಲಕ ಬಿಜೆಪಿ ಅಥವಾ ಜೆಡಿಎಸ್ ಕ್ಯಾಂಡಿಡೇಟ್ ಸೆಳೆಯುವ ಹೊಣೆಯನ್ನು ಖುದ್ದು ಸಿದ್ದರಾಮಯ್ಯನವರೇ ಹುಣಸೂರು ಶಾಸಕ ಮಂಜುನಾಥ್‌ಗೆ ವಹಿಸಿದ್ದಾರೆ. ಕಳೆದ ಬಾರಿಯೂ ಸಾಕಷ್ಟು ಸಂಖ್ಯಾ ಬಲ ಇಲ್ಲದಿದ್ದರೂ ಕಾಂಗ್ರೆಸ್‌ನ್ನು ಜಿ.ಪಂ. ಅಧಿಕಾರದಲ್ಲಿ ಕೂರಿಸುವಲ್ಲಿ ಮಂಜುನಾಥ್ ಪಾತ್ರ ದೊಡ್ಡದು.

ಈ ಭಯ ಇರುವುದರಿಂದಲೇ ಅತ್ತ ಬಿಜೆಪಿ ತನ್ನ ಸದಸ್ಯರನ್ನು ಮಂಗಳೂರಿನತ್ತ ಹೊತ್ತೊಯ್ದಿದ್ದರೆ, ಜೆಡಿಎಸ್





ಬಿಡದಿ ಬಳಿಯ ಈಗಲ್ ರೆಸಾರ್ಟ್‌ನಲ್ಲಿ ಕೂಡಿ ಹಾಕಿಕೊಂಡಿದೆ. ಆದರೆ ಈ ಸಣ್ಣ ಗ್ಯಾಪಿನಲ್ಲೇ ಕಾಂಗ್ರೆಸ್ ತನ್ನ ಆಟದ ಖದರು ತೋರಿಸಿದೆ. ಬಿಜೆಪಿಯ ಏಳು ಸದಸ್ಯರಲ್ಲಿ ಅಂಚಿಪುರ ಕ್ಷೇತ್ರದಿಂದ ಗೆದ್ದಿರುವ ವೆಂಕಟಸ್ವಾಮಿ ಮಂಗಳೂರಿಗೆ ಹೋಗಿಯೇ ಇಲ್ಲ. ಅಸಲಿಗೆ ಫಲಿತಾಂಶ ಹೊರಬಿದ್ದು ಜಿಲ್ಲಾ ಪಂಚಾಯ್ತಿ ಅತಂತ್ರವಾಗುತ್ತಿದ್ದಂತೆಯೇ ಈತ ಬಿಜೆಪಿಯ ಯಾವುದೇ ಚಟುವಟಿಕೆಯಲ್ಲಾಗಲಿ, ಸಭೆಯಲ್ಲಾಗಲಿ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ. ಈತನ ನಡೆ ನಿಗೂಢವಾಗಿದ್ದು ಕಾಂಗ್ರೆಸ್ ವಲಯದಲ್ಲಿ ಆಶಾಭಾವನೆ ಮೂಡಿಸಿದ್ದರೆ ದಳ ಮತ್ತು ಬಿ.ಜೆ.ಪಿ ಪಾಳಯದಲ್ಲಿ ಆತಂಕ ಕವಿಯುವಂತೆ ಮಾಡಿದೆ.


ಇತ್ತ ಜೆಡಿಎಸ್‌ನಲ್ಲೂ ಎಲ್ಲವೂ ನೆಟ್ಟಗಿಲ್ಲ, ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ನಿಕ್ಕಿಯಾಗಿರೋ ನಯೀಮಾ ಸುಲ್ತಾನ್ ಹಾಗೂ ಪರಿಮಳ ಶಾಮಸುಂದರ್ ಇಬ್ಬರಿಗೂ ತಲಾ ಮೂವತ್ತು ತಿಂಗಳ ಅಧಿಕಾರ ನೀಡುವ ಒಪ್ಪಂದ ಏರ್ಪಟ್ಟಿದೆಯಾದರೂ ಮೊದಲ ಅವಧಿಯಲ್ಲೇ ಯಾರು ಅಧ್ಯಕ್ಷರಾಗಬೇಕೆನ್ನುವ ಕುರಿತು ಮುಸುಕಿನ ಗುದ್ದಾಟ ನಡೆಯುತ್ತಲೇ ಇದೆ. ತನ್ನ ಹೆಂಡತಿ ನಯೀಮಾಳಿಗೇ ಮೊದಲ ಆದ್ಯತೆ ಕೊಡಿ ಅಂತ ಆಕೆಯ ಪತಿ ಒತ್ತಡ ಹೇರುತ್ತಿದ್ದು ಪಕ್ಷದ ನಾಯಕರು ಅದಕ್ಕೆ ಕ್ಯಾರೇ ಎನ್ನುತ್ತಿಲ್ಲ. ಅಲ್ಲದೇ ದೋಸ್ತಿ ಹಸ್ತ ಚಾಚಿರುವ ಬಿಜೆಪಿ ಕೂಡಾ ಮುಸ್ಲಿಂ ಅಭ್ಯರ್ಥಿಯನ್ನು ಅಧ್ಯಕ್ಷರನ್ನಾಗಿಸೋದಕ್ಕೆ ವಿರೋಧ ವ್ಯಕ್ತಪಡಿಸುತ್ತಿದೆ. ಇದರಿಂದ ನಯೀಮಾ ಸುಲ್ತಾನ್‌ಳ ಗಂಡ ಅಪ್‌ಸೆಟ್ ಆಗಿ ಜೆಡಿಎಸ್‌ನ ರೆಸಾರ್ಟ್‌ನಿಂದಲೇ ನಾಪತ್ತೆಯಾಗಿದ್ದಾನೆ. ಅವನ ಮೊಬೈಲ್ ನಂಬರು ನಾಟ್‌ರೀಚಬಲ್ ಆಗಿರೋದು ಜೆಡಿಎಸ್ ಪಾಳಯದಲ್ಲಿ ಆತಂಕ ಮೂಡಿಸಿದೆ.


ಇದನ್ನೇ ಬಂಡವಾಳ ಮಾಡಿಕೊಂಡ ಕಾಂಗ್ರೆಸ್‌ನ ಮಂಜುನಾಥ್, ಯಗ್ಗಡಹಳ್ಳಿಯಿಂದ ಆಯ್ಕೆಯಾಗಿರೋ ಪಕ್ಷೇತರ ಅಭ್ಯರ್ಥಿ ದಯಾನಂದ್, ಜೆಡಿಎಸ್‌ನ ನಯೀಮಾ ಸುಲ್ತಾನ್ ಹಾಗೂ ಅವರ ಪತಿ ನಜೀರ್‌ರನ್ನು ಮಂಗಳವಾರ ಸಂಜೆ ಸಿದ್ದರಾಮಯ್ಯನವರ ಮುಂದೆ ಕರೆತಂದು ನಿಲ್ಲಿಸಿದ್ದರು. ಆಗ ಅದೇನಾಯಿತೋ ಬಲ್ಲವರಿಲ್ಲ, ಆದರೆ ಚುನಾವಣೆಯ ದಿನ ಅಚ್ಚರಿಯ ಫಲಿತಾಂಶ ಹೊರಬೀಳಲಿದೆ ಅನ್ನೋ ಹುಮ್ಮಸ್ಸು ಕಾಂಗ್ರೆಸ್ಸಿಗರ ಮುಖದಲ್ಲಿ ಎದ್ದು ಕಾಣುತ್ತಿದೆ. ಹಾಗೇನಾದರು ಆದಲ್ಲಿ ಕಾಂಗ್ರೆಸ್‌ನಲ್ಲಿ ಅಧ್ಯಕ್ಷ ಸ್ಥಾನಕ್ಕೆ ಜಯಮ್ಮ ಶಿವಸ್ವಾಮಿ ಹಾಗೂ ಲತಾ ಸಿದ್ದಶೆಟ್ಟಿಯವರ ಹೆಸರು ಕೇಳಿಬರುತ್ತಿವೆ. ಏನಾಗುತ್ತೋ ಕಾದು ನೋಡಬೇಕು..


■ ಮೈಸೂರು ಮಹಿಷ












ದಕ್ಷಿಣ ಪದವೀಧರರ ಕ್ಷೇತ್ರ

ಡಾ. ರವೀಂದ್ರರ ವಿರುದ್ಧದ ಷಡ್ಯಂತ್ರದಲ್ಲಿ ಯಾರ್ಯಾರು?



ಇದೊಂಥರದ 'ಸುಪಾರಿ ಟಿಕೆಟ್ ಕಾಳಗ'ವಿದ್ದಂತೆ. ಮೇಲ್ಮನೆ ಪದವೀಧರರ ಕ್ಷೇತ್ರದ ಚುನಾವಣೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ್ದೇ ತಡ, ಘೋಷಿತ ಅಭ್ಯರ್ಥಿಗಳ ಜಾತಕ ಜಾಲಾಡಿ ಅವನು ಇಂಥವನು ಇವನು ಅಂಥವನೆಂದು ಬೊಬ್ಬೆ ಹಾಕುವ ಹಳೇ ಚಾಳಿಯನ್ನೇ ಅತೃಪ್ತರ ಗುಂಪೊಂದು ಶುರುವಿಟ್ಟಿದೆ. ಸೋಕಾಲ್ಡ್ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳೆನಿಸಿಕೊಂಡವರೇ ಹೈಕಮಾಂಡ್ ಆಯ್ದ ಅಭ್ಯರ್ಥಿಗಳ ವಿರುದ್ಧ ಅಪಪ್ರಚಾರಕ್ಕಿಳಿದಿರುವುದೇ ಈ 'ಸುಪಾರಿ ಟಿಕೆಟ್ ಜಿದ್ದಾಜಿದ್ದಿಯ' ವೈಶಿಷ್ಟ್ಯ ಕೂಡ.

ಇಂಥ ಪಕ್ಷಘಾತುಕ ಷಡ್ಯಂತ್ರದ ಮೊದಲ ಟಾರ್ಗೆಟ್ಟಾಗಿ ಕಣ್ಣೀರಿಡಬೇಕಾದ ದುರ್ಗತಿಗೆ ಸಿಲುಕಿರುವುದು ದಕ್ಷಿಣ ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಎಚ್.ಎನ್. ರವೀಂದ್ರ!

ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಹಾಸನ ಸೇರಿದಂತೆ ನಾಲ್ಕು ಜಿಲ್ಲೆಗಳನ್ನೊಳಗೊಂಡ ದಕ್ಷಿಣ ಪದವೀಧರರ ಕ್ಷೇತ್ರಕ್ಕೆ ಕಳೆದೆರಡು ಬಾರಿಗೂ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಲಕ್ಷ್ಮಣ್ ಠೇವಣಿ ಗಿಟ್ಟಿಸಿದ್ದೇ ಪುಣ್ಯ. ಒಮ್ಮೆ ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡರು ಗೆದ್ದರೆ ಇನ್ನೊಮ್ಮೆ ಬಿಜೆಪಿಯ ಗೋ. ಮಧುಸೂದನ್ ಆಯ್ಕೆಯಾಗುವ ಮೂಲಕ ಕಾಂಗ್ರೆಸ್ಸಿಗಿಲ್ಲಿ ನೆಲೆಯಿಲ್ಲವೆಂಬುದನ್ನು ತನ್ನ ವೈಫಲ್ಯದ ಮೂಲಕವೇ ಸಾಧಿಸಿ ತೋರಿಸಿದ್ದು ಲಕ್ಷ್ಮಣ್. ಇದನ್ನೆಲ್ಲ ಲೆಕ್ಕ ಹಾಕಿಯೇ ಮುಖ್ಯಮಂತ್ರಿ ಸಿದ್ದು ಈ ಬಾರಿ ಜನಪ್ರಿಯ ವೈದ್ಯ ಡಾ. ಎಚ್.ಎನ್. ರವೀಂದ್ರರನ್ನ ಕಣಕ್ಕಿಳಿಸಿದ್ದಾರೆ. ಸದ್ಯ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಗೌರವಾಧ್ಯಕ್ಷರೂ ಎಂಸಿಐ ಅಂದರೆ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಕರ್ನಾಟಕದ ಪ್ರತಿನಿಧಿಯೂ ಆದ ರವೀಂದ್ರರ ಸಂಘಟನಾ ಸಾಮರ್ಥ್ಯವನ್ನು ಪರಿಗಣಿಸಿಯೇ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಘೋಷಿಸಲಾಗಿದೆ. ಕಳೆದೊಂದು ದಶಕದಿಂದ ರಾಜ್ಯದ ವೈದ್ಯಕೀಯ ಕ್ಷೇತ್ರದಲ್ಲಷ್ಟೇ ಅಲ್ಲ, ಸಾಹಿತ್ಯ, ಸಾಮಾಜಿಕ ಹೋರಾಟದಲ್ಲಿ ತನ್ನದೇ ದಾರಿ ಕೊರೆದ ಡಾ. ರವೀಂದ್ರರ ಹೆಸರು ಘೋಷಣೆಯಾಗಿದ್ದೇ ಜೆಡಿಎಸ್ ಮತ್ತು ಬಿಜೆಪಿ ವಲಯಗಳಲ್ಲಿ ಶುರುವಾದ ನಡುಕ ಅಂತಿಮವಾಗಿ ಕಾಂಗ್ರೆಸ್ ಟಿಕೆಟ್ ವಂಚಿತರ ಕಳ್ಳಾಟದ ರೂಪ ತಾಳಿದೆ.

ಡಾ. ರವೀಂದ್ರರ ವಿರುದ್ಧ ಭ್ರಷ್ಟಾಚಾರದ ಆರೋಪವಿದೆ, ಅವರ ವಿರುದ್ಧದ ಲೋಕಾ ತನಿಖೆ ಇನ್ನೂ ಮುಗಿದೇ ಇಲ್ಲ ಎಂದು ಬೀದಿಗಿಳಿದು ಪ್ರತಿಭಟಿಸುತ್ತಿರುವ ಟಿಕೆಟ್ ವಂಚಿತರ ಪಟಾಲಮ್ಮಿಗೆ ನಿಜಕ್ಕೂ ಕಾಂಗ್ರೆಸ್ ಕಾಳಜಿಯಿದ್ದಿದ್ದರೆ ಅದನ್ನು ಪಕ್ಷದ ವರಿಷ್ಠರ ಗಮನಕ್ಕೆ ತರಬೇಕಿತ್ತಲ್ಲವೆ? ಬದಲಿಗೆ ಬೀದಿಗಿಳಿದು ಬೊಬ್ಬೆ ಹಾಕುತ್ತಿರುವುದೇಕೆಂದರೆ, ಅದರ ಹಿಂದಿರುವುದು ಜೆಡಿಎಸ್ ಹಿತಾಸಕ್ತಿ ಮತ್ತು ತಮ್ಮ ಆರೋಪದಲ್ಲಿ ರವಷ್ಟೂ ಸತ್ಯವಿಲ್ಲವೆಂಬುದು ಖುದ್ದು ಆರೋಪಿಸುತ್ತಿರುವವರಿಗೇ ಚೆನ್ನಾಗಿ ಗೊತ್ತಿದೆ!

ಟಿಕೆಟ್ ವಂಚಿತ ಲಕ್ಷ್ಮಣ್ ಬೆಂಬಲಿಗರೆಂದುಕೊಂಡವರು ಮಾಡುತ್ತಿರುವ ಆರೋಪವಿಷ್ಟೆ. ಡಾ. ರವೀಂದ್ರ ಸರ್ಕಾರಿ ಸೇವೆಯಲ್ಲಿದ್ದಾಗ ಯಾರೋ ಲೇಡಿ ಡಾಕ್ಟರ್ ಓರ್ವರ ಸಂಬಳವನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ತನಿಖೆ ಬಾಕಿಯಿದೆ. ಆದ್ದರಿಂದ ಅಂಥವರಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದೇ ತಪ್ಪು!

ಈ ರೀತಿ ಆರೋಪ ಮಾಡುತ್ತಿರುವ ಸೋಕಾಲ್ಡ್ ಟಿಕೆಟ್ ವಂಚಿತ ಲಕ್ಷ್ಮಣ್ ಬೆಂಬಲಿಗರು ಡಾ. ರವೀಂದ್ರರ ವಿರುದ್ಧ ತನಿಖೆ ನಡೆಯುತ್ತಿರುವುದನ್ನು ಕೆದಕ್ಕಿದ್ದಾರೆಂದ ಮೇಲೆ ಅವರ ಇಡೀ ಜನ್ಮ ಜಾತಕವನ್ನೂ ಜಾಲಾಡಿರಲೇಬೇಕಲ್ಲ! ಹಾಗೇ ಪ್ರಕರಣದ ಎಲ್ಲಾ ವಿವರಗಳನ್ನೂ ಕೂಲಂಕಷವಾಗಿ ಕೆದಕಿರಲೇಬೇಕು. ಎಲ್ಲಾ ಗೊತ್ತಿದ್ದು ತನಿಖೆ ಬಾಕಿಯಿದೆ ಎಂಬುದನ್ನಷ್ಟೇ ಆರೋಪಿಸಿ ಈ ಬಗ್ಗೆ ಬೇರೆ ಏನನ್ನೂ ಬಾಯಿ ಬಿಡುತ್ತಿಲ್ಲ ಏಕೆ?

ಏಕೆಂದರೆ ಅದರ ವಿವರದಲ್ಲೇ ಸತ್ಯವಿದೆ ಮತ್ತು ಡಾ. ರವೀಂದ್ರರ ವಿರುದ್ಧ ಕೇವಲ ಜಾತಿ ವೈಷಮ್ಯದಿಂದ ನಡೆದ ದೌರ್ಜನ್ಯವೂ ಬಯಲಾಗುತ್ತದೆ. ಇದು ನಡೆದದ್ದು 2008 ರಲ್ಲಿ. ಆಗ ರವೀಂದ್ರ ಸಕಲೇಶಪುರ ತಾಲ್ಲೂಕಿನ ಪ್ರಭಾರಿ ಆರೋಗ್ಯ ಅಧಿಕಾರಿ. ಆ ಹೊತ್ತಿಗೆ ಬೆಳಗೋಡು ಪ್ರಾಥಮಿಕ ಆರೋಗ್ಯ ಘಟಕಕ್ಕೆ ಗುತ್ತಿಗೆ ವೈದ್ಯಾಧಿಕಾರಿಯಾಗಿದ್ದ ಡಾ. ಕೆ.ಎಸ್. ಸವಿತ ತನ್ನ ಐದು ತಿಂಗಳ ಹೆರಿಗೆ ರಜೆಯನ್ನು ಅಲ್ಲಿನ ಗುಮಾಸ್ತ ರಮೇಶ್ ಎಂಬಾತ ದುರುಪಯೋಗಪಡಿಸಿಕೊಂಡಿದ್ದಾನೆಂದು ಆರೋಗ್ಯಾಧಿಕಾರಿಯಾಗಿದ್ದ ಡಾ. ರವೀಂದ್ರರಿಗೆ ದೂರು ನೀಡುತ್ತಾರೆ. ಡಾ. ಸವಿತಾದೂರು ನೀಡಿದ ದಿನ ಎಂದರೆ 2008 ರ ಸೆಪ್ಟೆಂಬರ್ 9ರಂದೇ ಡಾ. ರವೀಂದ್ರ ಗುಮಾಸ್ತ ರಮೇಶ್‌ಗೆ ಈ ಬಗ್ಗೆ ನೋಟಿಸ್ ಜಾರಿಗೊಳಿಸಿದ್ದಾರೆ.

ಈ ಹೊತ್ತಿಗೆ ರಮೇಶ್ ಬೆಳಗೋಡು ಪ್ರಾಥಮಿಕ ಆರೋಗ್ಯ ಘಟಕದ ಪ್ರಭಾರಿ ಗುಮಾಸ್ತನಾಗಿದ್ದ ಡಾ. ರವೀಂದ್ರ ಆಡಳಿತ ವೈದ್ಯಾಧಿಕಾರಿ ಮತ್ತು ಸಕಲೇಶಪುರ ತಾಲ್ಲೂಕಿನ ಆರೋಗ್ಯಾಧಿಕಾರಿ. ಈ ಬಗ್ಗೆ ಗುಮಾಸ್ತ ರಮೇಶ್ ಅದೇದಿನ ತಪ್ಪೊಪ್ಪಿಗೆ ಪತ್ರವನ್ನೂ ಬರೆದುಕೊಡುತ್ತಾನೆ ಮತ್ತು ತಾನು ದುರುಪಯೋಗಪಡಿಸಿಕೊಂಡ 1,13,036 ರೂಪಾಯಿಗಳನ್ನು ಡಾ. ಸವಿತಾರಿಗೆ ವಾಪಸ್ಸು ಮಾಡುತ್ತೇನೆಂದೂ ಒಪ್ಪಿಕೊಳ್ಳುತ್ತಾನೆ. ಈ ಕುರಿತು ಆವತ್ತೇ ಡಾ. ರವೀಂದ್ರ ಹಾಸನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ದೂರವಾಣಿ ಮೂಲಕ ಮಾಹಿತಿ ನೀಡುತ್ತಾರೆ. ಅದೇ ವೇಳೆ ಅನಧಿಕೃತವಾಗಿ ಗೈರುಹಾಜರಾಗಿದ್ದ ಗುಮಾಸ್ತ ರಮೇಶ್‌ನನ್ನು ಕರೆಸಿಕೊಂಡು ಜಿಲ್ಲಾ ಆರೋಗ್ಯಾಧಿಕಾರಿಗಳ ಸಮಕ್ಷಮ ಆತನ ಹೇಳಿಕೆಯನ್ನೂ ದಾಖಲಿಸಿದ್ದಾರೆ.

ಇಲ್ಲಿ ಡಾ. ಸವಿತಾ ತನ್ನ ಮೇಲಧಿಕಾರಿ ರವೀಂದ್ರರಿಗೆ ನೀಡಿದ ದೂರಿನ ಪ್ರಕಾರವೇ ಆಕೆಯ ಸಂಬಳವನ್ನು ದುರುಪಯೋಗಪಡಿಸಿಕೊಂಡವನು ಗುಮಾಸ್ತ ರಮೇಶ್. ಆತನಿಗೆ ನೋಟಿಸ್ ನೀಡಿ ಶಿಸ್ತುಕ್ರಮ ಜರುಗಿಸಿರುವುದು ಡಾ. ರವೀಂದ್ರ. ಆದರೆ 2008 ರ ಸೆಪ್ಟೆಂಬರ್ 26 ರಂದು ಬಾಳ್ಳುಪೇಟೆಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದ ಲೋಕಾಯುಕ್ತ ಇನ್ಸ್‌ಪೆಕ್ಟರ್ ರುದ್ರಮುನಿ ಅಲ್ಲಿನ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿಯೂ ಸಕಲೇಶಪುರಕ್ಕೆ ಬಂದು ಲೋಕಾ ಎಸ್ಪಿ ಸ್ವಾಮಿಯವರನ್ನು ಭೇಟಿಯಾಗುವಂತೆ ಸೂಚಿಸುತ್ತಾರೆ. ಮರುದಿನ ಲೋಕಾ ಎಸ್ಪಿ ಸ್ವಾಮಿಯವರನ್ನು ಹಾಸನಕ್ಕೆ ಬಂದು ಭೇಟಿಯಾದ ಡಾ. ರವೀಂದ್ರ ಅವರ ಸಮಕ್ಷಮವೇ ಗುಮಾಸ್ತನ ಹೇಳಿಕೆ ದಾಖಲಿಸಿದ್ದಾರೆ. ವಿಚಿತ್ರವೆಂದರೆ ಎಲ್ಲಾ ತನಿಖೆ ನಡೆಸಿಯೂ ಸತ್ಯವೇನೆಂಬುದನ್ನು ತಿಳಿದೂ ಆರೋಪಿ ಗುಮಾಸ್ತನ ವಿರುದ್ಧ ತನಿಖೆ ನಡೆಸಿ ಕ್ರಮ ಜರುಗಿಸಿದ್ದ ಡಾ. ರವೀಂದ್ರರನ್ನೂ ಗುಮಾಸ್ತನ ಜೊತೆಗೇ ಲೋಕಾಯುಕ್ತರು ಬಂಧಿಸುತ್ತಾರೆ!


ಯಾವ ತಪ್ಪನ್ನೂ ಮಾಡದೆ, ಯಾರೋ ಮಾಡಿದ ತಪ್ಪಿಗೆ ಮೇಲಧಿಕಾರಿಯಾಗಿ ಕ್ರಮ ಜರುಗಿಸಿದ ತಪ್ಪಿಗೆ ಅನ್ಯಾಯವಾಗಿ ಬಂಧಿತರಾದ ರವೀಂದ್ರರಿಗೆ ಕೋರ್ಟು 2008 ರ ಅಕ್ಟೋಬರ್ 1 ರಂದು ಜಾಮೀನು ನೀಡುತ್ತದೆ. ಜೈಲಿಂದ ಹೊರಬಂದು ಅನ್ಯಾಯವಾಗಿ ತನ್ನ ಮೇಲೆ ನಡೆದ ದೌರ್ಜನ್ಯದ ಕಾರಣಗಳನ್ನು ಕೆದಕ ಹೊರಟ ರವೀಂದ್ರರಿಗೆ ಎಂಥಾ ಅಚ್ಚರಿ ಕಾದಿತ್ತೆಂದರೆ ಪ್ರಾರಂಭದಲ್ಲಿ ಗುಮಾಸ್ತ ರಮೇಶ್‌ನ ವಿರುದ್ಧ ರವೀಂದ್ರರಿಗೆ ದೂರು ನೀಡಿದ್ದ ಡಾ. ಸವಿತಾಳೇ ಈಗ ತನ್ನ ವರಸೆ ಬದಲಿಸಿ ತನಗಾದ ವಂಚನೆಯ ವಿರುದ್ಧ ಕ್ರಮ ಜರುಗಿಸಿದ್ದ ರವೀಂದ್ರರನ್ನೇ ಆರೋಪಿಯನ್ನಾಗಿ ಮಾಡಿ ಹೊಸ ದೂರು ದಾಖಲಿಸಿದ್ದಳು!


ಅಂದರೆ 2008 ರ ಆಗಸ್ಟ್ 27 ರಂದೇ ಲೋಕಾ... ಕಚೇರಿಯಲ್ಲೇ ಡಾ. ಸವಿತಾಳಿಂದ ಕಲ್ಪಿತ ದೂರೊಂ... ಬರೆಸಿಕೊಂಡು ಅದರ ಆಧಾರದ ಮೇಲೆ ಡಾ. ರವೀಂದ್ರ... ಬಂಧಿಸಲಾಗಿತ್ತು. ಇದಕ್ಕಿದ್ದ ಏಕೈಕ ಕಾರಣ ಆರೋ... ಇಲಾಖೆ ತುಂಬ ಮಡುಗಟ್ಟಿದ ಜಾತಿ. ಡಾ. ರವೀ... ಜಾತಿಯಿಂದ ಒಕ್ಕಲಿಗರಾದರೆ ಲೋಕಾಯುಕ್ತ ಇನ್ಸ್‌ಪೆ... ರುದ್ರಮುನಿ ಮತ್ತು ದೂರು ಬದಲಿಸಿದ ಡಾ. ಸವಿ... ಇಬ್ಬರೂ ಮತ್ತೊಂದು ಜಾತಿಗೆ ಸೇರಿದ್ದು. ಬಹುಶಃ ತಾನೇ... ತಪ್ಪು ಮಾಡದ ಮೇಲೆ ಯಾರಿಗೇಕೆ ಲಂಚ ಕೊಡಬೇಕೆಂ... ಡಾ. ರವೀಂದ್ರ ನಿಷ್ಠೂರವಾಗಿದ್ದೂ ಕಾರಣವಿರಬಹು... ಈ ಮಧ್ಯೆ ಹಾಸನ ಜಿಲ್ಲಾ ಆರೋಗ್ಯಾಧಿಕಾರಿಗಳು ... ಪ್ರಕರಣದ ಬಗ್ಗೆ ತಮ್ಮದೇ ಪ್ರತ್ಯೇಕ ತನಿಖೆ ನಡೆಸಿ ಇದ... ಡಾ. ರವೀಂದ್ರರನ್ನು ಅನ್ಯಾಯವಾಗಿ ಆರೋಪಿಯನ್ನಾಗಿಸಲ... ದೆಯೆಂದು ಆರೋಗ್ಯ ಇಲಾಖೆಯ ನಿರ್ದೇಶಕರಿಗೆ ವ... ನೀಡಿದ್ದಾರೆ. ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ... ರವೀಂದ್ರ ಕಲೆ ಹಾಕಿದ ದಾಖಲೆಗಳ ಪ್ರಕಾರ ಡಾ. ಸವಿ... ಸಂಬಳದ ಎಂಟೂ ಚೆಕ್ಕುಗಳು ಗುಮಾಸ್ತ ರಮೇ... ಸಕಲೇಶಪುರದ ಬ್ಯಾಂಕ್ ಖಾತೆಗೆ ಜಮೆಯಾಗಿದ್ದವು. ಅನಂ... ಆತನೇ ಅಷ್ಟೂ ಮೊತ್ತವನ್ನು ಡಾ. ಸವಿತಾ ಖಾತೆಗೆ ವಾಪ... ಕಟ್ಟಿದ್ದ.


ಈ ಬಗ್ಗೆ ಆವತ್ತಿನ ಹಾಸನದ ಜಿಲ್ಲಾಧಿಕಾರಿಗಳಾಗಿ... ನವೀನ್ ರಾಜ್‌ಸಿಂಗ್ ಲೋಕಾಯುಕ್ತ ರಿಜಿಸ್ಟ್ರಾರ್‌ರಿಗೊಂ... ಪತ್ರ ಬರೆದು ಅನ್ಯಾಯವಾಗಿ ಡಾ. ರವೀಂದ್ರರನ್ನು ... ಪ್ರಕರಣದಲ್ಲಿ ಬಲಿಪಶುವನ್ನಾಗಿಸಲಾಗಿದೆ ಎಂದೂ, ಯಾ... ಪ್ರಕರಣದ ವಿರುದ್ಧ ತನಿಖೆ ನಡೆಸಿ ಕ್ರಮ ಜರುಗಿಸಿದ್ದಾರೋ... ಅವರನ್ನೇ ಆರೋಪಿಯನ್ನಾಗಿಸಿದ್ದು ಕರ್ತವ್ಯನಿ... ಅಧಿಕಾರಿಯೊಬ್ಬನಿಗೆ ಮಾಡಿದ ಅನ್ಯಾಯವೆಂದೂ ತ... ಆತಂಕ ವ್ಯಕ್ತಪಡಿಸುತ್ತಾರೆ. ಇದರ ಬೆನ್ನಲ್ಲೇ ಹಾಸನ ಜಿ... ಪಂಚಾಯ್ತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗ... ವಿಶೇಷ ತನಿಖೆ ನಡೆಸಿ ಡಾ. ರವೀಂದ್ರರನ್ನು ಅನ್ಯಾಯವಾ... ಪ್ರಕರಣದ ಆರೋಪಿಯನ್ನಾಗಿಸಿದ್ದರ ವಿರುದ್ಧ ನ್ಯಾಯ... ಕಲ್ಪಿಸುವಂತೆ ಆರೋಗ್ಯ ಇಲಾಖೆಯ ಕಾರ್ಯದರ್ಶಿಯ... ಒತ್ತಾಯಿಸಿ ವರದಿ ನೀಡುತ್ತಾರೆ. ಈ ಎಲ್ಲಾ ವಾಸ್ತವವನ... ಮನಗಂಡೇ ಆರೋಗ್ಯ ಇಲಾಖೆ 2008 ರ ಡಿಸೆಂಬ... 29 ರಂದು ಡಾ. ರವೀಂದ್ರರನ್ನು ಮರುನಿಯುಕ್ತಿಗೊಳಿಸಿ... ಇದರ ಹೊರತಾಗ್ಯೂ ಸರ್ಕಾರ ಈ ಬಗ್ಗೆ ಪ್ರತ್ಯೇಕ ವಿಚಾರ... ನಡೆಸಿ ಗುಮಾಸ್ತ ರಮೇಶ್ ವಿಚಾರಣೆ ವೇಳೆ ತ... ತಪ್ಪೊಪ್ಪಿಕೊಂಡಿದ್ದು ಇದರನ್ವಯ ಆತನಿಗೆ ಎರಡು ವೇತ... ಬಡ್ತಿಗಳನ್ನು ಕಡಿತಗೊಳಿಸಿ ದಂಡನೆ ವಿಧಿಸಿದೆ. ಇದಲ್ಲ... ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀ...

ರಾಜ್ಯಕ್ಕೆ ಆರು ಮೆಡಿಕಲ್ ಕಾಲೇಜುಗಳನ್ನು ತರುವಲ್ಲಿ ನಾನೂ ಬೆವರು ಹರಿಸಿದ್ದೇನೆ.....!

ಡಾ. ರವೀಂದ್ರರ ವಿರುದ್ಧ ಈ ರೀತಿಯ ಷಡ್ಯಂತ್ರಕ್ಕೂ ಕಾರಣವಿದೆ. ಅದು ಅವರ ಸಂಘಟನಾ ಚಾತುರ್ಯ. 2009 ರಲ್ಲಿ ಕರ್ನಾಟಕ ರಾಜ್ಯ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ರವೀಂದ್ರರ ಹೋರಾಟದ ಫಲವಾಗೇ ಮೂರು ಬಾರಿ ಸರ್ಕಾರ ವೈದ್ಯಾಧಿಕಾರಿಗಳ ವೇತನವನ್ನು ಹೆಚ್ಚಿಸಿತು. 20 ವರ್ಷದ ಕಾಲಮಿತಿ ಮುಂಬಡ್ತಿ ಪದ್ಧತಿ ಜಾರಿಗೆ ಬಂತು. ಸಾವಿರಕ್ಕೂ ಅಧಿಕ ಗುತ್ತಿಗೆ ವೈದ್ಯಾಧಿಕಾರಿ ಗಳನ್ನು ಸರ್ಕಾರ ಸೇವೆಯಲ್ಲಿ ಕಾಯಂ ಮಾಡಬೇಕಾಯಿತು. ಪ್ರತಿ ತಿಂಗಳೂ ನಿಗದಿತವಾಗಿ ವೇತನ ಪಾವತಿಗೂ ವ್ಯವಸ್ಥೆಯಾಯಿತು.


ಬಾಲಗಂಗಾಧರ ಸ್ವಾಮಿ


ತಂದೆ ನರಸಿಂಹೇಗೌಡ


ಲಿಂಬಾವಳಿ


ಇದು ರವೀಂದ್ರರ ಹೋರಾಟದ ಕಿಚ್ಚಿಗೆ ಕೆಲ ಉದಾಹರಣೆಗಳಷ್ಟೇ. ಹಿಂದೆಂದೂ ನಡೆಯದ ಐತಿಹಾಸಿಕ ವೈದ್ಯರ ಮುಷ್ಕರಕ್ಕೆ ಕಾರಣರಾದ ರವೀಂದ್ರ ಆವತ್ತು ಆರೋಗ್ಯ ಮಂತ್ರಿಯಾಗಿದ್ದ ಅರವಿಂದ ಲಿಂಬಾವಳಿಯನ್ನು ವೇದಿಕೆಯಲ್ಲೇ ಭೂತ ಬಿಡಿಸಿದ ರೀತಿಗೆ ಸಾರ್ವತ್ರಿಕ ಪ್ರಶಂಸೆ ವ್ಯಕ್ತವಾಗಿತ್ತು. ವಾಸೆಕ್ಟಮಿ ಶಸ್ತ್ರ ಚಿಕಿತ್ಸೆಯಲ್ಲಿ ಹಾಸನವನ್ನು ರಾಜ್ಯಕ್ಕೇ ಪ್ರಥಮ ಮತ್ತು ದೇಶಕ್ಕೇ ದ್ವಿತೀಯ ಸ್ಥಾನಕ್ಕೆ ತಂದು ನಿಲ್ಲಿಸಿದ್ದೂ ಅವರ ಸಾಧನೆಯೇ. 2015 ರಲ್ಲಿ ನಾಲ್ಕೂವರೆ ಸಾವಿರಕ್ಕೂ ಅಧಿಕ ಸದಸ್ಯರನ್ನು ಮೆಡಿಕಲ್ ಕೌನ್ಸಿಲ್ಗೆ ನೋಂದಾಯಿಸುವ ಮೂಲಕ ಹೊಸ ಇತಿಹಾಸ ಬರೆದರು. ಮೆಡಿಕಲ್ ಕೌನ್ಸಿಲ್‌ನ ನಿರ್ದೇಶಕ ಮಂಡಳಿಯ ಸದಸ್ಯರಾಗಿ ಕಳೆದ ವರ್ಷ ಗದಗ, ಕೊಪ್ಪಳ ಮತ್ತು ರಾಯಚೂರುಗಳಲ್ಲಿ ಮೂರು ಸರ್ಕಾರಿ ಮೆಡಿಕಲ್ ಕಾಲೇಜುಗಳ ಸ್ಥಾಪನೆಯಲ್ಲಿ ರವೀಂದ್ರರ ಪಾತ್ರವೇ ಪ್ರಮುಖವಾಗಿತ್ತು. ಈ ವರ್ಷ ಚಾಮರಾಜನಗರ, ಮಡಿಕೇರಿ ಮತ್ತು ಕಾರವಾರಗಳಲ್ಲಿ ಮತ್ತೆ ಮೂರು ಮೆಡಿಕಲ್ ಕಾಲೇಜುಗಳು ಆರಂಭಗೊಂಡರೆ ರವೀಂದ್ರರ ಹೋರಾಟದ ಫಲವಾಗಿ ಕರ್ನಾಟಕಕ್ಕೆ ಒಟ್ಟು ಆರು ಹೊಸ ಮೆಡಿಕಲ್ ಕಾಲೇಜುಗಳ ಬಂದಂತಾಯ್ತು!

ಅಷ್ಟಕ್ಕೂ ರವೀಂದ್ರ ಪಾಂಡವಪುರದ ಹೊಸಕೋಟೆಯ ಮಾಜಿ ಜಿಲ್ಲಾ ಪಂಚಾಯ್ತಿ ಸದಸ್ಯ ಎನ್. ನರಸಿಂಹೇಗೌಡರ ಪುತ್ರ. ನರಸಿಂಹೇಗೌಡರು ಪಾಂಡವಪುರ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕಿಗೂ ಅಧ್ಯಕ್ಷರಾಗಿದ್ದವರು. ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನಲ್ಲಿ ತಮ್ಮ ಎಂಬಿಬಿಎಸ್ ಮುಗಿಸಿ ಸರ್ಕಾರಿ ವೈದ್ಯರಾಗಿ ರವೀಂದ್ರ ಮಾಡಿದ ಪ್ರಯೋಗ, ನಡೆಸಿದ ಹೋರಾಟಗಳು ಒಂದೆರಡಲ್ಲ. ಇಂಥ ಎಲ್ಲಾ ಸಾಧನೆಗಳೇ ಅವರನ್ನು ಎಮ್ಮೆಲ್ಸಿ ಚುನಾವಣೆಯ ಹೊಸ್ತಿಲಿಗೆ ತಂದು ನಿಲ್ಲಿಸಿವೆ. 'ನನ್ನನ್ನು ಅಹಂಕಾರಿಯೆನ್ನಿ; ಒರಟನೆನ್ನಿ ಸಹಿಸುತ್ತೇನೆ. ಆದರೆ ಭ್ರಷ್ಟಾಚಾರಿಯೆಂದರೆ ಮಾತ್ರ ಸಹಿಸಲಾರೆ. ಏಕೆಂದರೆ ಈ ಭ್ರಷ್ಟಾಚಾರಿ ಗಳಿಂದಾಗಿಯೇ ನಾನು ಅನ್ಯಾಯಕ್ಕೀಡಾದೆ. ಬಲಿಪಶುವಾದೆ. ಸಲ್ಲದ ಕಳಂಕಕ್ಕೂ ತಲೆಕೊಟ್ಟೆ....' ಎನ್ನುತ್ತಾರೆ ರವೀಂದ್ರ.

ಅಪಪ್ರಚಾರದ ಹಿಂದೆ ಜೆಡಿಎಸ್ ಸೂತ್ರಧಾರಿ?



ಸಿ.ಎಸ್. ಪುಟ್ಟರಾಜು

ರವೀಂದ್ರರ ವಿರುದ್ಧದ ಅಪಪ್ರಚಾರದಲ್ಲಿ ಮೇಲುನೋಟಕ್ಕೆ ಕಾಣಿಸಿಕೊಳ್ಳುತ್ತಿರುವುದು ಟಿಕೆಟ್ ವಂಚಿತ ಲಕ್ಷ್ಮಣ್ ಮತ್ತವರ ಬೆಂಬಲಿಗರಾದರೂ ಇದರ ಸೂತ್ರಧಾರರು ಮಾತ್ರ ಜೆಡಿಎಸ್‌ನ ಸಿ.ಎಸ್. ಪುಟ್ಟರಾಜು ಮತ್ತು ಕೆ.ಟಿ. ಶ್ರೀಕಂಠೇಗೌಡರೆಂಬುದು ರಹಸ್ಯವೇನಲ್ಲ.



ಕೆ.ಟಿ. ಶ್ರೀಕಂಠೇಗೌಡ

ಒಮ್ಮೆ ರವೀಂದ್ರ ವಿಧಾನ ಪರಿಷತ್ತಿಗೆ ಗೆದ್ದರೆಂದರೆ ಸಹಜವಾಗೇ ಪಾಂಡವಪುರ ಅಂದರೆ ಮೇಲುಕೋಟೆ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗುತ್ತಾರೆ. ಈಗಾಗಲೇ ಮೇಲುಕೋಟೆಯಲ್ಲಿ ಕಾಂಗ್ರೆಸ್ ಸೊರಗಿ ಸುಣ್ಣವಾಗಿದೆ. ನೆಟ್ಟಗೊಬ್ಬ ಸ್ಥಳೀಯ ನಾಯಕರೂ ಕಾಂಗ್ರೆಸ್ಸಿಗೆ ಗತಿಯಿಲ್ಲ. ಒಂದಾನೊಂದು ಕಾಲಕ್ಕೆ 20 ಸಾವಿರಕ್ಕೂ ಅಧಿಕ ಮತ ಗಳಿಸುತ್ತಿದ್ದ ಕಾಂಗ್ರೆಸ್‌ನ ದುರ್ಗತಿ ಸದ್ಯ ಯಾವ ಮಟ್ಟಕ್ಕಿದೆಯೆಂದರೆ ನಾಲ್ಕೋ ಐದೋ ಸಾವಿರದಷ್ಟು ಓಟಿಗೂ ಹೆಣಗಾಡಬೇಕು. ಕೊನೆಕೊನೆಗೆ ರೈತಸಂಘದ ಪುಟ್ಟಣ್ಣಯ್ಯರ ಜೊತೆ ಹೊಂದಾಣಿಕೆ ಮಾಡಿಕೊಂಡಾದರೂ ಮಾನ ಉಳಿಸಿಕೊಳ್ಳಬೇಕಾದ ದುಸ್ಥಿತಿ. ರವೀಂದ್ರ ಏನಾದರೂ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಬಿಟ್ಟರೆಂದರೆ ಪದವೀಧರರ ಕ್ಷೇತ್ರಕ್ಕೆ ಅವರು ಗೆಲ್ಲಲಿ ಬಿಡಲಿ ಮುಂದೊಮ್ಮೆ ಮೇಲುಕೋಟೆಗೆ ಕಾಂಗ್ರೆಸ್ ಅಭ್ಯರ್ಥಿಯಾಗುವುದಂತೂ ಶತಸ್ಸಿದ್ಧ ಎಂಬ ಭೀತಿ ಜೆಡಿಎಸ್ ಸಂಸದ ಪುಟ್ಟರಾಜುವಿಗಿದೆ.

ಸದ್ಯ ದಕ್ಷಿಣ ಪದವೀಧರರ ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿರುವ ಕೆ.ಟಿ. ಶ್ರೀಕಂಠೇಗೌಡರದ್ದೂ ಇದೇ ಸ್ಥಿತಿ. ರವೀಂದ್ರರಿಗೇನಾದರೂ ಕಾಂಗ್ರೆಸ್ ಟಿಕೆಟ್ ನಿಕ್ಕಿಯಾಯಿತೆಂದರೆ ತಾವು ನೀರು ಕುಡಿಯಲೇಬೇಕೆಂಬುದು ಜೆಡಿಎಸ್ ನಾಯಕರ ಆತಂಕ. ಅದಕ್ಕೆಂದು ಟಿಕೆಟ್ ವಂಚಿತರ ಬೆಂಬಲಿಗರ ವೇಷ ಧರಿಸಿ ರವೀಂದ್ರರ ವಿರುದ್ಧದ ಅಪಪ್ರಚಾರಕ್ಕಿಳಿದಿರುವುದು ಜೆಡಿಎಸ್ ಏಜೆಂಟರೇ ಹೊರತು ಕಾಂಗ್ರೆಸ್ ಅತೃಪ್ತರಲ್ಲ ಎಂಬುದೂ ಗುಟ್ಟೇನಲ್ಲ!



ಡಾ. ಸವಿತಾ ನೀಡಿದ ದೂರಿನ ಮೂಲ ಪ್ರತಿ



ಡಾ.ರವೀಂದ್ರ ದೋಷಮುಕ್ತರೆಂದು ನೀಡಿದ ತೀರ್ಪಿನ ಪ್ರತಿ

...ರ್ಯದರ್ಶಿಯವರು ನಡೆಸಿದ ಪ್ರತ್ಯೇಕ ವಿಚಾರಣೆಯಲ್ಲಿ ... ರವೀಂದ್ರರು ನಿರ್ದೋಷಿಯೆಂದು ದೋಷಮುಕ್ತಗೊಳಿಸಿ 2012 ರ ಅಕ್ಟೋಬರ್ 9 ರಂದು ಆದೇಶ ಹೊರಡಿಸಲಾಗಿದೆ.

ಇದು ಡಾ. ರವೀಂದ್ರರ ವಿರುದ್ಧದ ಆರೋಪದ ಹಿಂದಿರುವ ವಾಸ್ತವ ಮತ್ತು ಸತ್ಯ. ಪ್ರಾರಂಭದಲ್ಲಿ ಗುಮಾಸ್ತ ರಮೇಶ್ ತನ್ನ ಸಂಬಳ ಬಳಸಿಕೊಂಡಿದ್ದಾನೆಂದು ಡಾ. ರವೀಂದ್ರರಿಗೇ ದೂರು ಕೊಟ್ಟ ಡಾ. ಸವಿತಾ ಈ ಬಗ್ಗೆ ರವೀಂದ್ರ ಕೈಗೊಂಡ ಕ್ರಮಗಳು ಮತ್ತು ಅವರು ನಿರ್ದೋಷಿಯೆಂಬ ಅರಿವಿದ್ದೂ ತನ್ನ ಜಾತಿಬಂಧು ಲೋಕಾಯುಕ್ತ ಇನ್ಸ್‌ಪೆಕ್ಟರ್ ರುದ್ರಮುನಿಯ ಚಿತಾವಣೆ ಮೇರೆಗೆ ಇದ್ದಕ್ಕಿದ್ದಂತೆ ತನ್ನ ದಿಕ್ಕು ಬದಲಿಸುತ್ತಾಳೆ. ತನಗೆ ನೆರವಾದ ಡಾ. ರವೀಂದ್ರರ ವಿರುದ್ಧವೇ ಸುಳ್ಳು ದೂರು ದಾಖಲಿಸುತ್ತಾಳೆ. ಸತ್ಯ ಗೊತ್ತಿದ್ದು ಜಾತಿಯ ಕಾರಣಕ್ಕೆ ಲೋಕಾಯುಕ್ತರು ಡಾ. ರವೀಂದ್ರರನ್ನೇ ಅನ್ಯಾಯವಾಗಿ ಪ್ರಕರಣದ ಆರೋಪಿಯನ್ನಾಗಿಸುತ್ತಾರೆ. ಯಾರ ವಿರುದ್ಧ ರವೀಂದ್ರ ಮೇಲಧಿಕಾರಿಗಳಿಗೆ ದೂರು ಕೊಟ್ಟಿದ್ದರೋ ಆತನ ಜೊತೆಗೇ ಕ್ರಮ ಜರುಗಿಸಿದವರನ್ನೂ ಬಂಧಿಸಲಾಗುತ್ತದೆ. ತನ್ನದಲ್ಲದ ತಪ್ಪಿಗಾಗಿ ರವೀಂದ್ರ ಅಮಾನತ್ತಾಗಬೇಕಾಗುತ್ತದೆ.

ಆದರೆ ಇಲಾಖಾ ತನಿಖೆಯಲ್ಲಿ ರವೀಂದ್ರ ದೋಷಮುಕ್ತರೆಂದು ಸಾಬೀತಾಗುತ್ತದೆ. ಜಿಲ್ಲಾಧಿಕಾರಿಗಳು ನಡೆದ ಅನ್ಯಾಯದ ವಿರುದ್ಧ ಲೋಕಾಯುಕ್ತರಿಗೆ ಬರೆದ ಪತ್ರ ಮತ್ತು ಜಿ.ಪಂ. ಸಿಇಒ ರವೀಂದ್ರರ ಪರವಾಗಿ ನೀಡಿದ ವರದಿಯಲ್ಲೇ ಸತ್ಯವಿತ್ತು. ಇಷ್ಟೆಲ್ಲಾ ವಿವರಗಳಿದ್ದೂ ದಾಖಲೆಗಳಿದ್ದೂ ಇದೆಲ್ಲವನ್ನೂ ಮುಚ್ಚಿಟ್ಟು ಕೇವಲ ಲೋಕಾ ತನಿಖೆ ಬಾಕಿಯಿದೆ ಎಂದಷ್ಟೇ ಹೇಳುವ ಟಿಕೆಟ್ ವಂಚಿತರ ಬೆಂಬಲಿಗರದ್ದು ಆತ್ಮವಂಚನೆಯಲ್ಲದೇ ಮತ್ತೇನು?

ಕಾಂಗ್ರೆಸ್ ಟಿಕೆಟ್ ಸಿಕ್ಕ ಒಂದೇ ಕಾರಣಕ್ಕೆ ಸತ್ಯ ಮುಚ್ಚಿಡುವ ಟಿಕೆಟ್ ವಂಚಿತರಿಗೂ ಸತ್ಯ ಗೊತ್ತಿದ್ದೂ ಅನ್ಯಾಯವಾಗಿ ರವೀಂದ್ರರನ್ನು ಆರೋಪಿಯನ್ನಾಗಿಸಿದ ಲೋಕಾಭ್ರಷ್ಟರಿಗೂ ಹೆಚ್ಚು ವ್ಯತ್ಯಾಸವೇನಿಲ್ಲ.

■ ರಾ. ಸೋಮನಾಥ್

ಚಕ್ರವರ್ತಿಗಳ ಸೂಳೆಮಕ್ಕಳು ಇನ್ನೂ ಇದ್ದಾರಂತಲ್ಲಾ!

ಥೂತ್ತೇರಿ

ಯಾಹೂ

ನಮ್ಮ ನಾಡಿನ ಚಕ್ರವರ್ತಿಗಳಿಗೆ ಸೂಳೆಯರಿದ್ದರಂತೆ. ...ಗಿನ ಜಗದ್ಗುರುಗಳಂತೆಯೇ ಆಗಿನ ಚಕ್ರವರ್ತಿಗಳು ದೇಶದ ...ಂಬೆಲ್ಲಾ ಹರಡಿದ್ದರಂತೆ. ಅವರಿಗೆ ಪಟ್ಟದರಸಿಯರಲ್ಲದೆ ...ಳೆಯರೂ ಇದ್ದರಂತೆ. ಉದಾಹರಣೆಗೆ ನಮ್ಮ ...ಷ್ಣದೇವರಾಯನಿಗೆ ಚಿನ್ನಾಂಬೆ ಮತ್ತು ತಿರುಮಲಾಂಬೆಯ ...ರತಾಗಿ ನೂರಹನ್ನೊಂದು ಜನ ಇದ್ದರಂತೆ. ಅವರೆಲ್ಲಾ ...ಳೆಯರಂತೆ. ಅಕಸ್ಮಾತ್ ಇವರಿಗೆ ಮಕ್ಕಳೂ ...ಗುತ್ತಿದ್ದವಂತೆ. ಅವೆಲ್ಲಾ ಚಕ್ರವರ್ತಿಯನ್ನ ಹೊಗಳಿಕೊಂಡು ...ರುಗುತ್ತಿದ್ದವಂತೆ. ಆ ಸಂತತಿಗಳು ಈಗಲೂ ಭಾರತದಲ್ಲಿ ...ದುಕುಳಿದು ಬಂದಿವೆಯಂತೆ. ಏಕೆಂದರೆ ನಮ್ಮ ದೇಶದ ...ತಿಗಳು ಅನಾದಿಕಾಲದಿಂದಲೂ ತಮ್ಮ ಆವರಣದಲ್ಲೇ ...ದುಕಿ ಬಂದಿವೆ. ಆದ್ದರಿಂದ ಅವುಗಳ ರಕ್ತವೂ ...ರಕೆಯಾಗದೆ ಉಳಿದಿರುವುದರಿಂದ, ಮೂಲಗುಣಗಳೂ ...ಗೆಯೇ ಉಳಿದು ಬಂದಿವೆಯಂತೆ. ಈಗಲೂ ಅವು ...ದೇ ಕೆಲಸ ಮಾಡುತ್ತ, ಆಧುನಿಕ ಭಾರತದಲ್ಲೂ ನಮೋ ...ಂತ್ರ ಜಪಿಸುತ್ತ ಮೋದಿಯನ್ನ ಹಿಗ್ಗಾಮುಗ್ಗಾ ಹೊಗಳುತ್ತ ...ಳಿತಿವೆಯಂತಲ್ಲಾ, ಥೂತ್ತೇರಿ!!

* * *

ಚಕ್ರವರ್ತಿಯ ಸೂಳೆ ಸಂತತಿಯ ಪ್ರಕಾರ, ಮೋದಿ ...ಹಾತ್ಮ ಪವಾಡವನ್ನೇ ಮೆರೆದನಂತೆ. ಹಾಳುಬಿದ್ದ ...ಸ್ಪತ್ರೆಗಳಿಗೆ ಔಷಧಿ ತುಂಬಿದನಂತೆ. ಸ್ಕೂಲುಗಳಿಗೆ ಸ್ಲೇಟು, ...ಳಪ, ಎಕ್ಸ್‌ಸೈಜ್ ತುಂಬಿದನಂತೆ. ಕರೆಂಟು ಕಂಬ ...ಣದ ಹಳ್ಳಿಗಳಿಗೆ ತಂತಿ ಎಳೆದು ಬಿಸಾಡಿದನಂತೆ. ...ಡವರ ಮನೆಗಳಲ್ಲಿ ಇದ್ದ ಮಣ್ಣಿನ ಒಲೆ ಹೊಡೆಸಿ ಹಾಕಿ ...ಲ ತೋರಿ ಗ್ಯಾಸು ತುಂಬಿದನಂತೆ. ರೈತರಿಗೆ ಕುಳಿತಲ್ಲಿಗೇ ...ಗ್ಗ ಸಪ್ಲೈ ಮಾಡಿದನಂತೆ. ಮೊಬೈಲ್ ಕೊಟ್ಟು ಅದರಲ್ಲೇ ...ಂಕಿಬಾತ್ ಕೇಳಿ ಎಂದನಂತೆ. ಶ್ರೀಮಂತರಿಗೊಂದು ...ಪ್ ಸಿಗಿಸಿ ಅದರ ಇನ್ನೊಂದು ತುದಿಯನ್ನು ಬಡವರಿಗೆ ...ಗಿಸಿ. ಸ್ವಿಚ್ಚಾಕಿದ ಕೂಡಲೇ ಶ್ರೀಮಂತರ ಗ್ಯಾಸೆಲ್ಲಾ ಬಡವರಿಗೆ ...ಂಬಿಕೊಂಡು ಭಾರತದ ತುಂಬೆಲ್ಲ ಗ್ಯಾಸೊ ಗ್ಯಾಸಂತೆ. ...ರ್ಚಿಗೆ ಕಾಸಿಲ್ಲದೆ ರೈತರು ಇನ್ನು ಮುಂದೆ ಹೆದರುವ ...ಗತ್ಯವಿಲ್ಲವಂತೆ. ಅಷ್ಟೇ ಅಲ್ಲದೆ ವಿದೇಶಿ ಬ್ಯಾಂಕುಗಳಲ್ಲಿರುವ ...ಪ್ಪುಹಣ ದೇಶದ ಜನರ ಬ್ಯಾಂಕಿನ ಖಾತೆಗೆ ಬಂದು ...ಳುತ್ತ, ಆಗ ಆಟೋಮ್ಯಾಟಿಕ್ಕಾಗಿ ಇಡೀ ದೇಶದ ಜನರ ...ಯಲ್ಲಿ ಕಾಸಿರುತ್ತದೆ. ಯಾರೂ ಪಿಕ್‌ಪಾಕೆಟ್ ಮಾಡುವ ...ಗತ್ಯವಿರುವುದಿಲ್ಲ, ಕಾಸಿಗಾಗಿ ಕಳ್ಳತನ ಇರುವುದಿಲ್ಲ, ಕಾಸಿದ್ದ ...ರಣಕ್ಕೆ ಕೊಲೆಗಳಿರುವುದಿಲ್ಲ, ಸುಲಿಗೆಯಿರುವುದಿಲ್ಲ, ...ತ್ಯಾಚಾರ ನಿಂತೇ ಹೋಗುತ್ತವೆ. ಏಕೆಂದರೆ ಅತ್ಯಾಚಾರಿಗಳು ...ದಲು ಕಾಸು ಕೊಡುತ್ತೇನೆಂದರೆ ಯಾವ ಹೆಣ್ಣೂ ...ರಾಕರಿಸುವುದಿಲ್ಲ. ಎಲ್ಲರ ಬಳಿ ದುಡ್ಡಿರುವ ಕಾರಣಕ್ಕೆ ...ಡೀ ದೇಶದಲ್ಲಿ ಸ್ಟ್ರೈಕ್ ಇರುವುದಿಲ್ಲ. ಆಟೋ, ಬಸ್ಸು, ಲಾರಿ, ರೈಲಿಗೆ ಯಾರೂ ಕಲ್ಲು ಬೀರುವುದಿಲ್ಲ. ಪೂಜಾರಿಗಳ ಬಳಿಯಲ್ಲಿಯೂ ಹಣವಿರುವುದರಿಂದ ಮಂಗಳಾರತಿ ತಟ್ಟೆಗೆ ಯಾರೂ ಕಾಸು ಹಾಕುವ ಪ್ರಮೇಯವಿರುವುದಿಲ್ಲ. ಬರಿ ಪ್ರಸಾದ ತೆಗೆದುಕೊಂಡು ಹೋಗಬಹುದು ಎಂದು ಚಕ್ರವರ್ತಿಯ ಸೂಳೆ ಸಂತತಿ ಗಂಟಲು ಹರಿಯುತ್ತಿವೆಯಂತಲ್ಲಾ, ಥೂತ್ತೇರಿ!!

* * *

ಮೋದಿ ಮಾಡಿರುವ ಪವಾಡ ಇಷ್ಟಕ್ಕೇ ನಿಂತಿಲ್ಲ. ಸರ್ಕಾರಿ ಜನರಿಗೆ ಜೇಬು ತುಂಬ ಸಂಬಳ ಕೊಡುವುದರಿಂದ ಅವರ್‍ಯಾರು ಲಂಚ ತೆಗೆದುಕೊಳ್ಳುವುದಿಲ್ಲ. ಬದಲಿಗೆ ಮೋದಿಯನ್ನೇ ಕೊಂಡಾಡುತ್ತ ಕಾಲ ಹಾಕುತ್ತವೆ. ಗ್ಯಾಸಿನ ದೆಸೆಯಿಂದ ಬಡವ ಶ್ರೀಮಂತರ ನಡುವೆ ಸಮಾನತೆ ಬಂದಾಗಿದೆ. ದೇಶದ ತುಂಬ ಸಮಸ್ಯೆಗಳೇ ಇಲ್ಲದಿರುವುದರಿಂದ ಪ್ರತಿಭಟನೆ ಸತ್ತು ಹೋಗಿದೆ. ಮುಂದೆ ಸಂಭವಿಸುವ ಕ್ರಾಂತಿ ಯಾವುದೆಂದರೆ ಇಡೀ ದೇಶ ಮೋದಿಗೆ ಓಟು ಮಾಡಿಬಿಡುತ್ತೆ. ಆಗ ಆಟೋಮ್ಯಾಟಿಕ್ಕಾಗಿ ಭಾರತದಲ್ಲಿ ಕಾಂಗ್ರೆಸ್, ಜನತಾ ಪರಿವಾರ, ಪ್ರಾದೇಶಿಕ ಪಕ್ಷಗಳು ಹಾಗು ಸಿಪಿಐ ಮತ್ತು ಸಿಪಿಎಂ ಪಾರ್ಟಿಗಳ ಜೊತೆಗೆ ನಕ್ಸಲ್ ಮಾರಿಗಳು ನಿರ್ನಾಮವಾಗಿ ಹೋಗುತ್ತಾರೆ. ಇದರ ನಡುವೆ ಕನ್ಹಯ್ಯ ಎಂಬ ಅನಿಷ್ಟ ಕಳೆ ಬೇರುಸಹಿತ ನಾಶವಾಗುತ್ತದೆ. ಇಂತಹ ಸ್ಥಿತಿಯೊಂದು ಬರುವ ಸೂಚನೆ ಕಂಡಿದ್ದರಿಂದಲೇ ಭಾರತದ ಬುದ್ಧಿಜೀವಿ ವಲಯ ವಾಸ ಮಾಡುತ್ತಿರುವ ಯೂನಿವರ್ಸಿಟಿ ಕ್ಯಾಂಪಸ್‌ಗಳಲ್ಲಿ ಕನ್ಹಯ್ಯನಂತಹ ಪಡ್ಡೆ ಹುಡುಗರನ್ನು ಮುಂದೆ ಬಿಟ್ಟುಕೊಂಡು ಹೋರಾಟ ಮಾಡಲು ಹೊರಟಿದ್ದಾರೆ. ಅಂಥವರಿಗೆ ದೇಶದ ಜನ ತಕ್ಕ ಉತ್ತರ ಕೊಟ್ಟಿದ್ದಾರೆ ಎಂದು ಹಲುಬುವ ಚಕ್ರವರ್ತಿ ಸೂಳೆ ಮಕ್ಕಳಿಗೆ ಬಿಜೆಪಿ ಎಂಬ ಮನೆಹಾಳ ಪಾರ್ಟಿ ಪಡೆದಿರುವ ಓಟು ಕೇವಲ ಮೂವತ್ತು ಪರಸೆಂಟ್ ಎನ್ನುವುದು ಮರೆತೇಹೋಗಿದೆಯಂತಲ್ಲಾ, ಥೂತ್ತೇರಿ!!

* * *

ಅತ್ತ ಮೋದಿಯದು ಆ ಕತೆಯಾದರೆ ಇತ್ತ ಮೋದಿ ಬ್ರದರ್ ಯಡಿಯೂರಪ್ಪ ಕೋರ್ಟಿನ ಕಟಕಟೆಯಲ್ಲಿ ಗೊಳೊ ಎಂದು ಅತ್ತು ಕಣ್ಣೀರು ಒರಸಿಕೊಂಡರಂತಲ್ಲಾ. ಯಡ್ಡಿ ಪಕ್ಕನಿಸಿದ ಕೂಡಲೇ ಬೆಚ್ಚಿಬಿದ್ದು ಪದರಿಕೊಂಡು ಎದ್ದಿದ್ದು ಅತ್ತ ಬರಗಾಲದ ಪ್ರದೇಶ ಹುಡುಕುತ್ತ ಹೋಗಬೇಕಾದರೆ, ಇತ್ತ ಯಡ್ಡಿ ಕೋರ್ಟು ಬಾಗಿಲಲ್ಲಿ ಬಿಕ್ಕಳಿಸಿದ್ದು ಚೆಡ್ಡಿಗಳಿಗೆ ಆತಂಕ ಸೃಷ್ಟಿಸಿತಂತಲ್ಲಾ. ಕಣ್ಣೀರು ಸಾಮಾನ್ಯವಾಗಿ, ಅದು ಪಾಪಪ್ರಜ್ಞೆಯಿಂದಲೂ ಬರಬಹುದು. ಅರಿಯದೇ ಮಾಡಿದ ಅಪರಾಧದಿಂದಲೂ ಆಸುಕಬಹುದು ಅಥವಾ ಅರಿತೇ ಮಾಡಿದ ಕೃತ್ಯದ ಫಲವಾಗಿ ಶಿಕ್ಷೆ ನೆನೆದು ಬರಬಹುದು. ಕಣ್ಣೀರು ಬಲಹೀನತೆಯ ಸಂಕೇತವಂತೆ. ನಾಯಕನಾದವನ ಕಣ್ಣೀರು ಹಿಂಬಾಲಕರನ್ನು ಕನಲಿಸಬಹುದು. ಕಣ್ಣೀರ ಬಗ್ಗೆ ಇದಾವುದನ್ನೂ ಅರಿಯದ ಯಡಿಯೂರಪ್ಪ ಅತ್ತು ಬಿಟ್ಟಿದ್ದಾರೆ. ಕರ್ಚೀಫಿನಿಂದ ಕಣ್ಣೊರೆಸಿಕೊಂಡಿದ್ದಾರೆ. ಇದರಿಂದ ನ್ಯಾಯಾಧೀಶರು ಕರಗಬಹುದೆಂಬ ತೋರಿಕೆಯ ಅಳು ಕೂಡ ಆಗಿರಬಹುದು. ಏಕೆಂದರೆ ಯಡಿಯೂರಪ್ಪನವರು ಒಂದಿಷ್ಟು ಆಸ್ತಿ ಮಾಡಿಕೊಂಡು ಸುಮ್ಮನಾಗಿಲ್ಲ. ವಂಶಗಳೇ ಉದ್ಭವಿಸಿ ಬಂದು ತಿಂದರೂ ಕರಗದಂತ ಆಸ್ತಿ ಮಾಡಿಬಿಟ್ಟಿದ್ದಾರೆ. ಯಡಿಯೂರಪ್ಪನವರನ್ನು ಬಿಡಿಗಣ್ಣಾಗಿ ನೋಡಿದರೆ ಆಂಧ್ರದಲ್ಲಿ ಮೊನ್ನೆ ಸಿಕ್ಕ ಅಧಿಕಾರಿಯಂತವರು ಆತನದ್ದು ಕೇವಲ ಎಂಟು ನೂರು ಕೋಟಿ ಸಂಗ್ರಹವಾದರೆ, ಯಡಿಯೂರಪ್ಪನವರದ್ದು ಎಂಟು ಸಾವಿರ ಕೋಟಿಗೂ ಮಿಕ್ಕ ಆಸ್ತಿ ಎಂಬುದು ಕಣ್ಣಳತೆಗೆ ಸಿಕ್ಕುವ ಅಂದಾಜಂತಲ್ಲಾ, ಥೂತ್ತೇರಿ!!

* * *

ಯಡಿಯೂರಪ್ಪನವರು ಕೋರ್ಟಿನಲ್ಲಿ ಅತ್ತರೆಂದು ಈಶರಪ ಒಳಗೊಳಗೇ ಖುಷಿಪಡುವಂತಿಲ. ಯಾಕೆಂದರೆ



ಅವರೂ ಕೂಡ ಕೋರ್ಟಿಗೆ ಬಂದು ಹೇಳಿಕೆ ಕೊಡಬೇಕೆಂದು ಕೋರ್ಟು ಕುಣಿಕೆ ಸಮೇತ ಹಗ್ಗ ಬೀಸಿದೆ. ಆದರೂ ಈಶ್ವರಪ್ಪ ಅಳುಕಿ ಅಳು ತಂದುಕೊಳ್ಳುವ ವ್ಯಕ್ತಿಯಲ್ಲ. ಅವರ ಅಳು ಏನಿದ್ದರೂ ಮಾರಣಾಂತಿಕ ಹೊಡೆತ ಬಿದ್ದಾಗ, ಕಾಲಿನ ಮೇಲೆ ಕಲ್ಲುಬಿದ್ದಾಗ ಅಥವಾ ಬಾಗಿಲಿಗೆ ಕೈ ಸಿಕ್ಕಿಕೊಂಡು ಜಜ್ಜಿದಾಗ ಅಳುತ್ತಾರೆಯೇ ಹೊರತು ಯಡ್ಡಿಯಂತಹ ಅಳುಬುರುಕ ಆಸಾಮಿಯಲ್ಲ. ಮತ್ತೊಂದು ವಿಶೇಷವೆಂದರೆ ಇಡೀ ಪಾರ್ಟಿಯೇ ಭ್ರಷ್ಟಗೊಂಡಿರುವುದರಿಂದ ಅವರ್‍ಯಾವ ಕೋರ್ಟು ಕಚೇರಿಗಳಿಗೆ ಹೆದರುವುದಿಲ್ಲ. ಬದಲಿಗೆ ಭ್ರಷ್ಟತೆ ಕುರಿತು ಗಂಟಲು ಎತ್ತರಿಸಿ ಮಾತನಾಡಬಲ್ಲರು. ವ್ಯಭಿಚಾರ ವಿರೋಧಿಸಿ ಗಂಟೆಗಟ್ಟಲೆ ಉಪನ್ಯಾಸ ಕೊಡಬಲ್ಲರು. ಇಂತಹ ಭಂಡ ಧೈರ್ಯ ಭಾರತದಲ್ಲಿ ಜನ್ಮತಾಳಿರುವ ಯಾವ ರಾಷ್ಟ್ರೀಯ ಪಾರ್ಟಿಯವರಿಗೂ ಇಲ್ಲವಂತಲ್ಲಾ, ಥೂತ್ತೇರಿ!!

* * *

ಪತ್ರಕರ್ತನೊಬ್ಬ ತಾನೇ ದೆಹಲಿಗೆ ಹೋಗಿಬಂದವನಂತೆ ಸೋನಿಯಾ ಟೀಮು ಸಿದ್ದು ಇಳಿಸಿ ಖರ್ಗೆ ಸ್ಥಾಪನೆ ಮಾಡುವ ಕತೆಯನ್ನು ಸ್ವಾರಸ್ಯವಾಗಿ ಹೆಣೆದನಂತಲ್ಲಾ. ಅದನ್ನು ಓದಿದ ಮಾಜಿ ಅಡ್ವೋಕೇಟ್ ಜನರಲ್ ಕೂಡ ಇನ್ನು ಸಿದ್ದು ಕತೆ ಮುಗಿಯಿತೆಂದೇ ಸಿಕ್ಕಸಿಕ್ಕವರಿಗೆಲ್ಲಾ "ಸಿದ್ದು ಬದಲಾವಣೆ ಬಗ್ಗೆ ವಿಜಯ ಕರ್ನಾಟಕ ಓದಿ ನೋಡಿ" ಎಂದು ಹೇಳಲಾರಂಭಿಸಿದ್ದರಂತಲ್ಲಾ. ಆದರೆ ಸಿದ್ದು ನಿರಾಳವಾಗಿ ತಮ್ಮ ಪಾಡಿಗೆ ತಾವಿರುವುದನ್ನು ನೋಡಿ ಏನೋ ನಡೆಯುತ್ತದೆಂದು ಭಾವಿಸಿದವರಿಗೆಲ್ಲಾ ಮೈ ಪರಚಿಕೊಳ್ಳುವಂತಾಗಿದೆಯಲ್ಲಾ. ಹಾಗೆ ನೋಡಿದರೆ ಯಾವ ಪತ್ರಿಕೆಯವರಿಗೂ ಸಿದ್ದು ಕಂಡರಾಗುತ್ತಿಲ್ಲ. ಇದನ್ನು ಸಿದ್ದು ಆಪ್ತ ವಲಯ ಪತ್ತೆ ಹಚ್ಚಿ ಮಾಧ್ಯಮದವರಿಗೆ ಏನಾದರೂ ಸತ್ಕಾರ ಮಾಡಬೇಕಲ್ಲಾ ಎಂದು ಸಲಹೆ ಕೊಡಲಾಗಿ, ಮಾಧ್ಯಮ ಸಲಹೆಗಾರರು "ಯಂತ ಮಾಡುವುದು? ಅವರ ಕೆಲಸ ಅವರು ಮಾಡಲಿ, ನಮ್ಮ ಕೆಲಸ ನಾವು ಮಾಡುವ" ಎಂದರಂತಲ್ಲಾ. ಪ್ರತಿಭಟನೆ ವಿರೋಧಿಗಳ ಹಕ್ಕು. ಹಾಗೆ ಟೀಕಾಪ್ರಹಾರದ ಲೇಖನ ಬರೆಯುವುದು ಪತ್ರಿಕೆಯವರ ಹಕ್ಕು ಎಂದು ಭಾವಿಸಿರುವ ಸಿದ್ದು ಎದುರಿಗೆ ಉದಯೋನ್ಮುಖ ಕಾಲಮಿಷ್ಟರೆಲ್ಲಾ ಕೆರೆದುಕೆರೆದು ಸುಸ್ತಾಗಿದ್ದಾರಂತಲ್ಲಾ. ಈ ಪೈಕಿ ಎಸ್.ಎಂ. ಜಾಮದಾರ್ ಎಂಬ ಅಧಿಕಾರಿ ಸರ್ಕಾರಿ ಸೇವೆಯ ನಿವೃತ್ತಿಯ ನಂತರ ಸಿದ್ದು ಸರ್ಕಾರದ ವಿರುದ್ಧ ರೀಮುಗಟ್ಟಲೆ ಬರೆದು ವಿಆರ್‌ಎಲ್ ಲಾರಿಗೆ ತುಂಬತೊಡಗಿದ್ದಾರಂತಲ್ಲಾ. ಇದೇ ಜಾಮದಾರ್ ಜಾತಿಗಣತಿಯನ್ನು ಪೂರ್ವಗ್ರಹದ ರಾಜಕೀಯ ಗಣತಿಯೆಂದು ಜರಿದಿದ್ದರು. ತಲೆಯೊಳಗೆ ಕಿಂಚಿತ್ ಮತೀಯ ಮಲದಂತ ಇದ್ದರೂ ಸಾಕು. ಸತ್ಯಸಂಗತಿಗಳೂ ತಿರುಚಿಕೊಳ್ಳುತ್ತವೆ ಎಂಬುದು ಈ ಉದಯೋನ್ಮುಖ ಕಾಲಮಿಷ್ಟರಿಗೆ ಈ ಜನ್ಮದಲ್ಲಿ ಹೊಳೆಯುವುದಿಲ್ಲವಂತಲ್ಲಾ, ಥೂತ್ತೇರಿ!!! ■

ಬೇಕು ಜಿಶಾಳಿಗೆ ನ್ಯಾಯ



ಬೇಕು ಜಿಶಾಳಿಗೆ ನ್ಯಾಯ

'Justice for Jisha' ಎಂಬುದು ಕೇವಲ ಕೇರಳದ ಸಾಮಾಜಿಕ ಜಾಲತಾಣಗಳ ಆಕ್ರೋಶವಾಗಿ ಮಾತ್ರವೇ ಉಳಿದಿಲ್ಲ, ಅದು ಕೇರಳದಾಚೆಗೆ, ದೇಶವ್ಯಾಪಿಯಾಗಿ ಕ್ಷಣಕ್ಷಣಕ್ಕೂ ಹಬ್ಬುತ್ತೊಡಗಿದೆ. ದೇಶವಿದೇಶಗಳ ಮಾನವೀಯ ಹೃದಯಗಳೆಲ್ಲವನ್ನೂ ಕಲಕುತ್ತಲೇ ಇದೆ. ಇವತ್ತು ಬೆಳಗ್ಗೆ ಕೇರಳದ ರಾಜಧಾನಿ ತಿರುವನಂತಪುರಂನಲ್ಲಿ ಅಲ್ಲಿನ ಮಹಿಳಾ ಕಾರ್ಯಕರ್ತರೆಲ್ಲ ಸೇರಿ ನಡೆಸಿದ ಪ್ರತಿಭಟನೆಯ ದೃಶ್ಯವೇ ಒಂದಾದರೆ ಕೇರಳದ ಬೇರೆ ಬೇರೆ ಭಾಗಗಳಲ್ಲಿ ಬೀದಿಗಿಳಿದ ಪ್ರಜ್ಞಾವಂತರ ಆಕ್ರೋಶವೇ ಮತ್ತೊಂದು ರೀತಿಯಿತ್ತು.

ಜಸ್ಟೀಸ್ ಫಾರ್ ಜಿಶಾ ಅಂದರೆ ಜಿಶಾಳಿಗೆ ನ್ಯಾಯಕ್ಕಾಗಿ ಕೇರಳದಂಥ ರಾಜ್ಯವೊಂದರಲ್ಲಿ ವ್ಯಾಪಿಸುತ್ತಿರುವ ಆಕ್ರೋಶಕ್ಕೆ ಹೋಲಿಸಿದರೆ ದೆಹಲಿಯ ನಿರ್ಭಯಾ ರೇಪ್ ಅಂಡ್ ಮರ್ಡರ್‌ನ ಕ್ರೌರ್ಯದ ವಿರುದ್ಧ ಬೀದಿಗಿಳಿದವರ ಆಕ್ರೋಶದ ಸದ್ದೇ ದೊಡ್ಡದಿರಬಹುದು. ದೆಹಲಿಯ ನಡುರಸ್ತೆಯಲ್ಲಾದ ರೇಪ್ ಅಂಡ್ ಮರ್ಡರ್‌ಗೂ ಕೇರಳದ ಯಾವುದೋ ಮೂಲೆಯ ಇನ್ನಾವುದೋ ಕುಗ್ರಾಮವೊಂದರಲ್ಲಾದ ಪೈಶಾಚಿಕತೆಗೂ ಅಂತ ವ್ಯತ್ಯಾಸವಿಲ್ಲದೇ ಹೋದರೂ ರಾಷ್ಟ್ರವ್ಯಾಪಿ ನ್ಯೂಸ್ ಚಾನಲ್ಲುಗಳ ನಿರ್ಲಕ್ಷ್ಯದಿಂದಾಗಿ ಜಿಶಾಳ ಭೀಭತ್ಸ ಭಾರತೀಯರ ಮನಸ್ಸನ್ನು ಮುಟ್ಟಲೇ ಇಲ್ಲ.

ಆಕೆಯ ದೇಹದ ಮೇಲಾದ ಮೂವತ್ತಕ್ಕೂ ಅಧಿಕ ಇರಿತಗಳು, ತಲೆಯ ಚಿಪ್ಪೇ ಚಿಂದಿಯೆದ್ದ ಹೊಡೆತ, ಮರ್ಮಾಂಗಕ್ಕೆ ರಾಡೊಂದನ್ನು ತಿವಿದ ಪೈಶಾಚ ಮತ್ತು ಹೊಟ್ಟೆಯ ಕರುಳೆಲ್ಲ ಹೊರಬಿದ್ದು ಚೆಲ್ಲಾಪಿಲ್ಲಿಯಾದ ಭೀಭತ್ಸ ದೆಹಲಿಯ ನಿರ್ಭಯಾ ಅರ್ಥಾತ್ ಜ್ಯೋತಿ ಸಿಂಗ್ ಮೇಲಾದ ಕ್ರೌರ್ಯಕ್ಕಿಂತ ಕಡಿಮೆ ಏನಲ್ಲ. ಇನ್ನೂ ವಿಷಾದವೆಂದರೆ ಜಿಶಾ ಓರ್ವ ದಲಿತ ಯುವತಿ!

ಇದು ನಡೆದದ್ದು ಮೊನ್ನೆ ಏಪ್ರಿಲ್ 28ರ ಗುರುವಾರ ರಾತ್ರಿ. ಕೇರಳದ ಎರ್ನಾಕುಲಂನ ಸರ್ಕಾರಿ ಕಾನೂನು ಕಾಲೇಜಿನ ವಿದ್ಯಾರ್ಥಿನಿ ಜಿಶಾ ಹುಟ್ಟೂರು ಇರಿಂಗೋಲ್ ರಾಯಮಂಗಲಂಗೆ ರಜೆ ಪ್ರಯುಕ್ತ ಬಂದಿದ್ದಾಳೆ. ಅದು ಕೇರಳದ ಪೆರುಂಬಾವೂರ್ ಜಿಲ್ಲೆಗೆ ಸೇರಿದ ಕುರುಪ್ಪಾಂಪಾಡಿ ಪೊಲೀಸ್ ಠಾಣೆ ವ್ಯಾಪ್ತಿಯ ಗಡಿ ಗ್ರಾಮ. ಇನ್ನೇನು ಪರೀಕ್ಷೆ ಸಮೀಪಿಸಿದೆಯೆಂದು ಅದರ ತಯಾರಿಯಲ್ಲಿದ್ದ ಜಿಶಾಳಿಗಿನ್ನೂ ಇಪ್ಪತ್ತೊಂಬತ್ತರ ಹದಿವಯಸ್ಸು. ಆಕೆಗೊಬ್ಬ ಅಕ್ಕ ಇದ್ದಾಳೆ. ಮದುವೆಯಾಗಿದೆ. ತಂದೆ ಯಾವುದೋ ಕಾಲಕ್ಕೆ ಮನೆಬಿಟ್ಟು ಹೋದವನು ಇನ್ನೆಲ್ಲೋ ಪ್ರತ್ಯೇಕವಾಗಿ ಮನೆ ಮಾಡಿಕೊಂಡಿದ್ದಾನಂತೆ. ತಾಯಿಯ ಹೆಸರು ರಾಜೇಶ್ವರಿ. ಭಾರತದ ಅದೆಷ್ಟೋ ದೈನಾಸಿ ದಲಿತ ಕುಟುಂಬಗಳ ಏಕಾಂಗಿ ವಿಧವೆಯರ ಹಾಗೆ ತಾಯಿ ರಾಜೇಶ್ವರಿ ಗಂಡ ಕೈಬಿಟ್ಟನಂತರ ಕೂಲಿನಾಲಿ ಮಾಡಿಯೇ ತನ್ನಿಬ್ಬರು ಹೆಣ್ಣು ಮಕ್ಕಳನ್ನು ಬೆಳೆಸುತ್ತಾಳೆ. ಹಿರಿಮಗಳು ದೀಪಾಳ ಮದುವೆಯನ್ನೂ ತಾನೇ ನಿಂತು ಮಾಡಿದ್ದಾಳೆ. ಕೊನೆಯವಳೇ ಜಿಶಾ. ಆಕೆಯನ್ನು ವಕೀಲೆಯನ್ನಾಗಿ ಬೆಳೆಸಬೇಕೆಂಬ ತಾಯಿಯ ಬಯಕೆಗೆ ಹರಿದ ಕಣ್ಣೀರು, ಸುರಿದ ಬೆವರು ಅಷ್ಟಿಷ್ಟಲ್ಲ.

ಅದು ಹನ್ನೆರಡು ವರ್ಷಗಳ ಕಾಲದ ಬಡತಾಯಿಯೊಬ್ಬಳ ಸುದೀರ್ಘ ಸಮರ. ಗಂಡ ಕೈಕೊಟ್ಟು ಪರಾರಿಯಾದ ಬಳಿಕ ಮನೆಗೆಲಸ ಮಾಡಿ ಮಗಳು ಜಿಶಾಳನ್ನು ಓದಿಸಲಾರಂಭಿಸಿದ ರಾಜೇಶ್ವರಿಗೆ ಆಕೆ ಪಿಯುಸಿ ಮುಗಿಸಿದ ದಿನ ಆದ ಸಂತೋಷ ಅಷ್ಟಿಷ್ಟಲ್ಲ. ಜಿಶಾಳೇ ಬಯಸಿದಂತೆ ಆಕೆಯನ್ನು ಎರ್ನಾಕುಲಂನ ಸರ್ಕಾರಿ ಕಾಲೇಜಿಗೆ ಸೇರಿಸಿದಳು. ಅಲ್ಲಿ ಸರ್ಕಾರಿ ಬಾಲಕಿಯರ ಹಾಸ್ಟೆಲಿನಲ್ಲಿದ್ದುಕೊಂಡೇ ಜಿಶಾ ಡಿಗ್ರಿ ಮುಗಿಸಿದಳು. ನಂತರ ಅದೇ ಎರ್ನಾಕುಲಂನ ಸರ್ಕಾರಿ ಕಾನೂನು ಕಾಲೇಜಿನಲ್ಲೂ ಜಿಶಾಳಿಗೆ ಮೀಸಲಾತಿಯಿತ್ತು. ಇದು ಆಕೆಯ ಎಲ್‌ಎಲ್‌ಬಿಯ ಅಂತಿಮ ವರ್ಷ. ಪರೀಕ್ಷೆ ಬೇರೆ ಸಮೀಪಿಸುತ್ತಿದ್ದರಿಂದ ತಾಯಿಯಿದ್ದ ಮನೆಯಲ್ಲೇ ಪರೀಕ್ಷೆಯ ತಯಾರಿ ಸೂಕ್ತವೆಂಬ ಆಕೆಯ ನಿರ್ಧಾರ ಅಂತಿಮವಾಗಿ ತನ್ನ ಬದುಕನ್ನೇ ಪೈಶಾಚಿಕವಾಗಿಸಲಿದೆಯೆಂಬ ಯಾವ ನಿರೀಕ್ಷೆ ತಾನೇ ಆಕೆಗಿತ್ತು?

ಅದು 2016ರ ಏಪ್ರಿಲ್ 28ರ ಗುರುವಾರದ ರಾತ್ರಿ. ತಾಯಿ ರಾಜೇಶ್ವರಿ ಪ್ರತಿನಿತ್ಯದಂತೆ ತನ್ನ ಕೆಲಸ ಮುಗಿಸಿಕೊಂಡು ಮನೆಗೆ ಬಂದಾಗ ರಾತ್ರಿ ಎಂಟೂವರೆಯಾಗಿತ್ತು. ಪುಟ್ಟ ಕೋಣೆಯೊಂದರ ಹಾಗಿದ್ದ ಮನೆಯ ಬಾಗಿಲು ಅರ್ಧ ಮುಚ್ಚಿ ಇನ್ನರ್ಧ ತೆರೆದಿತ್ತು. ಹೋಗಿ ನೋಡುತ್ತಾಳೆ ಮಗಳು ಮಾಂಸದ ಮುದ್ದೆ!

ಹರಿದ ರಕ್ತ ಇಡೀ ಕೋಣೆಯನ್ನಾವರಿಸಿತ್ತು. ಗುರುತು ಕೂಡ ಸಿಗದಂತೆ ತಲೆ ಜಜ್ಜಿ ಹೋಗಿತ್ತು, ಅರೆ ಬೆತ್ತಲೆಯಾಗಿ ಎಲ್ಲೆಂದರಲ್ಲಿ ಇರಿದ ಗಾಯಗಳಿಂದಾಗಿ ಹೊಟ್ಟೆಯ ಕರುಳೆಲ್ಲ ಹೊರಬಂದು ಅದರ ಚೂರುಗಳು ಎಲ್ಲೆಂದರಲ್ಲಿ ಇಟ್ಟಾಡಿದಂಥ ಭಯಾನಕಕ್ಕೇ ತಾಯಿ ತಲೆ ಸುತ್ತಿಬಿದ್ದಳು. ಅದ್ಯಾರು ಪೊಲೀಸರಿಗೆ ಮಾಹಿತಿ ಕೊಟ್ಟರೋ, ಕುರುಪ್ಪಾಂಪಾಡಿಯ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಎನ್. ರಾಜೇಶ್



ರಾಜಸ್ತಾನದ ದಲಿತ ವಿದ್ಯಾರ್ಥಿನಿಯ ಹಂತಕರಿಗಿನ್ನೂ ಶಿಕ್ಷೆ ಏಕಿಲ್ಲ?

ದೇಶದ ಜಾತಿವ್ಯವಸ್ಥೆಯ ಕ್ರೌರ್ಯ ಮತ್ತು ಅದರ ಬಲಿಪಶುವಾದ ದಲಿತ ಸಮೂಹದ ದುರ್ಗತಿಗೆ ಕೇರಳದ ಜಿಶಾ ಮಾತ್ರವೇ ಅಲ್ಲ, ದೂರದ ರಾಜಸ್ತಾನದಲ್ಲಿ ಬೇರೆಯದೇ ಕತೆಯೊಂದಿದೆ. ಅದು ದಲಿತ ವಿದ್ಯಾರ್ಥಿನಿ ಡೆಲ್ಟಾ ಮೇಘ್‌ಲಾಲ್ ಹತ್ಯೆ!

ಜಿಶಾಳ ಹತ್ಯೆಗೂ ತಿಂಗಳ ಹಿಂದೆ ಅಂದರೆ 2016ರ ಮಾರ್ಚ್ 29ರ ಬೆಳಗ್ಗೆ ರಾಜಸ್ತಾನದ ಬಿಕಾನೇರ್ ಸಮೀಪದ ನೋಖಾದ ಜೈನ್ ಆದರ್ಶ್ ಟೀಚರ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಗರ್ಲ್ಸ್‌ನ ಹಾಸ್ಟೆಲ್‌ನ ನೀರಿನ ತೊಟ್ಟಿಯಲ್ಲಿ ಡೆಲ್ಟಾ ಮೇಘ್‌ವಾಲ್‌ಳ ಶವ ತೇಲುತ್ತಿತ್ತು. ಆಕೆಗಿನ್ನೂ ವಯಸ್ಸು ಹದಿನೇಳು. ಕಾನೂನುರೀತ್ಯ ಆಕೆಯಿನ್ನೂ ಅಪ್ರಾಪ್ತೆ. ಪಾಕಿಸ್ತಾನದ ಗಡಿಯ ಕುಗ್ರಾಮವೊಂದರ ಬಡ ದಲಿತ ಕುಟುಂಬಕ್ಕೆ ಸೇರಿದ ಡೆಲ್ಟಾ ಮೇಘ್‌ವಾಲ್ ರಾಜಸ್ತಾನದ ಬಾರ್ಮರ್ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿನಿ. ಹತ್ತನೇ ತರಗತಿ ಪಾಸಾಗಿ ಪಿಯುಸಿ ಮುಗಿಸಿ ತದನಂತರ ಶಾಲಾ ಶಿಕ್ಷಕಿಯಾಗುವ ಕನಸಿಟ್ಟುಕೊಂಡೇ ಬಿಕಾನೇರ್‌ನ ನೋಖಾದ ಜೈನ್ ಆದರ್ಶ್ ಟೀಚರ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಗರ್ಲ್ಸ್‌ಗೆ ಸೇರಿಕೊಂಡಾಕೆ.

ಪಿಯುಸಿ ಮೊದಲನೇ ವರ್ಷದ ಹೊತ್ತಿಗೆ ಚಿತ್ರಕಲೆಯಲ್ಲಿ ಇಡೀ ರಾಜಸ್ತಾನಕ್ಕೇ ಮೊದಲ ರ್‍ಯಾಂಕ್ ಗಿಟ್ಟಿಸಿದಳು. ಆಕೆ ಏಳನೇ ತರಗತಿಯಲ್ಲಿದ್ದಾಗಲೇ ಆಕೆ ಬಿಡಿಸಿದ್ದ ಚಿತ್ರವನ್ನು ಪ್ರತಿಷ್ಠಿತ ಕಲಾ ಮಾಸಿಕವೊಂದು ಪ್ರಕಟಿಸಿತ್ತು. ಅಂಥಾ ಪ್ರತಿಭಾವಂತ ದಲಿತ ವಿದ್ಯಾರ್ಥಿನಿ ತನ್ನ 17ನೇ ವಯಸ್ಸಿನಲ್ಲಿ ಹೆಣವಾಗಿ ಹಾಸ್ಟೆಲಿನ ನೀರಿನ ತೊಟ್ಟಿಯಲ್ಲಿ ತೇಲುತ್ತಿದ್ದದ್ದು ಆಕೆಯ ಕುಟುಂಬಕ್ಕೆ ಭರಿಸಲಾಗದ ಆಘಾತವೆ. ಇನ್ನೂ ದುರಂತವೆಂದರೆ ಪೊಲೀಸರು ಆಕೆಯ ಹೆಣವನ್ನು ಮುನ್ಸಿಪಾಲ್ಟಿಯ ಕಸ ಹೊರುವ ಟ್ರ್ಯಾಕ್ಟರ್ ಒಂದರಲ್ಲಿ ಸಾಗಿಸಿದ್ದರು. ನಿಯಮಾನುಸಾರ ಹೆಣದ ವೀಡಿಯೋ ಕೂಡ ಚಿತ್ರಿಸದೇ ಕಾಟಾಚಾರದ ಆತ್ಮಹತ್ಯೆಯ ಪ್ರಕರಣವೆಂಬಂತೆ ಇಡೀ ವಿಷಯವನ್ನು ತಿಪ್ಪೆ ಸಾರಿಸಿಬಿಟ್ಟರು.





ಈ ಬಗ್ಗೆ ಶಿಕ್ಷಕಿಯರ ತರಬೇತಿ ಸಂಸ್ಥೆಯ ಮುಖ್ಯಸ್ಥರು ತಮ್ಮದೇ ಕತೆ ನೇಯ್ದಿಟ್ಟಾಗಿತ್ತು, ಅವರ ಪ್ರಕಾರ ಡೆಲ್ಟಾ ಆ ಸಂಸ್ಥೆಯ ದೈಹಿಕ ಶಿಕ್ಷಕ ವಿಜೇಂದ್ರಕುಮಾರ್‌ನ ರೂಮಿನಲ್ಲಿರುವಾಗಲೇ ಸಿಕ್ಕಿಬಿದ್ದಿದ್ದಳು ಮತ್ತು ಈ ಬಗ್ಗೆ ತಪ್ಪೊಪ್ಪಿಗೆ ಪತ್ರವನ್ನೂ ಬರೆದುಕೊಟ್ಟಿದ್ದಳು. ಆದರೆ ಆದ ಅವಮಾನ ಸಹಿಸದೆ ಮಾರ್ಚ್ 28ರ ರಾತ್ರಿ ನೀರಿನ ತೊಟ್ಟಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ...!

ಇದು ಡೆಲ್ಟಾ ತರಬೇತಿ ಪಡೆಯುತ್ತಿದ್ದ ಸಂಸ್ಥೆಯ ಹಾಸ್ಟೆಲ್ ವಾರ್ಡನ್ ಪ್ರಿಯಾ ಶುಕ್ಲಾ ಒಪ್ಪಿಸುತ್ತಿದ್ದ ಕಂಠಪಾಠ. ನೋಖಾದ ಜೈನ್ ಆದರ್ಶ್ ಟೀಚರ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಗರ್ಲ್ಸ್‌ನ ಪ್ರಿನ್ಸಿಪಾಲ್ ಈಶ್ವರ್ ಚಂದ್ ವೈದ್ ಕೂಡ ಇದನ್ನೇ ಸಾಧಿಸುತ್ತಿದ್ದ. ಕಸ ಹೊಡೆಯುವ ಟ್ರ್ಯಾಕ್ಟರ್‌ನಲ್ಲಿ ಡೆಲ್ಟಾಳ ಹೆಣವನ್ನೊಯ್ದು ಬಿಸಾಕಿದ ಪೊಲೀಸರಿಂದ ಸತ್ತ ದಲಿತ ವಿದ್ಯಾರ್ಥಿನಿಗಿನ್ನೂ ಯಾವ ನ್ಯಾಯತಾನೇ ಸಿಕ್ಕೀತು?

ಆದರೆ ಡೆಲ್ಟಾ ಮೇಘ್‌ವಾಲ್ ಹತ್ಯೆಗೆ ಸಂಬಂಧಪಟ್ಟಂತೆ ಅನೇಕ ಪ್ರಶ್ನೆಗಳಿಗೆ ಯಾರಲ್ಲೂ ಉತ್ತರವಿರಲಿಲ್ಲ, ಹಾಗೊಮ್ಮೆ ಡೆಲ್ಟಾ ಆತ್ಮಹತ್ಯೆ ಮಾಡಿಕೊಂಡಿದ್ದೇ ನಿಜವಾಗಿದ್ದರೆ ಈ ಬಗ್ಗೆ ಶಿಕ್ಷಣ ಸಂಸ್ಥೆಯವರೇ ಏಕೆ ಆಕೆಯ ಪೋಷಕರಿಗೆ ಮಾಹಿತಿ ನೀಡಲಿಲ್ಲ? ಡೆಲ್ಟಾ ಇನ್ನೂ ಅಪ್ರಾಪ್ತೆಯೆಂದು ಗೊತ್ತಿದ್ದೂ ಈ ಬಗ್ಗೆ ಪೊಲೀಸರಿಗೇಕೆ ಧೂರು ನೀಡಿಲ್ಲ? ಕನಿಷ್ಠ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ದೈಹಿಕ ಶಿಕ್ಷಕನನ್ನೇಕೆ ಉದ್ಯೋಗ ಬಿಡಿಸಲಿಲ್ಲ? ಅಷ್ಟಕ್ಕೂ ಆತನ ಚಾಳಿ ಗೊತ್ತಿದ್ದೂ ಬಾಲಕಿಯರು ವಾಸಿಸುವ ಅದೇ ಹಾಸ್ಟೆಲಿನ ರೂಮೊಂದರಲ್ಲಿ ಆತನನ್ನು ಇರಿಸಿದ್ದೇಕೆ?


ಹಕೀಕತ್ತೇನೆಂದರೆ ಡೆಲ್ಟಾಳ ಮೇಲೆ ದೈಹಿಕ ಶಿಕ್ಷಕ ದೌರ್ಜನ್ಯವೆಸಗುವ ಹೊತ್ತಿಗೆ ಹಾಸ್ಟೆಲಿನಲ್ಲಿದ್ದದ್ದು ಕೇವಲ ನಾಲ್ವರು ವಿದ್ಯಾರ್ಥಿನಿಯರು ಮಾತ್ರ. ಮಿಕ್ಕೆಲ್ಲ ಹುಡುಗಿಯರು ರಜೆಗೆಂದು ಹೋದವರು ವಾಪಸ್ಸಾಗಿರಲಿಲ್ಲ. 2016ರ ಮಾರ್ಚ್ 28ರ ರಾತ್ರಿ 8ರ ಹೊತ್ತಿಗೆ ತನ್ನ ತಂದೆಗೆ ಫೋನ್ ಮಾಡಿದ ಡೆಲ್ಟಾ 'ಹಾಸ್ಟೆಲ್ ವಾರ್ಡನ್ ಪ್ರಿಯಾ ಶುಕ್ಲಾ ತನ್ನನ್ನು ದೈಹಿಕ ಶಿಕ್ಷಕ ವಿಜೇಂದರ್ ಸಿಂಗ್‌ನ ಕೊಟ್ಟಿಗೆಗೆ ಹೋಗಿ ತಂಗುವಂತೆಯೂ ಇಡೀ ಹಾಸ್ಟೆಲನ್ನು ಶುಚಿಗೊಳಿಸಬೇಕಿರುವುದರಿಂದ ಈ ರಾತ್ರಿ ನೀನು ಅಲ್ಲೇ ತಂಗಬೇಕೆಂದು ವಾರ್ಡನ್ ಒತ್ತಾಯಿಸುತ್ತಾಳೆಂದು' ಆತಂಕ ವ್ಯಕ್ತಪಡಿಸುತ್ತಾಳೆ. ವಿಧಿಯಿಲ್ಲದೆ ಅವತ್ತು ಡೆಲ್ಟಾ ವಿಜೇಂದರ್ ಸಿಂಗ್‌ನ ಕೋಣೆಯಲ್ಲಿ ತಂಗುವಂತೆ ಹಾಸ್ಟೆಲ್ ವಾರ್ಡನ್ ವ್ಯವಸ್ಥೆ ಮಾಡಿಕೊಟ್ಟಿದ್ದಾಳೆ. ಹಾಗೇ ಬಂದ ಡೆಲ್ಟಾಳ ಮೇಲೆ ಆ ರಾತ್ರಿ ವಿಜೇಂದರ್‌ಸಿಂಗ್ ಅತ್ಯಾಚಾರವೆಸಗಿದ್ದಾನೆ.

ಯಾವತ್ತು ಇದು ರಾದ್ಧಾಂತವಾಗುತ್ತದೆ ಮತ್ತು ಡೆಲ್ಟಾ ಈ ಬಗ್ಗೆ ತನ್ನ ತಂದೆಗೆ ಹೇಳಿದ್ದಾಳೆಂಬುದು ಗೊತ್ತಾಯಿತೋ ಸಂಸ್ಥೆಯ ಪ್ರಿನ್ಸಿಪಾಲ್ ಈಶ್ವರ್ ಚಂದ್ ವೈದ್ ಚಾಣಾಕ್ಷ ತಂತ್ರವೊಂದನ್ನು ಹೆಣೆಯುತ್ತಾನೆ. ದೈಹಿಕ ಶಿಕ್ಷಕ ಮತ್ತು ವಿದ್ಯಾರ್ಥಿನಿ ಡೆಲ್ಟಾ ಇಬ್ಬರೂ ಪರಸ್ಪರ ಸೇರಿದ್ದರ ವಿರುದ್ಧ ಕ್ಷಮಾಪಣೆ ಪತ್ರ ಬರೆದುಕೊಟ್ಟಂತೆ ಮಾಡಲಾಗುತ್ತದೆ. ಅಲ್ಲಿಗೆ ಡೆಲ್ಟಾಳ ಒಪ್ಪಿಗೆಯ ಮೇರೆಗೆ ದೈಹಿಕ ಶಿಕ್ಷಕ ಆಕೆಯನ್ನು ಬಳಸಿಕೊಂಡಂತಾಯಿತು. ಇದೊಂದು ವ್ಯವಸ್ಥಿತ ತಂತ್ರ. ವಾಸ್ತವವಾಗಿ ಡೆಲ್ಟಾ ಇನ್ನೂ ಅಪ್ರಾಪ್ತೆ ಎಂದಮೇಲೆ ಆಕೆಯ ಒಪ್ಪಿಗೆ ಮೇರೆಗೆ ದೈಹಿಕ ಶಿಕ್ಷಕ ಲೈಂಗಿಕ ಕೃತ್ಯವೆಸಗಿದ್ದರೂ ಅದು ಅಪರಾಧ ಮತ್ತು ಕಾನೂನುಬಾಹಿರ. ಇದು ಗೊತ್ತಿದ್ದೂ ಡೆಲ್ಟಾಳಿಂದ ಸಂಸ್ಥೆ ತಪ್ಪೊಪ್ಪಿಗೆ ಪತ್ರ ಬರೆಸಿಕೊಂಡಿದ್ದೇಕೆ? ದೈಹಿಕ ಶಿಕ್ಷಕನ ವಿರುದ್ಧ ಅತ್ಯಾಚಾರದ ಆರೋಪದಡಿ ಪೊಲೀಸರಿಗೇಕೆ ದೂರು ನೀಡಲಿಲ್ಲ? ಪೋಷಕರಿಗೇಕೆ ಮಾಹಿತಿ ಪೊಲೀಸರು ಬಾಲಕಿಯ ಹೆಣದ ವೀಡಿಯೋ ಕೂಡ ಮಾಡಿಸದೇ ಕಸ ಹೊಡೆಯುವ ಟ್ರ್ಯಾಕ್ಟರ್‌ನಲ್ಲಿ ಶವ ಸಾಗಿಸಿದ್ದೇಕೆ? ಪೊಲೀಸರೇಕೆ ಅತ್ಯಾಚಾರದ ಪ್ರಕರಣವನ್ನು ದಾಖಲಿಸಲಿಲ್ಲ?


ಇಂಥ ಪ್ರಶ್ನೆಗಳೆಲ್ಲವೂ ಭಾರತದ ಅದರಲ್ಲೂ ರಾಜಸ್ತಾನದಂಥ ಪಾಳೇಗಾರಿ ಸಂಸ್ಕೃತಿಯ ರಾಜ್ಯವೊಂದರಲ್ಲಿ ಜಾತಿ ಆಧಾರಿತ ಲೈಂಗಿಕ ದೌರ್ಜನ್ಯಗಳ ಪರಂಪರೆಯನ್ನೇ ಬಿಚ್ಚಿಡುತ್ತಿದ್ದವು. ಯಾವೊಂದು ರಾಷ್ಟ್ರೀಯ ಪತ್ರಿಕೆಗಳಿಗೂ ಇದು ಸುದ್ದಿಯೆನಿಸಲಿಲ್ಲ. ರಾಜಸ್ತಾನದ ಬಹುತೇಕ ಸ್ಥಳೀಯ ಪತ್ರಿಕೆಗಳೂ ಈ ಬಗ್ಗೆ ನಿರ್ಲಕ್ಷ್ಯ ವಹಿಸಿದವು. ಹಾಗೆಂದು ಜನಪರ ಸಂಘಟನೆಗಳು ಇಡಬೇಕಲ್ಲ, ಅಖಿಲ ಭಾರತ ದಲಿತ ಮಹಿಳಾ ಅಧಿಕಾರ ಮಂಚ್, ಅಖಿಲ ಭಾರತೀಯ ಜನವಾದಿ ಮಹಿಳಾ ಸಮಿತಿ, ಭಾರತೀಯ ಮಹಿಳಾ ಒಕ್ಕೂಟ ಮತ್ತು ರಾಜಸ್ತಾನದ ಪಿಯುಸಿಎಲ್ ಸಂಘಟನೆಗಳು ಈ ಬಗ್ಗೆ ದೊಡ್ಡ ಮಟ್ಟದಲ್ಲಿ ದನಿಯೆತ್ತಿದವು. ದಲಿತ ವಿದ್ಯಾರ್ಥಿನಿ ಡೆಲ್ಟಾ ಮೇಘ್‌ವಾಲ್‌ಳದ್ದು ಕೇವಲ ಆತ್ಮಹತ್ಯೆಯಾಗಿರಲಿಲ್ಲ, ಅದೊಂದು ವ್ಯವಸ್ಥಿತ ಕೊಲೆಯಾಗಿತ್ತು. ಅದಕ್ಕೆ ಪೊಲೀಸರು, ತರಬೇತಿ ಸಂಸ್ಥೆ, ಮೀಡಿಯಾಗಳೆಲ್ಲರೂ ಪರಸ್ಪರ ಸಹಕಾರವೆಂಬಂತೆ ಜಾತಿಯ ಪ್ರಜ್ಞೆ ಮೆರೆದಿದ್ದರು.

ದಲಿತ ವಿದ್ಯಾರ್ಥಿನಿ ಡೆಲ್ಟಾ ಮೇಘ್‌ವಾಲ್‌ಳ ಮೇಲಿನ ಅತ್ಯಾಚಾರ ಮತ್ತು ಕೊಲೆಯ ಅಪರಾಧದಲ್ಲಿ ಇಡೀ ವ್ಯವಸ್ಥೆಯೇ ಆರೋಪಿಯಾದರೆ ಇನ್ನೂ ನ್ಯಾಯಕ್ಕಾಗಿ ಕಣ್ಣೀರಿಡುತ್ತಿರುವ ಆಕೆಯ ತಂದೆತಾಯಂದಿರು ಬದುಕಿದ್ದೂ ಸತ್ತವರು!

ನಿರ್ಭಯಾಳ ಪರ ದೇಶವೇನೋ ದನಿಯೆತ್ತಿತು. ಆದರೆ ಜಾತಿಯ ಕ್ರೌರ್ಯಕ್ಕೆ ಸಿಲುಕಿ ನಾಶವಾದ ಈ ದಲಿತ ವಿದ್ಯಾರ್ಥಿನಿಯರ ಪಾಲಿಗೆ ನಿರ್ಭಯಾಳಿಗೆ ಸಿಕ್ಕ ಅನುಕಂಪವೂ ಇದ್ದಂತಿಲ್ಲ.


...ಅತ್ಯಾಚಾರವೆಸಗಿ ಕೊಲೆ ಮಾಡಿದ ಶಂಕಿತ ಆರೋಪಿ


ಜಿಶಾಳ ಮನೆ


ಜಿಶಾಳ ತಾಯಿ ಆಸ್ಪತ್ರೆಯಲ್ಲಿ

...ಕ್ಕೆ ಬಂದಿದ್ದೇ ಜರಡಿಯಂತಾಗಿದ್ದ ಜಿಶಾಳ ಶವವನ್ನು ...ಸ್ಟ್ ಮಾರ್ಟಮ್ಮಿಗೆ ಸಾಗಿಸಿದ್ದಾರೆ. ಏಕಾಂಗಿ ತಾಯಿ. ...ಯ ನಿರ್ಗತಿಕ ಬದುಕು. ಹೇಳು ಕೇಳುವವರಿಲ್ಲದ ...ದೃಷ್ಟ ದಲಿತ ಕುಟುಂಬ. ಯಥಾವತ್ ಪೊಲೀಸ್ ...ಕ್ಷದಂತೆ ಜಿಶಾಳ ಹತ್ಯೆಗೂ ಪೊಲೀಸ್ ನಿಷ್ಕ್ರಿಯತೆ ...ರಿಸಿತು.

ಆದರೆ ಮೇ 2ರ ಹೊತ್ತಿಗೆ ಅಂದರೆ ಜಿಶಾ ಕೊಲೆಯಾದ ...ನೇ ದಿನಕ್ಕೆ ಆಕೆಯ ಪೋಸ್ಟ್‌ಮಾರ್ಟಂ ರಿಪೋರ್ಟ್ ...ತಲ್ಲ; ಅದರ ವಿವರಗಳೇ ಭಯಾನಕವಾಗಿದ್ದವು. ಜಿಶಾಳ ...ಲೆ ಮೊದಲು ಸಾಮೂಹಿಕವಾಗಿ ಅತ್ಯಾಚಾರವೆಸಗ ...ಗಿತ್ತು. ಕೇರಳದ ಪೆರುಂಬಾವೂರ್ ಜಿಲ್ಲೆಯ ರಾಯ ...ಂಗಲಂ ಪಂಚಾಯ್ತಿ ವ್ಯಾಪ್ತಿಯ ಇರಿಂಗೋಲ್ ಎಂಬ ...ಗ್ರಾಮದ ಆಕೆಯ ಪುಟ್ಟ ಕೋಣೆಯಂಥ ಮನೆಗೆ ಹೊಕ್ಕ ...ಂತಕರು ಒಬ್ಬರಾದ ಮೇಲೊಬ್ಬರಂತೆ ಮೂರಕ್ಕೂ ಹೆಚ್ಚು ...ಂದಿ ಆಕೆಯನ್ನು ಕಚ್ಚಾಡಿ ಮುಕ್ಕಿದ್ದರು. ಎಲ್ಲೆಂದರಲ್ಲಿ ...ದ ಗಾಯಗಳಿದ್ದವು. ಆಕೆಯ ಎರಡೂ ಎದೆಗೆ ಹೆಟ್ಟಿದ ...ರಿಯ ರಭಸ ಹೇಗಿತ್ತೆಂದರೆ; ಸ್ತನದ ಮಾಂಸಖಂಡ ...ತ್ತು ಬಿದ್ದು ಸೀಳಿದ ಚೂರಿ ಎರಡು ಇಂಚಿನಷ್ಟು ಆಳಕ್ಕೆ ...ಇದಿತ್ತು!


ದೇಹದ ಮೂವತ್ತು ಭಾಗಗಳಲ್ಲಿ ಹರಿತವಾದ ಚೂರಿಯ ...ರಿತಗಳಿದ್ದವು. ಅಂದರೆ ಒಂದು ಆಯುಧವಲ್ಲ. ವಿವಿಧ ...ತಿಯ ಮೂರು ಚೂರಿ ಅಥವಾ ಹರಿತವಾದ ...ಸ್ತುವಿನಿಂದ ಮನಸೇಚ್ಛೆ ಚುಚ್ಚಲಾಗಿತ್ತು. ಮುಖ, ಕೆನ್ನೆ, ...ಸ್ತನದ ಇರಿಯಲಾಗಿತ್ತು. ಹೊಟ್ಟೆಯ ಭಾಗವೊಂದಕ್ಕೇ ...ತ್ತಕ್ಕೂ ಅಧಿಕ ಬಾರಿ ಇರಿಯಲಾಗಿತ್ತು. ತಲೆಗೆ ಎಂಥಾ ...ಲವಾದ ಪೆಟ್ಟು ಬಿದ್ದಿತ್ತೆಂದರೆ ತಲೆಚಿಪ್ಪು ಪುಡಿಯಾಗಿ ...ಕೆಯ ಮೆದುಳೇ ಅಪ್ಪಚ್ಚಿಯಾಗಿತ್ತು. ತಲೆಗಪ್ಪಳಿಸಿದ ...ಟ್ಟಿನಿಂದಾಗಿಯೇ ಸಾವು ಸಂಭವಿಸಿತ್ತು. ಆದರೆ ಅದಕ್ಕೂ ...ಮುನ್ನ ಆಕೆಯ ಮರ್ಮಾಂಗಕ್ಕೆ ರಾಡಿನಂಥ ಹರಿತವಾದ ...ಯುಧವೊಂದನ್ನು ಬಲವಾಗಿ ತುರುಕಲಾಗಿತ್ತು...!

ಪೋಸ್ಟ್‌ಮಾರ್ಟಂನ ವಿವರಗಳೇ ನಡೆದ ಪೈಶಾಚಿಕ ...ಕೃತ್ಯದ ಭೀಭತ್ಸವನ್ನು ವಿವರಿಸುತ್ತಿದ್ದವು. ನರಪಿಶಾಚಿ, ರಕ್ಕಸ, ...ಬೇಟೆಗಾರಿಗಳೂ ಈ ಮಟ್ಟದ ಕ್ರೂರಿಗಳಾಗಿರಲಾರರು. ...ದೆಹಲಿಯ ಬಸ್ಸೊಂದರಲ್ಲಿ ಸಾಮೂಹಿಕ ಅತ್ಯಾಚಾರಕ್ಕೀಡಾದ ...ನಿರ್ಭಯಾ ಪಟ್ಟ ಹಿಂಸೆಯ ಹತ್ತಲ್ಲ ನೂರು ಪಟ್ಟು ...ಭೀಕರವಾಗಿದ್ದ ಘಟನೆಯ ಪೋಸ್ಟ್‌ಮಾರ್ಟಂ ವಿವರಗಳು ...ದನ್ನು ನಿರ್ವಹಿಸಿದ ಆಸ್ಪತ್ರೆಯ ವೈದ್ಯರಿಗೇ ...ಜೀರ್ಣಿಸಿಕೊಳ್ಳಲಾಗಲಿಲ್ಲ. ಅಂಥ ಯಾರೋ ವೈದ್ಯರೊಬ್ಬರು ಪೋಸ್ಟ್‌ಮಾರ್ಟಂನ ವಿವರಗಳನ್ನು ಮೊದಲು ಫೇಸ್‌ಬುಕ್‌ಗೆ ...ಹಾಕಿರಬೇಕು. ಅದು ಯಾವ ವೇಗದಲ್ಲಿ ಹಬ್ಬಿತ್ತೆಂದರೆ ...ಕೇರಳದ ಟೀವಿ, ಪತ್ರಿಕೆಗಳೇ ದಂಗಾಗುವಂತೆ ವಾಟ್ಸಪ್, ಫೇಸ್‌ಬುಕ್, ಟ್ವಿಟ್ಟರ್‌ಗಳೆಲ್ಲ ಜಿಶಾಮಯವಾಗಿ ಹೋದವು.

ದುರಂತವೆಂದರೆ ಜಿಶಾ ಅಂತ್ಯ ಕಂಡು ವಾರ ಸಮೀಪಿಸುತ್ತಿದ್ದರೂ ಕೇರಳದ ಪೊಲೀಸರ ನಿಷ್ಕ್ರಿಯತೆ ಹೇಗಿತ್ತೆಂದರೆ ಪ್ರಾಥಮಿಕ ತನಿಖೆಗೂ ಪೊಲೀಸರು ತಲೆಕೆಡಿಸಿಕೊಂಡಿರಲಿಲ್ಲ. ಹಂತಕರ ಕುರಿತಂತೆ ಸಣ್ಣದೊಂದು ಸುಳಿವಿರಲಿ ಆಕೆಯನ್ನು ಕೊನೆಯ ಬಾರಿ ನೋಡಿದವರ್‍ಯಾರು, ಕೊನೆಯ ಬಾರಿ ಆಕೆ ಸಂಪರ್ಕಿಸಿದ್ದು ಯಾರನ್ನು ಇತ್ಯಾದಿ ಯಾವೊಂದು ವಿವರಗಳೂ ಕುರುಪ್ಪಾಂಪಾಡಿ ಪೊಲೀಸ್ ಠಾಣೆಯಲ್ಲಿರಲಿಲ್ಲ. ನಡೆದದ್ದು ಪೈಶಾಚಿಕ ರೇಪ್ ಅಂಡ್ ಮರ್ಡರ್. ಕನಿಷ್ಠ ಆಕೆಯ ತಾಯಿಯ ಹೇಳಿಕೆಯನ್ನೂ ಪೊಲೀಸರು ಪಡೆದಿರಲಿಲ್ಲ. ಯಾವತ್ತು ಸಾಮಾಜಿಕ ಜಾಲತಾಣಗಳಲ್ಲಿ ಜನಾಕ್ರೋಶದ ಪ್ರವಾಹವೆದ್ದಿತೋ ಟೀವಿ, ಪತ್ರಿಕೆಗಳು ಎಚ್ಚೆತ್ತುಕೊಂಡವು. ಕೊಚ್ಚಿ ರೇಂಜಿನ ಐಜಿಪಿ ಮಹಿಪಾಲ್ ಯಾದವ್ ಕುರುಪ್ಪಾಂಪಾಡಿ ಪೊಲೀಸರ ನಿಷ್ಕ್ರಿಯತೆಯನ್ನು ಮುಚ್ಚಿಕೊಳ್ಳಲೆಂಬಂತೆ ಮೇ 3ರಂದು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಹೇಳಿಕೆಯೊಂದನ್ನು ಕೊಟ್ಟರು. 'ಆರೋಪಿಯ ಬಗ್ಗೆ ಸುಳಿವು ಸಿಕ್ಕಿದೆ. ಆದರೆ ಪೋಸ್ಟ್‌ಮಾರ್ಟಂ ವರದಿ ಬಾರದೆ ಈಗಲೇ ಏನನ್ನೂ ಹೇಳಲಾಗದು...!'

ಹೆಚ್ಚೂಕಮ್ಮಿ ಒಂದು ವಾರವೇ ಕಳೆದರೂ ಹಂತಕರ ಪತ್ತೆಯಿರಲಿ, ಪ್ರಕರಣದ ಬಗ್ಗೆ ಕನಿಷ್ಠ ಆಸಕ್ತಿಯನ್ನೂ ತೋರದ ಕೇರಳ ಪೊಲೀಸ್ ವ್ಯವಸ್ಥೆಗೆ ದಲಿತರ ಬಗ್ಗೆ ಮೇಲ್ಜಾತಿಗಳಿರುವಂಥದ್ದೇ ಅಸಡ್ಡೆ, ಅಸಹನೆ ಈ ಪ್ರಕರಣದ ಮೂಲಕ ವ್ಯಕ್ತವಾಗಿತ್ತು. ಕೇರಳದ ವಿರೋಧಿ ನಾಯಕ ಅಚ್ಯುತಾನಂದನ್ ಜಿಶಾ ಹತ್ಯಾ ಪ್ರಕರಣವನ್ನು ಪೊಲೀಸ್ ಮಹಾನಿರ್ದೇಶಕರ ನೇರ ಸುಪರ್ದಿಯಲ್ಲಿ ತನಿಖೆ ಮಾಡುವಂತೆ ಒತ್ತಾಯಿಸಿದ್ದು ಕೇವಲ ಕಾಟಾಚಾರದ ಒತ್ತಾಯವಾಗಷ್ಟೇ ವ್ಯಕ್ತವಾಗಿತ್ತು. ಹಾಗೆಂದು ಫೇಸ್‌ಬುಕ್, ವಾಟ್ಸಪ್ ಗುಂಪುಗಳು ಸುಮ್ಮನಾಗಬೇಕಲ್ಲ!

Justice for Jisha ಎಂಬ ಫೇಸ್‌ಬುಕ್ ಅಭಿಯಾನ ಯಾವ ವೇಗದಲ್ಲಿ ಕೇರಳವನ್ನು ವ್ಯಾಪಿಸಿತೆಂದರೆ ಅನೇಕ ದಲಿತ ಸಂಘಟನೆಗಳು ಪ್ರತ್ಯೇಕವಾಗಿ ಪ್ರತಿಭಟಿಸುವ ಬದಲು ಇಂಥ ಗುಂಪುಗಳೊಂದಿಗೆ ಕೈಜೋಡಿಸಿದವು. ಮೇ 4ರ ಬುಧವಾರದ ಹೊತ್ತಿಗೆ ಕೇರಳದ ನೂರಾರು ಮಹಿಳಾ ಸಂಘಟನೆಗಳು ತಮ್ಮದೇ ರೀತಿಯಲ್ಲಿ ಬೀದಿಗಿಳಿದವು. ಸಿಪಿಎಂ, ಬಿಜೆಪಿ, ಸಿಪಿಐ, ಕಾಂಗ್ರೆಸ್ ಸೇರಿದಂತೆ ಅವುಗಳ ಮಹಿಳಾ ಘಟಕಗಳು, ವಿದ್ಯಾರ್ಥಿ ವಿಭಾಗಗಳೆಲ್ಲ ಪ್ರತ್ಯೇಕವಾಗಿ ಜಿಶಾ ಪರ ಬೀದಿಗಿಳಿದವು. ಸದ್ಯ ಇಡೀ ಕೇರಳದ ತುಂಬಾ ಜಿಶಾ ಪರ ಪ್ರತಿಭಟನೆಗಳದ್ದೇ ಸುನಾಮಿ.



ದೆಹಲಿಯ ನಿರ್ಭಯಾ ಪ್ರಕರಣವನ್ನು ಹೇಗೆ ರಾಷ್ಟ್ರವ್ಯಾಪಿ ಮಾಧ್ಯಮಗಳು ಬೆಂಬತ್ತಿ ಜೀವಂತವಾಗಿಟ್ಟವೋ ಅಂಥ ಯಾವ ಅನುಕಂಪವೂ ನಿರ್ಗತಿಕ ದಲಿತೆ ಜಿಶಾ ಪಾಲಿಗಿರಲಿಲ್ಲ. ಹಾಗಂತ ಸಾಮಾಜಿಕ ಜಾಲತಾಣಗಳ ಪ್ರಜ್ಞಾವಂತ ಮನಸ್ಸುಗಳು ಕೈಕಟ್ಟಿ ಕೂರಲಿಲ್ಲ. ಪತ್ರಿಕೆ, ಟೀವಿಗಳೇ ನಾಚುವಂತೆ ಪ್ರಕರಣವನ್ನು ಕೆದಕಿದವು. ಅದರ ಕ್ರೌರ್ಯವನ್ನು ಬಿಚ್ಚಿಟ್ಟವು. ಜಾತಿ ಮನಸ್ಥಿತಿಗಳೇ ನಾಚುವಂತೆ ಮಾನವೀಯತೆ ಮೆರೆದವು. ಬೀದಿಗಿಳಿದು ನಡೆಸಿದ ಹೋರಾಟಕ್ಕೆ ದೊಡ್ಡದೊಡ್ಡ ರಾಜಕೀಯ ಪಕ್ಷಗಳೇ ತಲೆತಗ್ಗಿಸಬೇಕಾಯಿತು. ಈಗದು ರಾಷ್ಟ್ರ ರಾಜಧಾನಿ ದೆಹಲಿಯನ್ನು ಮುಟ್ಟಿದೆ. ಸಾಮಾಜಿಕ ಜಾಲತಾಣಗಳ ಆಗಾಧತೆ ಮತ್ತು ಸಾಧ್ಯತೆಯ ಹೊಸ ಯುಗವೊಂದಕ್ಕೆ ಜಿಶಾ ಕಾರಣಳಾಗುತ್ತಿದ್ದಾಳೆ.

ಜಿಶಾ ಮತ್ತೊಬ್ಬಳು ನಿರ್ಭಯಾ! ದೇಶವ್ಯಾಪಿ ಕೀಚಕ ಸಮೂಹದ ವಿರುದ್ಧ ಮಹಿಳಾ ಆಕ್ರೋಶದ ಮತ್ತೊಂದು ಅವತಾರ.

■ ರಾ. ಸೋಮನಾಥ್

---

03 ⇦

ಯಾವುದನ್ನು ನಿನ್ನ ಮೇಲೆ ನಡೆಸಲಾಗಿದೆಯೋ ಅದನ್ನು ...ನ್ನ ಮೇಲೆಯೂ ನಡೆಸುವುದಾಗಿ ಬಿಜೆಪಿಯ ಬೆಂಬಲಿಗರು ...ಟ್ವಿಟರ್ ಮೂಲಕ ನನ್ನನ್ನು ಬೆದರಿಸಿದ್ದಾರೆ. ಅವರಲ್ಲಿ ಇಂತಹ ...ಯೋಚನೆಗಳು ಮೂಡುವುದಾದರೂ ಎಲ್ಲಿಂದ? ನಿನ್ನ ...ಮೇಲೆ ನಡೆದ ಕೃತ್ಯ ಮತ್ತು ನನ್ನ ವಿರುದ್ಧ ಸಂಘಿಗಳು ...ಸಾಮಾಜಿಕ ಜಾಲತಾಣಗಳಲ್ಲಿ ಉಪಯೋಗಿಸುವ ಬೆದರಿಕೆಯ ...ಪದಗಳ ನಡುವೆ ಅಷ್ಟೊಂದು ಸಾಮ್ಯತೆ ಇರಲು ಹೇಗೆ ...ಸಾಧ್ಯ? ದ್ವೇಷ, ಜಾತೀಯತೆ ಮತ್ತು ಪುರುಷಪ್ರಧಾನ ...ವ್ಯವಸ್ಥೆಯನ್ನೇ ಮೂಲವಾಗಿ ಇಟ್ಟುಕೊಂಡಿರುವ ಮನುವಿನ ...ಸಿದ್ಧಾಂತವೇ ಈ ಎರಡೂ ಕ್ರಿಮಿನಲ್ ಗುಂಪುಗಳು ಹೀಗೆ ...ಮಾಡಲು ಮತ್ತು ಹೀಗೆಯೇ ಮಾಡುತ್ತೇವೆ ಎಂದು ...ಬೆದರಿಸಲು ಪ್ರಚೋದಿಸುತ್ತದೆ.

ನಿನಗೆ ನ್ಯಾಯ ಯಾಕೆ ಸಿಗುವುದಿಲ್ಲ ಎಂದರೆ ನಾವು ...ಅತ್ಯಾಚಾರಕ್ಕೆ ನಿಜವಾದ ಕಾರಣವನ್ನೇ ಅಲಕ್ಷಿಸಿ ಇತರೆ ...ಸಂಗತಿಗಳನ್ನು ದೂರುತ್ತೇವೆ. ಮಹಿಳೆಯರ ಉಡುಗೆ, ...ಮದ್ಯಪಾನ, ಕುಡಿತ, ಚೌಮೀನ್, ಮೊಬೈಲ್ ಫೋನ್ ಮತ್ತು ...ಇಂತಹದ್ದೇ ಅಸಂಬದ್ಧ ವಿಚಾರಗಳೇ ಅತ್ಯಾಚಾರಕ್ಕೆ ಕಾರಣ ...ಎಂದು ದೂಷಿಸಲು ನಾವು ಸಿದ್ಧರಾಗಿರುತ್ತೇವೆ. ಆದರೆ ...ಆದರೆ, ನಿಜವಾಗಿಯೂ ಕಾರಣವಾದ ಪಿತೃಪ್ರಧಾನ ವ್ಯವಸ್ಥೆಯನ್ನು, ಊಳಿಗಮಾನ್ಯವನ್ನು, ಮಹಿಳೆಯರನ್ನು ಭೋಗದ ವಸ್ತುಗಳಾಗಿ ಬಿಂಬಿಸುವ ಬಂಡವಾಳಶಾಹಿಯನ್ನು, ಜಾತಿವ್ಯವಸ್ಥೆಯನ್ನು, ನಮ್ಮ ಸಮಾಜವನ್ನು ನಾವು ಎಂದೂ ದೂಷಿಸುವುದಿಲ್ಲ. ನಿನ್ನಂತಹ ಮಹಿಳೆಯರಿಗೆ, ಭಾಗಾನದಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾದವರಿಗೆ, ಕಾಶ್ಮೀರದಲ್ಲಿ ಮತ್ತು ಈಶಾನ್ಯ ರಾಜ್ಯಗಳಲ್ಲಿ ಗನ್ ಬೆದರಿಕೆಯಡಿ ಅತ್ಯಾಚಾರಕ್ಕೆ ಗುರಿಯಾದವರಿಗೆ ನ್ಯಾಯ ಬೇಕು ಎಂದೂ, ಆದಿವಾಸಿಗಳ ಸಂಪತ್ತುಭರಿತ ಅರಣ್ಯಗಳನ್ನು ಕಬಳಿಸಲು ಸಿದ್ಧವಾಗಿರುವ ಬಂಡವಾಳಿಗರನ್ನು ವಿರೋಧಿಸಿದ್ದಕ್ಕೆ ಸೋನಿ ಸೋರಿ ಎಂಬ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿ ಆಕೆಗೆ ಮಾವೋವಾದಿ ಎಂಬ ಹಣೆಪಟ್ಟಿ ಕಟ್ಟಿದ ಅಧಿಕಾರಿಗೆ ಶೌರ್ಯ ಪ್ರಶಸ್ತಿಯನ್ನು ಕೊಟ್ಟಿದ್ದೇಕೆ ಎಂದೂ ನಾವು ದನಿ ಎತ್ತಿದರೆ 'ರಾಜಕೀಯ ಮಾಡಬೇಡಿ, ತೆಪ್ಪಗೆ ಓದಿ' ಎಂದು ನಮಗೆ ಹೇಳುತ್ತಾರೆ.

ರಾಜಕೀಯ ಮಾಡದೆ ಸುಮ್ಮನೆ ತಮ್ಮ ಪಾಡಿಗೆ ತಾವಿದ್ದು ಓದುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳಂತೆ ನೀನೂ ನಿನ್ನ ಪಾಡಿಗೆ ಇದ್ದ ವಿದ್ಯಾರ್ಥಿನಿಯಾಗಿದ್ದೆ. ಆದರೆ ನಮ್ಮ ಸಮಾಜದ ಕ್ರೌರ್ಯ ನಿನ್ನಂಥವರನ್ನೂ ನಿನ್ನ ಪಾಡಿಗೆ ಬಿಡುವುದಿಲ್ಲ. ನಿನ್ನ ಮೇಲಾದ ಕಠೋರ ದಾಳಿ ನಿನ್ನ ಮೇಲಿನ ದ್ವೇಷದಿಂದ ಉದ್ಭವಿಸಿದ್ದಲ್ಲ, ಬದಲಾಗಿ ಮಹಿಳೆಯರ ಬಗ್ಗೆ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಪೂರ್ವಗ್ರಹ, ಉಗ್ರವಾದ ಸ್ತ್ರೀದ್ವೇಷ, ಭೋಗದ ವಸ್ತುಗಳನ್ನಾಗಿ ನೋಡುವ ಮನೋಭಾವ, ಮಹಿಳೆಯರನ್ನು ಉಪಯೋಗಿಸಿ ಬಿಸಾಡಬಹುದೆಂಬ ದೃಷ್ಟಿಕೋನ ಇವೆಲ್ಲವೂ ನಿನ್ನ ಮೇಲಿನ ಅಮಾನವೀಯ ದಾಳಿಗೆ ಮೂಲಕಾರಣಗಳಾಗಿವೆ.

ನಾನು, ನನ್ನ ಗೆಳತಿಯರು, ಚಿಂತಿಸುವ, ಮಾತಾಡುವ, ದುಡಿಯುವ, ಓದುವ, ಪ್ರಶ್ನಿಸುವ, ರಾಜಕೀಯವಾಗಿ ಸಕ್ರಿಯವಾಗಿರುವ, ಅದರಲ್ಲೂ ಸಾಂಪ್ರದಾಯಿಕವಾಗಿ ಸಮಾಜದ ಮೇಲುವರ್ಗದವರಲ್ಲದ ಎಲ್ಲ ಮಹಿಳೆಯರ ವಿರುದ್ಧ ಹೆಪ್ಪುಗಟ್ಟಿರುವ ಆಕ್ರೋಶದ ಅಭಿವ್ಯಕ್ತಿಯೇ ನಿನ್ನ ಮೇಲೆ ಆದ ಹಿಂಸೆ. ಲಿಂಗದ ಮೇಲೆ ವಿಧಿಸಿರುವ ರೇಖೆಯನ್ನು ಯಾವ ಧೈರ್ಯದ ಮೇಲೆ ಉಲ್ಲಂಘಿಸಿದರು?. ಎರಡನೆ ದರ್ಜೆಯ ಸ್ಥಾನವನ್ನು ಹೇಗೆ ದಾಟಿದರು? ಕೆಳಜಾತಿಯ ಬಂಧನವನ್ನು ಹೇಗೆ ಉಲ್ಲಂಘಿಸಿದರು?

ಜಾತಿ, ವರ್ಗ, ಲಿಂಗ, ಕುಲ, ದೈಹಿಕ ಅಸಾಮರ್ಥ್ಯ ಇತ್ಯಾದಿಗಳ ಬಗ್ಗೆ ನಾವು ದನಿ ಎತ್ತಿದರೆ ಜನರಲ್ಲಿ 'ವಿಭಜನೆ' ತರಬೇಡಿ ಎಂದು ನಮಗೆ ಹೇಳುತ್ತಾರೆ. ಕಾನೂನಿನಲ್ಲಿ ಎಲ್ಲರಿಗೂ ಸಮಾನತೆ ಕೊಟ್ಟಿರುವುದರಿಂದ ಅದು ವಾಸ್ತವವಾಗಿ ಜಾರಿಯಲ್ಲಿದೆ ಎಂದು ಅವರು ನಮಗೆ ಹೇಳುತ್ತಾರೆ. ಸದ್ಯದಲ್ಲೇ ನಿನಗೆ ನ್ಯಾಯ ಸಿಗಬೇಕೆಂದು ನಾವು ಕೇಳಿದಾಗ ಜಾತಿವ್ಯವಸ್ಥೆಯ ಅಸಹ್ಯ ದರ್ಶನ ಆಗಲಿದೆ. ಎಲ್ಲರೂ 'ನಿರ್ಭಯಾ' ಎಂದೇ ಕರೆಯುವ ಯುವತಿಗೆ ಆದದ್ದೇ ನಿನಗೂ ಆಗಿದ್ದರೂ ನೀನು ಕೆಳಜಾತಿಯವಳಾದ್ದರಿಂದ ನಿನ್ನ ಪ್ರಕರಣ ರಾಷ್ಟ್ರದ ಆತ್ಮಸಾಕ್ಷಿಯನ್ನು ಬಡಿದೆಬ್ಬಿಸದಾದಾಗ ಜಾತಿವ್ಯವಸ್ಥೆಯ ದರ್ಶನವಾಗುತ್ತದೆ. ನಿನ್ನ ಮೇಲೆ ಬಡವರಲ್ಲದವರು ಈ ಕೃತ್ಯವನ್ನು ನಡೆಸಿದ್ದರೆ ಅವರಿಗೆ ಸಾಧ್ಯವಾದಷ್ಟು ಕಠಿಣ ಶಿಕ್ಷೆ ನೀಡದಿದ್ದಾಗ ಜಾತಿವ್ಯವಸ್ಥೆಯ ದರ್ಶನವಾಗಲಿದೆ.

ಸಹೋದರಿಯೇ, ನಿನ್ನಂತೆ ಮಹಿಳೆಯಾದ ನನಗೆ "ನಿನ್ನ ಆತ್ಮಕ್ಕೆ ಶಾಂತಿ ಸಿಗಲಿ" ಎಂದು ಹೇಳಲು ಆಗುತ್ತಿಲ್ಲ. ಯಾಕೆಂದರೆ ನಾವು ಬದುಕುತ್ತಿರುವ ಈ ಕಾಲಘಟ್ಟವು ಹಾಗೆ ಹೇಳಲು ನನ್ನನ್ನು ಅನುಮತಿಸುತ್ತಿಲ್ಲ.

ಆದ್ದರಿಂದ ವಿಧಿ ಇಲ್ಲದೆ ಹೇಳುತ್ತಿದ್ದೇನೆ "ನಿನ್ನ ಆತ್ಮಕ್ಕೆ ಶಾಂತಿ ಸಿಗದಿರಲಿ". ಅಷ್ಟೇ ಅಲ್ಲ, ಈ ದೇಶದ ಯಾರ ಆತ್ಮಕ್ಕೂ ಶಾಂತಿ ಸಿಗದಿರಲಿ.

ಈ ದೇಶವನ್ನು, ಈ ಜಗತ್ತನ್ನು ಸಿಟ್ಟಿಗೆಬ್ಬಿಸು. ಇಲ್ಲಿನ ಸ್ವಸಂತೃಪ್ತಿಯನ್ನು ಬಡಿದೆಬ್ಬಿಸು.

ನಿನ್ನ,
ನೇಹಾ

ಮನೆಮುರುಕ ಜ್ಯೋತಿಷಿ


ಹೊತ್ತಲ್ಲದ ಹೊತ್ತಿನಲ್ಲಿ ಫೋನ್ ರಿಂಗಾಯ್ತು. ಎದ್ದು ಹೋಗಿ ತೆಗೆದುಕೊಳ್ಳಲೂ ಬೇಸರ. ಏಕೆಂದರೆ ಸುಮ್ಮನಿರುವುದಕ್ಕೂ ಸುಸ್ತಾಗುವಂತಹ ಕಾಲ ಎದುರಾಗಿದೆ. ಆದ್ದರಿಂದ ನಿರುತ್ಸಾಹದ ದನಿಯಲ್ಲೇ "ಹಲೋ ಯಾರು?" ಎಂದೆ. "ನಾನು ಕಣೋ ಚಂದ್ರಾ" ಎಂಬ ದನಿ ಬೆರಗು ಹುಟ್ಟಿಸಿತು. ಏಕೆಂದರೆ ಈ ದನಿ ಅಕ್ಕನದು ಇಲ್ಲ ಅವ್ವನದು. ಆದರೆ ಅವರಿಬ್ಬರೂ ಇಲ್ಲವಲ್ಲಾ ಎಂದು ಯೋಚಿಸುವಷ್ಟರಲ್ಲಿ "ಗೊತ್ತಾಯ್ತೇನೊ ಯಾರು ಅಂತ? ನಾನು ನಿಮ್ಮಕ್ಕ" ಎಂದಿತು ಆ ಕರುಳ ದನಿ. ನಾನು ಸುಳ್ಳು ಸುಳ್ಳೆ "ಗೊತ್ತಾಯ್ತು ಏನೇಳಕ್ಕ" ಎಂದೆ. ಆದರೆ ನನ್ನ ದನಿಯಲ್ಲಿನ ವಿಶ್ವಾಸದ ಬಗ್ಗೆ ಸಂಶಯಗೊಂಡಂತೆ "ನಿನಗೆ ಗೊತ್ತಾಗಿಲ್ಲ ಬುಡು. ನಾನು ಮಾಲಕ್ಕ ಕಣೋ" ಎಂದಳು.

ನನಗೆ ಇನ್ನೂ ಅಚ್ಚರಿ ಕಾದಿತ್ತು, ಏಕೆಂದರೆ ನಲವತ್ತು ವರ್ಷದ ಹಿಂದೆ ಅಗಲಿಹೋಗಿದ್ದ ಅಕ್ಕ ಮತ್ತೆ ಫೋನಲ್ಲಿ ಸಿಕ್ಕಿದ್ದಳು. ಕಟ್ಟೆಯೊಡೆದ ಖುಷಿಯಿಂದ "ಅದ್ಭುತ ಕಣಕ್ಕ! ಅಂತೂ ನನ್ನ ಪತ್ತೆ ಹಚ್ಚಿ ಫೋನು ಮಾಡಿದಲ್ಲ ಹೇಳು."

"ಅಯ್ಯೋ ಅದೊಂದು ಕತೆ ಕಣೋ. ನಿನ್ನನ್ನ ಹಿಡಿಯಕ್ಕೆ ಅಂತ ನಾನು ಮಾತಾಡುಸದೋರೆ ಇಲ್ಲ. ಕಡಿಗೆ ಒಂದುಡಗನ್ನ ಹಿಡುದು ಅವುನಿಗೆ ಬೈಕ್ ಕೊಟ್ಟು ನಿಮ್ಮೂರಿಗೆ ಕಳಿಸಿ ಫೋನ್ ನಂಬರ್ ತರಿಸಿ ಫೋನ್ ಮಾಡಿದ್ದೀನಿ ಗೊತ್ತಾ?"

ಮಾಲಕ್ಕನ ಈ ಸಾಹಸ ಕೇಳಿ ಗಂಟಲು ಕಟ್ಟಿ ಬಂತು. ಇದು ಎರಡನೆ ಸಾರಿ. ಮೊದಲ ಸಾರಿ ಗಂಟಲು ಕಟ್ಟಿದ್ದು ಅವ್ವನನ್ನು ಅಗಲುವ ಎಳೆಗರುವಿನಂತೆ ಹೈಸ್ಕೂಲಿನಲ್ಲಿ ಅತ್ತಾಗ!

ಕದಬಹಳ್ಳಿ ಹೈಸ್ಕೂಲಿಗೆ ಸುತ್ತಲ ಮೂವತ್ತೆಂಟು ಹಳ್ಳಿಯಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಒಟ್ಟು ಎಪ್ಪತ್ತು ಸಂಖ್ಯೆಯಲ್ಲಿದ್ದ ನಾವೆಲ್ಲಾ ಹಿರೀಸೇವೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದು ಕೊನೆಯ ದಿನ ಅತ್ತು ಕರೆದು ಮೂವತ್ತೆಂಟು ದಿಕ್ಕಿಗೆ ಚದುರಿ ಹೋಗಿದ್ದೆವು. ಅಂದಿನಿಂದ ಇಂದಿನವರೆಗೆ ಐದಾರು ಜನ ಬಿಟ್ಟರೆ ಇನ್ನಾರೂ ಸಿಗಲೇಯಿಲ್ಲ. ಆ ಪೈಕಿ ಮಾಲಕ್ಕನೂ ಒಬ್ಬಾಕೆ. ಮಾಲಕ್ಕ ಹೆರಗನಹಳ್ಳಿಯ ನಮ್ಮ ಸಭ್ಯ ರಾಜಕಾರಣಿ ಎಚ್.ಟಿ. ಕೃಷ್ಣಪ್ಪನವರ ಸಂಬಂಧಿ. ಚಿಕ್ಕ ವಯಸ್ಸಿನಿಂದಲೂ ತಾಯಿಗುಣ ಬೆಳೆಸಿಕೊಂಡಿದ್ದವಳು. ತನ್ನ ಸಹಪಾಠಿಗಳಿಗಿಂತ ಒಂದಿಷ್ಟು ದಪ್ಪಗಿದ್ದು ಇಡೀ ವಿದ್ಯಾರ್ಥಿಸಮೂಹಕ್ಕೆ ಅಕ್ಕನಂತಿದ್ದಳು. ಎಲ್ಲಾ ಹೆಣ್ಣುಮಕ್ಕಳು ಎಸ್ಸೆಸ್ಸೆಲ್ಸಿ ಮುಗಿಯುತ್ತಿದ್ದಂತೆ ಮದುವೆಯಾಗಿ ಹೋದರೆ ಮಾಲಕ್ಕ ಟಿ.ಸಿ.ಎಚ್ ಮುಗಿಸಿ ಮೇಷ್ಟರಾದಳಂತೆ. ನಂತರ ಮತ್ತೊಬ್ಬ ಮೇಷ್ಟ್ರನ್ನ ಮದುವೆಯಾದಳಂತೆ. ಇದು ನಮ್ಮೂರ ಮೇಷ್ಟರುಗಳಿಂದ ತಿಳಿದ ಸಂಗತಿ. ಆ ನಂತರ ಮಾಲಕ್ಕನ ಸಂಗತಿ ತಿಳಿಯಲಿಲ್ಲ. ಈಗ ಅವಳೇ ಫೋನ್ ಮಾಡಿರುವುದರಿಂದ ಆಕೆಯ ವೃತ್ತಾಂತವನ್ನೇ ಕೇಳಬೇಕೆನಿಸಿತು.



"ಫೋನ್ ಮಾಡಿದ್ದಾಕೆ ಅಂತ ಹೇಳಕ್ಕ."

"ಮಗನ ಮದುವೆಗೆ ಕರಿಯನ ಅಂತ ಫೋನ್ ಮಾಡಿದೆ."

"ಮಕ್ಕಳೆಷ್ಟು ಜನವಕ್ಕ?"

"ಎಷ್ಟೋ ಜನಿಲ್ಲ, ಯರಡೆಯ. ಮಗಳ ಮದುವೆ ಆಯ್ತು, ಲಗ್ಗುನ ಪತ್ರಿಕೆ ಕಳಸನ ಅಂದ್ರೆ ನಿನ್ನ ಅಡ್ರಸ್ಸೆ ಗೊತ್ತಾಗಲಿಲ್ಲ, ಯಾರು ಕೇಳಿದ್ರೂ ಗೊತ್ತಿಲ್ಲ ಅಂದ್ರು. ಈಗ ಮಗನ ಮದಿವಿಗಾರ ಕರಿಯನಾ ಅಂದ್ರೆ ಅದೂ ಆಯ್ತಾಯಿಲ್ಲ."

"ಯಾಕಕ್ಕಾ?"

"ಏ ಹೇಳಕ್ಕೆ ಒಂಥರಾಯ್ತಾ ಆದಪ್ಪ, ನೀನಿದ ಪೇಪರ್‌ಗಾಕ್ತಿಯಾ."

"ಹಾಕೋ ಅಂತದಿದ್ರೆ ಹಾಕನ ಬುಡು."

"ಬ್ಯಾಡ ಬುಡು. ಯಲ್ಲ ಮುಗೀತಲ್ಲ."

"ಅದೇನೇಳಕ್ಕ."

"ಮಗನಿಗೆ ಹೆಣ್ಣ ನೋಡಿದ್ವೊ, ಹುಡುಗಿವೂ ವಳ್ಳೆ ಹುಡುಗಿ. ನಮ್ಮುಡುಗುನೂ ಎಮ್ಮೆಸ್ಸಿ ಓದ್ಯವುನೆ. ಅವುಳೂ ಅದ್ನೆ ಓದ್ಯವುಳೆ. ಎಲ್ರೂ ಒಪ್ಪಿಗಂಡಿದ್ರು. ಯಲ್ಲಾ ಆಯ್ತು, ಕಲ್ಯಾಣ ಮಂಟಪನೂ ಬುಕ್ ಮಾಡಿದ್ವೊ ಈಗ ಮದುವೆ ನಿಂತೋಗ್ಯದೆ."

"ಮದುವೆನೆ ನಿಂತೋಯ್ತೆ? ಅದ್ಯಾಕೆ?"

"ಏ, ಹುಡುಗಿ ಅಪ್ಪ ಟಿವಿಲಿ ಬತ್ತರಲ್ಲ ಜೋತಿಷ್ಯ ಹೇಳೊರು. ಆ ಸೂಳೆಮಗನ್ನ ಕೇಳಿದನಂತೆ."

"ಏನಂತವಾ?"

"ಈ ಹುಡುಗ ಹುಡುಗಿ ಮದುವೆ ಬಗ್ಗೆ ಹೇಳಿ ಅಂತವ. ಅವ್ರ ಎಸುರು ಕೊಟ್ಟು, ಮದುವೆ ತಾರೀಕುನೂ ಕೊಟ್ಟು, ವಳ್ಳೆದೊಂದು ಲಗ್ನ ಹೇಳಿ ಅಂದನಂತೆ. ಆ ಮುಂಡೆ ಮಗ ಈ ಮದುವೆ ಡೈವರ್ಸ್‌ರ್ಆಯ್ತದೆ ಅಂದನಂತೆ. ಅದ್ಕೆ ಹುಡುಗಿ ಅಪ್ಪ ಮದುವೆನೆ ಕ್ಯಾನ್ಸಲ್ ಮಾಡಿಬುಟ್ಟವುನೆ."

"ಅಯ್ಯೋ ಮುಂಡೆಮಗನೆ. ಅವುನಿನ್ಯಂಥಾ ಮೂರ್ಖನಕ್ಕಾ? ಯಾವ ಜ್ಯೋತಿಷಿ?"

"ಯಾವ ಚಾನಲ್ಲು ಅಂತ ಹೇಳನಪ್ಪ? ಅವು[...] ಕುಮಾರಸ್ವಾಮಿ ಅಭಿಮಾನಿಯಂತೆ. ಅದ್ಕೆ ಕಸ್ತೂರಿ ಚಾನ[...] ಜಾಸ್ತಿ ನೋಡತಿದ್ನಂತೆ. ಅದೇ ಇರಬೇಕು."

"ನಾನು ಹುಡುಗಿ ಅಪ್ಪನತ್ರ ಹೂತಾಡ್ಲ?"

"ಏ, ಹುಡುಗಿನೆ ಅಪ್ಪನ ಮಾತಮೀರಿ ಹೋಗಿ ಹುಡುಗನ್ನೇ ಮದಿವಾಯ್ತಿನಿ ಅಂತಂತೆ. ಅದ್ಕೇ ಅವು[...] ನೀನೇನಾರ ಹೋಗಿ ಅದೇ ಹುಡುಗನ್ನ ಮದಿವಾ[...] ನ್ಯಾಣಾಯ್ಕತ್ತಿನಿ ಅಂದನಂತೆ. ಆ ಹುಡುಗಿ ಅತ್ತು ಕರಕರ[...] ಸುಮ್ಮನಾಗ್ಯದೆ."

"ಹುಡುಗ ಹುಡುಗಿ ಒಂದಾಗಿದ್ರೆ, ಓಡೋ[...] ಮದಿವಾಗಕ್ಕೆ ಬರದಿಲವೆ. ಅಥವಾ ಕಳಸು ನಾನ[...] ಮಾಡ್ತೀನಿ."

"ಅಂತ ಕ್ಯಲಸ ಯಾಕ್ ಮಾಡದು ಅಂತ. ಪ[...] ಮನುಸುರ ಮಗ ಇಂತ ಕ್ಯಲಸ ಮಾಡಿದ ಅಂ[...] ಅನ್ನಿಸಿಗಳದ್ಯಾಕೆ?"

"ನಿಮ್ಮ ಯಜಮಾನ್ರು ಏನು ಹೇಳ್ತರೆ?"

"ಅವುರು ತೀರೊಗಿ ನಾಕೈದು ವರ್ಸಯ್ತು, ಅ[...] ವಡದಿತ್ತು, ಅವುರು ತೀರಿಕಳವರಿಗೂ ನಾನೇ ನೋಡಿಕಂಡ[...] ಕಣೋ. ಮೇಷ್ಟ್ರು ಕ್ಯಲಸಕ್ಕಿಂತ ಅವುರನೆ ಚೆನ್ನಾ[...] ನೋಡಿಕಬೇಕು ಅಂತ ಕ್ಯಲಸನೆ ಬುಡಕ್ಕೆ ಹ್ವಂಟಿದ್ದೆ. ಅವು[...] ಬ್ಯಾಡ ಅಂದ್ರು. ಅವುರ ಸೇವೆ ಮಾಡಿ ಮಾಡಿ ಈ[...] ಯಾರಾದ್ರು ವಯಸಾದೋರ್ನ ತಂದು ನೋಡಿಕಬೇಕ[...] ಅನ್ನೆಸ್ತಾಯಿದೆ ಕಣೋ."

"ಮದರ್ ಥೆರೇಸಾ ಬುಡು ನೀನು."

"ನಿನಗೆ ಕುಮಾರಸ್ವಾಮಿ ಗೊತ್ತಾ?"

"ಗೊತ್ತು ಕಣಕ್ಕ, ನನ್ನದೊಂದು ಪುಸ್ತಕವ ನಾರಗೇನಹ[...] ದನಿನ ಜಾತ್ರೆಲಿ ಬಿಡುಗಡೆ ಮಾಡಿಸ್ದೆ. ಆಗ ಅವುನೆ[...] ಗೆಷ್ಟು."

"ನಮ್ಮ ಮದುವೆ ಮುರದೋನು ಅವುರ ಟಿವಿ[...] ಚಾನಲ್ಲಿನಲ್ಲೇ ಜೋತಿಷ್ಯ ಹೇಳನಂತೆ. ನೀನು ಆ ಸೂಳೆಮಗನ[...] ಕ್ಯಲಸ ತಗುಸ್ತಿಯಾ?"

"ತಗುಸಬಹುದು ಕಣಕ್ಕ. ಆದ್ರೆ ಕುಮಾರಣ್ಣ ರೇವಣ್ಣ[...] ದೇವೇಗೌಡ್ರ ಬುಡಕಟ್ಟೆ ಆ ಜ್ಯೋತಿಷಿ ಹೇಳಿದಂಗೆ ಕೇಳ್ತರೆ[...] ಅಕಸ್ಮಾತ್ ನಾನು ತಗುಸಬೇಕಾದ್ರೆ, ಅವುನಿಗಿಂತ[...]

ವಿಶ್ವಮಾನವ ವಿಚಾರ ವೇದಿಕೆ

ಆಯೋಜಿಸುತ್ತಿರುವ

ಜಾತಿಮುಕ್ತ ಮನಸ್ಸುಗಳ ಸಮ್ಮಿಲನ

(ಜಾತ್ಯತೀತ ಒಲವಿನವರ ಮತ್ತು ಅಂತರ್ಜಾತಿ ಮತ್ತು ಅಂತರ್ಧರ್ಮೀಯ ವಿವಾಹಿತರ ರಾಜ್ಯ ಮಟ್ಟದ ಸಮಾವೇಶ)

ಮೇ 9, 2016 ಬಸವ ಜಯಂತಿಯ ದಿನ ರೈತ ಸಭಾಂಗಣ, ಬಸ್ ನಿಲ್ದಾಣದ ಪಕ್ಕ, ಮಂಡ್ಯ.

ಆತ್ಮೀಯರೇ,

ಈ ಬಾರಿಯ ಮೇ 9, ಬಸವಜಯಂತಿ; 'ಕಲ್ಯಾಣ'ದ ದಿನ. ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣವು ಅಪೂರ್ವ ಜಾತ್ಯತೀತ ಕ್ರಾಂತಿಗೆ ನಾಂದಿ ಹಾಡಿದ್ದಕ್ಕೆ ಪ್ರತೀಕ. ಅಂದು ಅಲ್ಲಿ ಜಾತಿಮೀರಿ ನಡೆದ ಕಲ್ಯಾಣವು ಈ ನೆಲದ ಮನುಷ್ಯ ಪ್ರೇಮವನ್ನು ಎತ್ತಿ ಹಿಡಿದಿತ್ತು, ಅಲ್ಲಿಂದಾಚೆಗೆ ಹಲವು ಮಹನೀಯರು ಈ ನಾಡಿನಲ್ಲಿ ಜಾತಿ-ಧರ್ಮಗಳನ್ನು ಮೀರಿದ ಪ್ರೀತಿಯನ್ನು ಎತ್ತಿ ಹಿಡಿದಿದ್ದಾರೆ. ವಿಶ್ವಮಾನವ ಸಂದೇಶವನ್ನು ಸಾರಿದ ಕುವೆಂಪು ನಮ್ಮ ಪ್ರೀತಿಯ ರಾಷ್ಟ್ರಕವಿಯಾಗಿದ್ದಾರೆ. ಸಮಾನತೆ ಮತ್ತು ಭ್ರಾತೃತ್ವಗಳನ್ನು ಮೇಳೈಸಿದ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದ ಅಂಬೇಡ್ಕರ್‌ರವರು ನಮ್ಮ ಆದರ್ಶವಾಗಿದ್ದಾರೆ. ತನ್ನ ಕೊನೆಗಾಲದಲ್ಲಿ 'ಅಂತರ್ಜಾತಿ ಮದುವೆಯಲ್ಲದೇ ಬೇರೆ ಮದುವೆಗಳಿಗೆ ಹೋಗಲಾರೆ' ಎಂದ ಗಾಂಧೀಜಿಯವರು ಮನುಷ್ಯ ಪ್ರೇಮದ ಪ್ರತೀಕವಾಗಿದ್ದಾರೆ. ಬುದ್ಧ ಸಾರಿದ ಸಮತೆ, ನ್ಯಾಯ, ಕಾರುಣ್ಯದ ಹಾದಿಯಲ್ಲಿ, ಜೀವಪರತೆಯ ದಿಕ್ಕಿಗೆ ಸಾಗಲು ಈ ಜಗತ್ತು ತುಡಿದಿದೆ. ಇವರೆಲ್ಲರ ಹೆಜ್ಜೆ ಜಾಡಿನಲ್ಲಿ ನಡೆದವರು ಅಸಂಖ್ಯಾತರು.

ಇದೇ ನಾಡಿನಲ್ಲಿ ಇಂದು ನಮ್ಮನ್ನು ಆಘಾತಕ್ಕೆ ಈಡು ಮಾಡುವ ಸಂಗತಿಗಳೂ ನಡೆಯುತ್ತಿವೆ. ಹೆತ್ತವರೇ 'ಜಾತಿ ಮೀರಿದರೆಂಬ ಕಾರಣಕ್ಕೆ' ಮಕ್ಕಳನ್ನು ಕೊಲ್ಲುವ ಮಟ್ಟಕ್ಕೆ ಅಸಹನೆ ಬೆಳೆಯುತ್ತಿರುವುದು ನಾವೆಲ್ಲರೂ ಗಂಭೀರವಾಗಿ ಪ್ರತಿಕ್ರಿಯಿಸಬೇಕಾದ ಸಂದರ್ಭವನ್ನು ಸೃಷ್ಟಿಸಿದೆ. ಈ ಅಸಹನೆಗೆ ಮನುಷ್ಯ ಪ್ರೀತಿಯ ಮದ್ದನ್ನು ಲೇಪಿಸುವ ಕಾರ್ಯಕ್ರಮವೊಂದನ್ನು ರೂಪಿಸುವ ಸಲುವಾಗಿ ಈ ಸಮ್ಮಿಲನ ಆಯೋಜನೆಗೊಂಡಿದೆ. ಹಲವು ದಶಕಗಳಿಂದ ಈ ನಿಟ್ಟಿನಲ್ಲಿ ಕೆಲಸ ಮಾಡಿದ, ಮಾಡುತ್ತಿರುವ ಹಿರಿಯರು ಹಾಗೂ ಅವರು ಹಿಡಿದ ಕೈದೀವಿಗೆಯನ್ನು ಹೊತ್ತು ಮುನ್ನಡೆಯುತ್ತಿರುವ ಕಿರಿಯರು ಜೊತೆಯಾಗುತ್ತಿದ್ದಾರೆ. ಅಂದು ನೀವು ಇಲ್ಲದಿದ್ದರೆ ಹೇಗೆ? ತಪ್ಪದೇ ಬನ್ನಿ. ಎಲ್ಲರೂ ಜೊತೆ ಸೇರಿ, ಜಾತಿಮುಕ್ತವಾಗಿ ಆಲೋಚಿಸುವುದರಲ್ಲಿನ ಸಂಭ್ರಮವನ್ನು ಮತ್ತೊಮ್ಮೆ ಸಾರಿ ಹೇಳೋಣ. ಇಷ್ಟೊಂದು ಜನ ಅದೆಷ್ಟೋ ವರ್ಷಗಳ ಕೆಳಗೇ ಜಾತಿ-ಧರ್ಮಗಳ ಎಲ್ಲೆ ಮೀರಿ ಬದುಕಲಾರಂಭಿಸಿದ್ದರಿಂದ, ಅದು ನಮಗೆ ತಂದಿತ್ತ ಹೊಸತನ ಮತ್ತು ಸಂತಸಗಳನ್ನು ಇನ್ನಷ್ಟು ಜನರಿಗೆ ಹಂಚೋಣ. ನಮ್ಮಂತೆಯೇ ಬದುಕುತ್ತಿರುವ, ಆದರೆ ನಮಗೆ ಪರಿಚಿತರಲ್ಲದವರನ್ನು ಪರಿಚಯ ಮಾಡಿಕೊಳ್ಳೋಣ. ಆ ಮೂಲಕ ಒಂದು ಸಕಾರಾತ್ಮಕ ಸಂದೇಶವನ್ನು ನೀಡುವ ಕೆಲಸ ಮಾಡೋಣ.

ಈ ಸಮಾವೇಶವು ಅಂತರ್ಜಾತಿ ಮದುವೆಯಾದವರಿಗೆ ಮಾತ್ರ ಸೀಮಿತವಲ್ಲ, ಜಾತಿ ಮುಕ್ತವಾಗಿ ಮತ್ತು ಪ್ರಜಾತಾಂತ್ರಿಕವಾಗಿ ಆಲೋಚಿಸುವ ಎಲ್ಲಾ ಪ್ರಜ್ಞಾವಂತರೂ ಇದರಲ್ಲಿ ಪಾಲ್ಗೊಳ್ಳಬೇಕೆಂದು ಪ್ರೀತಿಯಿಂದ ಆಹ್ವಾನಿಸುತ್ತಿದ್ದೇವೆ.

ಕಾರ್ಯಕ್ರಮ

ಉದ್ಘಾಟನಾ ಗೋಷ್ಠಿ: 10.30ರಿಂದ 12.15

ಪ್ರಸ್ತಾವನೆ: ಮಲ್ಲಿಗೆ, ಮಹಿಳಾ ಮುನ್ನಡೆ

ಉದ್ಘಾಟನೆ: ಪ್ರೊ. ರವಿವರ್ಮಕುಮಾರ್, ನಿಕಟಪೂರ್ವ ಅಡ್ವೋಕೇಟ್ ಜನರಲ್

ಆಶಯ ನುಡಿ: ದೇವನೂರ ಮಹಾದೇವ, ಹಿರಿಯ ಲೇಖಕರು

ಉಪಸ್ಥಿತಿ: ಎಚ್.ಎಲ್.ಕೇಶವಮೂರ್ತಿ, ಉಗ್ರನರಸಿಂಹೇಗೌಡ, ಬಿ.ಟಿ.ವಿಶ್ವನಾಥ್, ಎಂ.ಸಿ.ಶಿವರಾಜ್

ಅಧ್ಯಕ್ಷತೆ: ಸುನಂದಾ ಜಯರಾಂ, ಹಿರಿಯ ರೈತ ಮುಖಂಡರು

12.30ರಿಂದ 1.45ವರೆಗೆ ಜಾತ್ಯತೀತ ಒಲವಿನ ಕುರಿತ ಚಿಂತನೆ

ಶರಣ ಚಳವಳಿಯ ಕಾಲ: ರಂಜಾನ್ ದರ್ಗಾ, ಬಸವತತ್ವ ವಿಚಾರವಾದಿಗಳು

ಗಾಂಧಿಯವರ ಚಿಂತನೆ: ಲತಾ ಮೈಸೂರು, ಪ್ರಾಧ್ಯಾಪಕರು

ಅಂಬೇಡ್ಕರ್ ಅವರ ಚಿಂತನೆ: ಇಂದಿರಾ ಕೃಷ್ಣಪ್ಪ ಮಾನವ ಮಂಟಪ

ಕುವೆಂಪು ಅವರ ಚಿಂತನೆ: ಪ್ರೊ. ಹಿ.ಶಿ. ರಾಮಚಂದ್ರೇಗೌಡ, ನಿವೃತ್ತ ಪ್ರಾಧ್ಯಾಪಕರು

ಅಧ್ಯಕ್ಷತೆ: ಗುರುಪ್ರಸಾದ್ ಕೆರಗೋಡು, ರಾಜ್ಯ ಸಂಚಾಲಕರು, ದಸಂಸ

ಊಟದ ಬಿಡುವು: 1.45 ರಿಂದ 2.30

ಅಂತರ್ಜಾತಿ/ಅಂತರ್ಧರ್ಮೀಯ ವಿವಾಹಿತರ ಅನಿಸಿಕೆಗಳು, ಅನುಭವಗಳು: 2.30ರಿಂದ 3.45ರವರೆಗೆ.

ಮುಮ್ಮಾತು: ಡಾ. ಸಬಿಹಾ ಭೂಮಿಗೌಡ, ಪ್ರಾಧ್ಯಾಪಕರು

ಅನುಭವ-ಅನಿಸಿಕೆಗಳು: ಡಾ. ವಸುಂಧರಾ ಭೂಪತಿ, ಸ್ನೇಹಾ, ನಾಗಮಂಗಲ ಕೃಷ್ಣಮೂರ್ತಿ, ಅಖಿಲಾ ವಿದ್ಯಾಸಂದ್ರ, ಶಶಿಧರ ಹೆಮ್ಮಾಡಿ, ದೇವಿಕಾ ಕೀರ್ತಿ, ಶ್ರೀನಿವಾಸ ನಾಟೇಕರ್ ಮುಂತಾದವರು

ಸಮಾರೋಪ: 3.45ರಿಂದ 5.15

ಜಾತ್ಯತೀತ ಒಲವಿನ ಮದುವೆಗಳಾದವರ ರಕ್ಷಣೆಗೆ ನಾವೆಲ್ಲಾ ಸೇರಿ ರಾಜ್ಯ ಮಟ್ಟದಲ್ಲಿ ಏನು ಮಾಡಬಹುದು?

ಸಮಾರೋಪ ಭಾಷಣ: ಡಾ.ನಟರಾಜ್ ಹುಳಿಯಾರ್, ಪ್ರಾಧ್ಯಾಪಕರು

ಮುಖ್ಯ ಅತಿಥಿಗಳು: ಕೆ.ಎಸ್.ಪುಟ್ಟಣ್ಣಯ್ಯ, ರುದ್ರಪ್ಪ ಹನಗವಾಡಿ, ಕೆ.ಅರಕೇಶ್

ವೇದಿಕೆಯ ಮೇಲೆ ಉಪಸ್ಥಿತಿ: ಹಯವದನ ಮೂಡುಸಗ್ರಿ, ಜಾತಿಮುಕ್ತ ಸಂಬಂಧ ವೇದಿಕೆ, ವೆಂಕಟಗಿರಿಯಯ್ಯ, ರಾಜ್ಯ ಸಂಚಾಲಕರು ಕದಸಂಸ

ನಮ್ಮ ಮುಂದಿನ ನಡೆ ಹಾಗೂ ಸಮಾವೇಶದ ನಿರ್ಣಯಗಳ ಮಂಡನೆ: ಎಂ.ಬಿ.ಶ್ರೀನಿವಾಸ್, ರಾಜ್ಯ ಸಂಘಟನಾ ಸಂಚಾಲಕರು, ಕರಾದಸಂಸ.

ಅಧ್ಯಕ್ಷತೆ: ಪ್ರೊ.ಜಿ.ಟಿ.ವೀರಪ್ಪ, ನಿವೃತ್ತ ಪ್ರಾಂಶುಪಾಲರು

ಸಾಂಸ್ಕೃತಿಕ ಕಾರ್ಯಕ್ರಮಗಳು

ಹರಳಹಳ್ಳಿ ಗೋವಿಂದರಾಜು, ಹುರುಗಲವಾಡಿ ರಾಮಯ್ಯ ಮತ್ತು ಮಂಜುಳಾ, ಗಾಮನಹಳ್ಳಿ ಸ್ವಾಮಿ, ಸಿ.ಬಿ.ಮಹದೇವಪ್ಪ, ಜಿ.ಆರ್.ಗಂಗಾಧರ್

ಸಹಭಾಗಿಗಳು: ಕರ್ನಾಟಕ ರಾಜ್ಯ ರೈತಸಂಘ, ದಲಿತ ಸಂಘರ್ಷ ಸಮಿತಿ, ಕರ್ನಾಟಕ ಜನಶಕ್ತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ವಿಚಾರ ವೇದಿಕೆ ಕರ್ನಾಟಕ, ಭಾರತೀಯ ಬೌದ್ಧ ಮಹಾಸಭಾ, ಮಾನವ ಮಂಟಪ ಮೈಸೂರು, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಮಾನವ ಮಂಟಪ, ಬೆಂಗಳೂರು, ಜಾತಿಮುಕ್ತ ಸಂಬಂಧ ವೇದಿಕೆ, ಉಡುಪಿ. ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಮಂಡ್ಯ. ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ). ಮಹಿಳಾ ಮುನ್ನಡೆ, ಮಂಡ್ಯ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕೆ.ಬೋರಯ್ಯ - 9845154587, ಗುರುಪ್ರಸಾದ್ ಕೆರಗೋಡು - 9448201857, ಪ್ರೊ.ಜಿ.ಟಿ.ವೀರಪ್ಪ - 9448572966, ಎಂ.ಬಿ.ಶ್ರೀನಿವಾಸ್ - 9448414611, ಬಿ.ಕೃಷ್ಣಪ್ರಕಾಶ್ - 8553329979, ಶಿವರಾಜ್ - 9900694436, ಕಮಲ - 9964590097

ೋರಾಗಿರೋನ್ನ ಹಿಡುದುಕೊಡಬೇಕು."

"ಅಂಗಾರ ಮಾಡು."

"ಅಂಗೆ ಮಾಡಿದ್ರೆ ನಿನ್ನ ಮಗನ ಮದುವೆ ಮುರದೊನ್ನ ...ಲ್ಲ್ ಟಿವಿ ರಂಗನಾಥ್ ತಗಂಡೋಗಿ ಇಟಗುನೆ. ಅವುನು ...ವ ಅಂದ್ರೆ ಇನ್ನೊಂದು ಚಾನಲ್ಲಿಗೆ ಹೋಯ್ತನೆ. ಇಡೀ ...ವಿ ಮುಂಡೆ ಮಕ್ಕಳೆಲ್ಲ ಇಂತ ಮನಿಹಾಳ ಜ್ಯೋತಿಷಿಗಳ ...ಡಿಕುಂಡು. ಇಡೀ ಕರ್ನಾಟಕ ಹುಚ್ಚಾಸ್ಪತ್ರೆ ಮಾಡ್ತ ಅವ್ರುರೆ ...ಕ್ಕ" ಎಂದಾಗ ಮಾಲಕ್ಕ ಅಸಹಾಯಕ ದನಿಯಲ್ಲಿ ...ವುದ್ಕೂ ನೀನು ಬಂದೋಗು. ನಿಂತಾವ ತುಂಬ ...ತಾಡ್ಬೇಕು" ಎಂದಳು.

"ಆಯ್ತು ಕಣಕ್ಕ ಬತ್ತಿನಿ" ಎಂದವನಿಗೆ ಏನು ...ಡಲೂ ತೋಚದ ಸ್ಥಿತಿಯೊಂದು ನಿರ್ಮಾಣವಾಯಿತು.

ಶಾಸ್ತ್ರ ಹೇಳುವ ನೆಪದಲ್ಲಿ ಮೈಗೆಲ್ಲಾ ಹೇಸಿಗೆಯಂತ ...ಣ್ಣ ಬಳಿದುಕೊಂಡು, ಫ್ಯಾನ್ಸಿ ಡ್ರೆಸ್ಸಿನಲ್ಲಿ ಬಂದು ಕೂತು ...ಢ್ಯವನ್ನೇ ಪ್ರತಿಪಾದಿಸುತ್ತ ಮುಗ್ಧ ಜನರ ಬದುಕನ್ನೇ ...ಲಿ ತೆಗೆದುಕೊಳ್ಳುತ್ತಿರುವ ಈ ಮೂರ್ಖರನ್ನು ಯಾರು ...ಯಂತ್ರಿಸಬೇಕು? ಸರಕಾರವೇನೂ ಮಹಾರಾಷ್ಟ್ರಕ್ಕಿಂತಲೂ ...ರಿಣಾಮಕಾರಿಯಾದ ಕಾಯ್ದೆಯನ್ನು ಜಾರಿ ಮಾಡಿ ...ೂಢನಂಬಿಕೆಗಳನ್ನು ತಡೆಯುತ್ತೇವೆ ಎಂದು ಹೇಳುತ್ತಿದೆ. ...ರ್ನಾಟಕದ ಬುದ್ಧಿಜೀವಿಗಳೂ 'ನೀವಲ್ಲದೆ ಇನ್ನಾರೂ ...ೂಢನಂಬಿಕೆ ನಿಷೇಧ ಮಾಡಲಾಗದು' ಎಂದು ...ದ್ದರಾಮಯ್ಯನವರನ್ನು ವಿನಂತಿಸಿಕೊಂಡಿದ್ದಾರೆ, ಆದರದು ...ಷ್ಟು ಸುಲಭವಲ್ಲ. ಇಡೀ ಬಿಜೆಪಿ ಜೊತೆಗೆ ಜೆಡಿಎಸ್, ...ಾಂಗ್ರೆಸ ಮುಕ್ಕಾಲುಭಾಗ ಶಾಸಕರು ಮೂಢನಂಬಿಕೆ ...ರಾಧಕರು. ಪ್ರಜೆಗಳಿಗಾಗಿ ಅವನ್ನೆ ಪ್ರತಿಪಾದಿಸುವಂತವರು.

ಮೂಢನಂಬಿಕೆ ನಿಷೇಧ ಕಾಯಿದೆಯೊಳಕ್ಕೆ ಜೋತಿಷ್ಯ ...ೇರಲಾರದು. ಆದ್ದರಿಂದ ಟಿವಿಯೊಳಗೆ ಕುಳಿತ ...ಫೂನ್‌ಗಳು ಈ ಕಾಯ್ದೆಯಿಂದ ಹೊರಗುಳಿಯುತ್ತಾರೆ. ...ಲ್ಲಕ್ಕಿಂತ ಮುಖ್ಯವಾಗಿ ತಮ್ಮ ತಮ್ಮ ಜನಾಂಗದ ಬದುಕನ್ನು ...ಸನು ಮಾಡಲೆಂದೇ ಜನ್ಮತಾಳಿರುವ ಜಗದ್ಗುರುಗಳು ...ಮಾತ್ರ ಮೂರ್ಖ ಜ್ಯೋತಿಷಿಗಳಿಂದ ಈ ನಾಡಿನ ಜನರನ್ನು ...ಪಾರು ಮಾಡಬಲ್ಲರೇನೊ ಅನ್ನಿಸಿತು. ಆದರೆ ಅದರ ಬಗ್ಗೆ ...ಹೆಚ್ಚು ಯೋಚಿಸಿದಾಗ ಅಂತಹ ಜಗದ್ಗುರುಗಳ ಸಂಖ್ಯೆಯೂ ...ೀರ ಕಡಿಮೆ ಇರುವುದು ದುರಂತ ಎನ್ನಿಸಿತು.

■ ಬಿ. ಚಂದ್ರೇಗೌಡ

ಇದು 'ಗುಜರಾತ್ ಮಾದರಿ' ಭ್ರಷ್ಟಾಚಾರ

ಈ ಸರ್ತಿಯ ಪಾರ್ಲಿಮೆಂಟ್ ಕಲಾಪವನ್ನು ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಖರೀದಿ ಹಗರಣವೊಂದೇ ಪೂರ್ತಿಯಾಗಿ ನುಂಗಿಹಾಕಲಿರುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ. ಭಾರತದ ರಾಜಕಾರಣದ ಇತ್ತೀಚಿನ ವೈಶಿಷ್ಟ್ಯವೊಂದನ್ನು ಪ್ರಾಯಶಃ ನೀವೂ ಗಮನಿಸಿರಬಹುದು. ಅದೇನೆಂದರೆ ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿಷಯದಲ್ಲಿ ಮಂತ್ರಕ್ಕಿಂತಲೂ ಉಗುಳೆ ಜಾಸ್ತಿಯಾಗಿದೆ. ಕಾನೂನುಕ್ರಮಕ್ಕಿಂತಲೂ ವಾಗ್ಯುದ್ಧ, ಆರೋಪ, ಪ್ರತ್ಯಾರೋಪಗಳೇ ಮುಖ್ಯವಾಗಿಬಿಟ್ಟಿವೆ. ಭ್ರಷ್ಟಾಚಾರ ಮತ್ತು ಕಪ್ಪುಹಣದ ಬಗ್ಗೆ ಅತ್ಯಧಿಕ ವರದಿ, ಚರ್ಚೆ, ಗಲಾಟೆ ಇತ್ಯಾದಿಗಳೆಲ್ಲ ನಡೆಯುವುದು ಹೆಚ್ಚಾಗಿ ಎರಡು ಸಂದರ್ಭಗಳಲ್ಲಿ, ಒಂದು ಚುನಾವಣಾ ಪ್ರಚಾರದ ಕಾಲದಲ್ಲಿ, ಎರಡು, ಸಂಸತ್ತಿನ ಅಧಿವೇಶನಕ್ಕೆ ಮೊದಲು. ಮೊದಲನೆಯದರ ಉದ್ದೇಶ ಸ್ಪಷ್ಟವಿದೆ. ಸಂಸತ್ತಿನಲ್ಲಿ ಆರೋಗ್ಯಪೂರ್ಣ ಚರ್ಚೆಗಳು ನಡೆಯದೆ ಕೇವಲ ಸದ್ದುಗದ್ದಲದೊಂದಿಗೆ ಕಲಾಪ ಮುಕ್ತಾಯಗೊಳ್ಳಬೇಕೆಂಬುದೆ ಎರಡನೆಯದರ ಉದ್ದೇಶ ಎಂದು ತೋರುತ್ತದೆ. ಬಹುಶಃ ಇಂತಹ ಕೆಲವೊಂದು ವಿವಾದಾತ್ಮಕ ಸಂಗತಿಗಳು ಇತ್ಯರ್ಥ ಆಗುವುದು ಕೂಡ ಯಾರಿಗೂ ಬೇಕಾಗಿರುವಂತಿಲ್ಲ. ಇಂತಹ ಪ್ರಕರಣಗಳನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯದೆ ತೂಗುಕತ್ತಿಯಂತೆ ಇರಿಸುವುದೆ ಹೆಚ್ಚು ಉಪಯುಕ್ತವೆಂದು ಕಂಡುಕೊಳ್ಳಲಾಗಿದೆ! ಏಕೆಂದರೆ ಅವುಗಳ ಮೂಲಕ ರಾಜಕೀಯ ಲಾಭದ ಕೊಯ್ಲನ್ನು ನಿರಂತರವಾಗಿ ಕೊಯ್ಯಬಹುದಾಗಿದೆ!


ಯುಪಿಎ ಸರಕಾರದ ಭ್ರಷ್ಟಾಚಾರ ಮತ್ತು ಕಪ್ಪುಹಣದ ವಿಷಯವೆ 2014ರ ಚುನಾವಣೆಗಳಲ್ಲಿ ಬಿಜೆಪಿಯ ಪ್ರಚಂಡ ಗೆಲುವಿನ ಹಿಂದಿರುವ ಕಾರಣಗಳ ಪೈಕಿ ಪ್ರಮುಖವಾದುದು ಎಂಬುದರ ಬಗ್ಗೆ ಬಹುಶಃ ಎರಡು ಮಾತಿಲ್ಲ. ಚುನಾವಣೆಗಳ ಸಮಯದಲ್ಲಿ '56 ಇಂಚಿನ' ಉಬ್ಬಿದೆದೆಯಿಂದ ಹೊರಬಿದ್ದ ನೂರಾರು ಪೊಳ್ಳು ಭರವಸೆಗಳ ಪೈಕಿ ಬಹಳ ಜನಪ್ರಿಯವಾಗಿದ್ದ ಎರಡು ಘೋಷಣೆಗಳೆಂದರೆ "ನಾ ಖಾವೂಂಗಾ ನಾ ಖಾನೆ ದೂಂಗಾ" (ನಾನು ಭ್ರಷ್ಟಾಚಾರದಲ್ಲಿ ತೊಡಗಲಾರೆ, ಇತರರೂ ಭ್ರಷ್ಟಾಚಾರ ಮಾಡಲು ಬಿಡಲಾರೆ) ಮತ್ತು "ವಿದೇಶಗಳಲ್ಲಿ ಬಚ್ಚಿಟ್ಟಿರುವ ಕಪ್ಪುಹಣವನ್ನು ಹುಡುಕಿ ತಂದು ಪ್ರತಿಯೊಬ್ಬ ಭಾರತೀಯನಿಗೂ 15 ಲಕ್ಷ ರೂಪಾಯಿ ಹಂಚುವೆವು."

ಇಂತಹ ಜನಾಕರ್ಷಕ ಘೋಷಣೆಗಳು ಮತ್ತು 'ಗುಜರಾತ್ ಮಾದರಿ ಅಭಿವೃದ್ಧಿ'ಯ ಭರವಸೆ ಎರಡೂ ಸೇರಿ ಸಾಮಾನ್ಯ ಮತದಾರರನ್ನು ಒಂದು ಝುಗಮಗಿಸುವ ಭ್ರಮಾಲೋಕಕ್ಕೆ ಕೊಂಡೊಯ್ದಿದ್ದವು. ಪಾಪ ಅವರಿಗೇನು ಗೊತ್ತು ಗುಜರಾತ್ ರಾಜ್ಯ ಮಾದರಿಯಾಗಿದ್ದುದು ಎಲ್ಲಾ ರಾಂಗ್ ವಿಷಯಗಳಿಗಾಗಿ ಎಂದು? ಸತ್ಯಸಂಗತಿಗಳನ್ನು ಜನರ ಮುಂದಿಡಬೇಕಾಗಿದ್ದ ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಹೆಚ್ಚಿನವು ಮೌನಕ್ಕೆ ಶರಣಾಗಿದ್ದ ವಿಚಾರ ಇತಿಹಾಸದ ಪುಟಗಳಲ್ಲಿ ಒಂದು ಕಪ್ಪುಚುಕ್ಕಿಯಾಗಿ ಶಾಶ್ವತವಾಗಿ ದಾಖಲಾಗಿದೆ. ಬೆರಳೆಣಿಕೆಯ ಮಾಧ್ಯಮಗಳು ಮತ್ತು ಕೆಲವೊಂದು ಜನಪರ ಸಂಘಸಂಸ್ಥೆಗಳು ಮೋದಿಯ ಪ್ರಚಾರಯಂತ್ರವನ್ನು ಧೈರ್ಯದಿಂದ ಎದುರಿಸಿ ಸತ್ಯಾಂಶಗಳನ್ನು ತಿಳಿಸುವ ಪ್ರಯತ್ನ ಮಾಡಿದವಾದರೂ ದುರದೃಷ್ಟವಶಾತ್ ಅದು ಬಹಳ ಸೀಮಿತ ಸಂಖ್ಯೆಯ ಜನರನ್ನಷ್ಟೆ ತಲುಪಲು ಸಾಧ್ಯವಾಗಿದೆ. ಆ ಸತ್ಯಾಂಶಗಳಲ್ಲೊಂದಾಗಿದ್ದುದು ಮೋದಿಯ ಗುಜರಾತ್‌ನಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿತ್ತು ಎಂಬ ವಿಷಯ. ಯಾರೇ ಇರಲಿ ಗುಜರಾತ್‌ನಲ್ಲಿ ಲೋಕಾಯುಕ್ತ, ಲೋಕಪಾಲರನ್ನು ಯಾಕಾಗಿ ನೇಮಕ ಮಾಡಿಲ್ಲ ಎಂಬುದರ ಕುರಿತು ಸ್ವಲ್ಪ ಯೋಚಿಸಿದರೂ ಸಾಕು ಉತ್ತರ ತಂತಾನೆ ಹೊಳೆಯುತ್ತದೆ. ವಾಸ್ತವದಲ್ಲಿ ಗುಜರಾತಿನ ಬ್ರಹ್ಮಾಂಡ ಭ್ರಷ್ಟಾಚಾರದ ಅಸಲಿಯತ್ತನ್ನು ಬಯಲಿಗೆ ಎಳೆಯುವಂತಹ ಲಿಖಿತ ರೂಪದ ದಾಖಲೆಗಳೂ ಲಭ್ಯವಿರುವುದಾಗಿ ತಿಳಿದುಬಂದಿದೆ. ನ್ಯಾ| ಎಂ.ಬಿ.ಶಾ ನೇತೃತ್ವದ ತನಿಖಾ ಆಯೋಗದ ವರದಿ ಇದರ ಸಂಪೂರ್ಣ ವಿವರಗಳನ್ನು ಒದಗಿಸುತ್ತದೆ ಎನ್ನಲಾಗಿದೆ.

ಅಂದು ಪ್ರತಿಪಕ್ಷಗಳ ಒತ್ತಡಕ್ಕೆ ಮಣಿದ ರಾಜ್ಯದ ಮೋದಿ ಸರ್ಕಾರ ಕೊನೆಗೂ ಆಯೋಗದ ರಚನೆಗೆ ಸಮ್ಮತಿಸಿ 16.8.2011ರಂದು ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾದ ಶಾರನ್ನು ತನಿಖಾ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿತ್ತು. ಇದಕ್ಕೆ ಸಂಬಂಧಿಸಿದ ಅಧಿಸೂಚನೆಯಲ್ಲಿ "ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರದ ಬಗ್ಗೆ ದೇಶದಲ್ಲಿ ಬಲವಾದ ಅಭಿಪ್ರಾಯ ಮೂಡುತ್ತಿರುವ ಸಂದರ್ಭದಲ್ಲಿ ಗುಜರಾತಿನ ಜನ ಈ ಆರೋಪಗಳಲ್ಲಿ ಹುರುಳಿದೆಯೆ ಎಂದು ತಿಳಿಯಬೇಕಾಗಿದೆ..... ಮೇಲ್ಕಂಡ ಪ್ರತಿಯೊಂದು ಆರೋಪದ ವಿಷಯದಲ್ಲಿ ಸತ್ಯಾಂಶ ಏನೆಂದು ಜನರ ಗಮನಕ್ಕೆ ತರುವ ಅವಶ್ಯಕತೆ ಇದೆ....." ಎಂದು ಬರೆಯಲಾಗಿದೆ. ಎಷ್ಟೊಂದು ಉದಾತ್ತವಾಗಿದೆ ಅಲ್ಲವೇ. ಆದರೆ ಮುಂದೇನಾಯಿತೆಂಬುದೇ ಮುಖ್ಯ.

ಆಯೋಗದ ಮಧ್ಯಂತರ ವರದಿ 27.9.2012ರಂದು ಸಲ್ಲಿಕೆಯಾಗಿದೆ. ಮುಂದೆ 6.11.2013ರಂದು ಅಂತಿಮ ವರದಿಯನ್ನು ಸಲ್ಲಿಸಲಾಗಿದ್ದು ಅದರಲ್ಲಿ ಮೋದಿ ನೇತೃತ್ವದ ಗುಜರಾತ್ ಸರ್ಕಾರ 14 ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ಆರೋಪಿಸಲಾಗಿದೆ. ವಾಸ್ತವವಾಗಿ ಗುಜರಾತ್ ಪ್ರದೇಶ ಕಾಂಗ್ರೆಸ್ ವತಿಯಿಂದ ರಾಷ್ಟ್ರಪತಿಯವರಿಗೆ ಸಲ್ಲಿಸಲಾಗಿದ್ದ ಮೂಲ ಮನವಿಪತ್ರದಲ್ಲಿ ಒಟ್ಟು 17 ಭ್ರಷ್ಟಾಚಾರ ಪ್ರಕರಣಗಳನ್ನು ಪಟ್ಟಿಮಾಡಲಾಗಿತ್ತು. ಆ 14 ಆರೋಪಗಳ ಪೈಕಿ ಕೆಲವು ಪ್ರಮುಖ ಆರೋಪಗಳು ಇಲ್ಲಿವೆ:






- ಅದಾನಿ, ರಿಯಾ, ಟಾಟಾ ಮುಂತಾದ ಕಾರ್ಪೊರೇಟ್ ಧನಿಗಳಿಗೆ ಮಾರುಕಟ್ಟೆ ದರಕ್ಕಿಂತ ತೀರಾ ಕಡಿಮೆ ಬೆಲೆಗಳಲ್ಲಿ ಭೂಮಿ ಒದಗಿಸಿರುವುದು
- ಜಾನುವಾರು ಮೇವು ಹಗರಣ
- ಅಂಗನವಾಡಿಗಳಿಗೆ ಹಿಟ್ಟು ಪೂರೈಕೆಯಲ್ಲಿ ಅವ್ಯವಹಾರ
- ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್‌ನ ಅವ್ಯವಹಾರಗಳು (ಕೃಷ್ಣಾ ಗೋದಾವರಿ ಗ್ಯಾಸ್ ಇತ್ಯಾದಿ)
- ಸುಜಲಾಂ ಸುಫಲಾಂ ಅವ್ಯವಹಾರ

ಧೂರ್ತ ರಾಜ್ಯ ಸರ್ಕಾರ ಏನು ಮಾಡಿತು? ಸಾವಿರಾರು ಕೋಟಿ ರೂಪಾಯಿಗಳನ್ನೊಳಗೊಂಡಿರುವ ಅವ್ಯವಹಾರಗಳ ಕುರಿತ ಈ ಸ್ಫೋಟಕ ವರದಿಯನ್ನು ಶಾಸನಸಭೆಯಲ್ಲಿ ಮಂಡಿಸದೆ, ರಾಜ್ಯಪಾಲರಿಗೂ ತಿಳಿಸದೆ, ಸಾರ್ವಜನಿಕ ವಲಯಕ್ಕೂ ಬಿಡುಗಡೆ ಮಾಡದೆ ತನಗೆ ತಾನೇ "ಕ್ಲೀನ್‌ಚಿಟ್" ಕೊಟ್ಟುಕೊಂಡಿದೆ! ಕೇವಲ ಮಧ್ಯಂತರ ವರದಿಯನ್ನಷ್ಟೆ ಸಚಿವಸಂಪುಟ ಸಭೆಯ ಮುಂದಿಟ್ಟು ಅನುಮೋದನೆ ಪಡೆದುಕೊಳ್ಳಲಾಗಿದೆ. ತರುವಾಯ ಸರ್ಕಾರದ ವಕ್ತಾರ ಜಯ ನಾರಾಯಣ್ ವ್ಯಾಸ್ ಒಂದು ಹೇಳಿಕೆ ನೀಡಿ ಮೋದಿ ಸರ್ಕಾರ ಯಾವುದೇ ರೀತಿಯ ಭ್ರಷ್ಟಾಚಾರದಲ್ಲಿ ತೊಡಗಿಲ್ಲ ಎಂಬುದಾಗಿ ಆಯೋಗ "ಕ್ಲೀನ್‌ಚಿಟ್" ನೀಡಿದೆ ಎಂದಿದ್ದಾನೆ. ಅಸೆಂಬ್ಲಿ ಚುನಾವಣೆಗಳ ನೀತಿಸಂಹಿತೆ ಜಾರಿಗೊಂಡ ದಿನವೆ ಈ ಘೋಷಣೆ ಮಾಡಿರುವದು ಗುಜರಾತಿನ ಜನತೆಗೂ ದೇಶದ ಜನತೆಗೂ ಬಗೆದ ಮೋಸವಲ್ಲದೆ ಇನ್ನೇನು?

ವಾಸ್ತವವಾಗಿ ಯಾವಾಗ ಆರೋಪಗಳು ನಿಜವೆಂದು ಶಾ ಆಯೋಗದ ವರದಿ ಹೇಳಿತೊ ಆಗಲೆ ಇದನ್ನು ಸಾರ್ವಜನಿಕರಿಂದ ಮುಚ್ಚಿಡಲು ನಿರ್ಧರಿಸಿದ ಮೋದಿ ಉದ್ದೇಶಪೂರ್ವಕವಾಗಿಯೆ ವರದಿಯನ್ನು ರಾಜ್ಯಪಾಲರಿಗೆ, ಸದನಕ್ಕೆ ಮತ್ತು ಮಾಧ್ಯಮಗಳಿಗೆ ಬಿಡುಗಡೆ ಮಾಡಲಿಲ್ಲ. ಇಲ್ಲಿ ಸ್ಪಷ್ಟವಾಗಿ ಭಾರತದ ಪ್ರಜಾತಂತ್ರದ ಆಧಾರಸ್ತಂಭಗಳಾದ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ತತ್ವಗಳಿಗೆ ಎಳ್ಳುನೀರು ಬಿಡಲಾಗಿದೆ. ಸಂವಿಧಾನದ ವಿಧಿ 167ರ ಪ್ರಕಾರ ರಾಜ್ಯದ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ಕಾಲಕಾಲಕ್ಕೆ ವರದಿ ನೀಡುವುದು ಮುಖ್ಯಮಂತ್ರಿಯ ಕರ್ತವ್ಯ. ಆದರೆ ಮೋದಿ ಇಲ್ಲಿ ಶಾ ಆಯೋಗದ ವರದಿಯ ವಿಚಾರವನ್ನು ರಾಜ್ಯಪಾಲರಿಗೆ ತಿಳಿಸದೆ ಕರ್ತವ್ಯಲೋಪ ಎಸಗಿರುವುದಾಗಿ ತೋರಿಬರುತ್ತದೆ. ಸಹಜವಾಗಿ ಈಗಿನ ಆನಂದಿಬೆನ್ ಸರಕಾರವೂ ವರದಿ ಬಿಡುಗಡೆ ಮಾಡುವಲ್ಲಿ ಪೂರ್ತಿ ಅನಾಸಕ್ತಿಯಿಂದಿದೆ.



ಭ್ರಷ್ಟಾಚಾರ ನಡೆದಿಲ್ಲ ಎಂದಾದರೆ ಸರ್ಕಾರ ಏಕೆ ವರದಿ ಬಿಡುಗಡೆಗೆ ಹಿಂಜರಿಯುತ್ತಿದೆ ಎಂಬ ಪ್ರಶ್ನೆ ತಂತಾನೆ ಏಳುತ್ತದಲ್ಲವೆ? ಮಾಹಿತಿ ಹಕ್ಕು ಕಾಯ್ದೆಯಡಿ ವರದಿಯ ಪ್ರತಿಗಾಗಿ ಕೇಳಿದಾಗ ಅದು ಸರಕಾರದ ಪ್ರಧಾನ ಆಡಳಿತ ವಿಭಾಗದ ಬಳಿ ಇದೆ ಎಂಬ ಉತ್ತರ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ಸಿಕ್ಕಿದೆ. ಆದರೆ ಆನಂದಿಬೆನ್ ಸರಕಾರ ಸದನದಲ್ಲಿ ನೀಡಿರುವ ಹೇಳಿಕೆಯ ಪ್ರಕಾರ ವರದಿ ರಾಜ್ಯಪಾಲರ ಬಳಿ ಇದೆ. ಕೂಡಲೆ ಮಾಹಿತಿ ಹಕ್ಕು ಕಾಯ್ದೆಯಡಿ ರಾಜ್ಯಪಾಲರ ಕಚೇರಿ ಮತ್ತು ಸದನದ ಆಡಳಿತ ಕಚೇರಿಗಳಲ್ಲಿ ಕೇಳಿದಾಗ ಎರಡೂ ಕಡೆಯಿಂದ ವರದಿ ಅಲ್ಲಿಲ್ಲವೆಂಬ ಉತ್ತರ ದೊರೆತಿದೆ. ಹಾಗಾದರೆ ವರದಿ ಎಲ್ಲಿ ಮಾಯವಾಯಿತು? "ನಾ ಖಾವೂಂಗಾ ನಾ ಖಾನೆ ದೂಂಗಾ" ಎಂದು ಹೂಂಕರಿಸಿದವರಿಂದ ಉತ್ತರಕ್ಕಾಗಿ ತುದಿಗಾಲಲ್ಲಿ ಕಾಯುತ್ತಿದ್ದಾರ ... ಪ್ರಜೆಗಳು.

(... 2016ರ ...)



ರವಿ ದೂರು ಮತ್ತು ವಾಗ್ದಂಡನೆ

ಪತ್ರಿಕೆಯ ಮೇ 8, 2013ರ ಸಂಚಿಕೆಯಲ್ಲಿ 'ಚಿಕ್ಕಮಗಳೂರು: ಚೋರ ರವಿಯ ಲೂಟಿ ವೃತ್ತಾಂತ' ಎಂಬ ವರದಿಯು ಪ್ರಕಟಗೊಂಡಿತ್ತು. ಆ ವರದಿಯಲ್ಲಿ ಮಾಜಿ ಸಚಿವ ಸಿ.ಟಿ.ರವಿ ಮತ್ತು ಅವರ ಕುಟುಂಬದವರು ಹೇಗೆ ಅಕ್ರಮವಾಗಿ ಸೈಟುಗಳನ್ನು ಪಡೆದಿದ್ದಾರೆ ಎಂದೂ, ಬೇನಾಮಿಯಾಗಿ ಅಕ್ರಮ ವ್ಯವಹಾರಗಳನ್ನು ನಡೆಸುತ್ತಿದ್ದಾರೆ ಎಂದೂ ದಾಖಲೆಗಳ ಸಮೇತ ಮಾಹಿತಿಗಳನ್ನು ನೀಡಲಾಗಿತ್ತು.

ಪತ್ರಿಕೆಯಲ್ಲಿ ಪ್ರಕಟಗೊಂಡ ವರದಿ ಸುಳ್ಳು ಎಂದೂ, ಅದರಿಂದ ತನಗೆ ಮತ್ತು ತನ್ನ ಕುಟುಂಬದವರಿಗೆ ಮಾನಹಾನಿ ಆಗಿದೆ ಎಂದೂ ರವಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾಗೆ ದೂರು ಸಲ್ಲಿಸಿದ್ದರು. ಆ ದೂರನ್ನು ಕುರಿತು ಫೆಬ್ರವರಿ 15ರಂದು ಬೆಳಗಾವಿಯಲ್ಲಿ ವಿಚಾರಣೆ ನಡೆಯಿತು. ಪತ್ರಿಕೆಯ ವಕೀಲರು ನಾವು ಪತ್ರಿಕಾ ವೃತ್ತಿಗೆ ನಿಷ್ಠವಾಗಿದ್ದು ಸತ್ಯವನ್ನು ಬರೆದಿದ್ದೇವೆ ಎಂದೂ, ರವಿ ಅವರು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದ ಆಸ್ತಿ ವಿವರಗಳಲ್ಲಿ ಹೊಂದಾಣಿಕೆ ಇಲ್ಲವೆಂದೂ, ರವಿ ವಿರುದ್ಧ ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ ಎಂದೂ ದಾಖಲೆ ಸಮೇತ ತಮ್ಮ ವಾದವನ್ನು ಮಂಡಿಸಿದರು. ರವಿ ಅವರ ವಕೀಲರೂ ತಮ್ಮ ವಾದವನ್ನು ಮಂಡಿಸಿದರು.

ಎರಡೂ ಕಡೆಯ ವಾದಗಳನ್ನು ಆಲಿಸಿದ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ವಿಚಾರಣಾ ಸಮಿತಿಯು "ವರದಿಗೆ ಕೊಟ್ಟ 'ನಿರ್ಧಾರಿಕ' (ಕನ್‌ಕ್ಲೂಸಿವ್) ಶೀರ್ಷಿಕೆಯನ್ನು ವರದಿಯಲ್ಲಿ ನೀಡಲಾಗಿದ್ದ ಮಾಹಿತಿಗಳು ಬೆಂಬಲಿಸುತ್ತಿಲ್ಲ, ಅದು ಭಂಗಮಾಡುವ ಮತ್ತು ಹಾಳುಮಾಡುವ ರೀತಿಯಲ್ಲಿದೆ. ಪತ್ರಿಕೆಯು ಪತ್ರಿಕಾ ವೃತ್ತಿಯನ್ನು ಪಾಲಿಸಿಲ್ಲದಿರುವುದರಿಂದ ಅದಕ್ಕೆ ವಾಗ್ದಂಡನೆಯನ್ನು ವಿಧಿಸಲಾಗುತ್ತಿದೆ" ಎಂದು ತೀರ್ಪು ನೀಡಿದೆ.

– ಸಂ


ಮರೆಯಾದ ಮರೆಯಲಾಗದ ಗೆಳೆಯ

ಕ್ರಾಂತಿಕಾರಿ ಹೋರಾಟಗಾರ, ಲೇಖಕ ಮತ್ತು ನನ್ನ ಆತ್ಮೀಯ ಗೆಳೆಯ ಗುರುಮೀತ್ ಸಿಂಗ್ ಕಳೆದ ಬುಧವಾರ ರಾತ್ರಿ ಪಂಜಾಬಿನ ಪಟಿಯಾಲ ನಗರದ ತಮ್ಮ ಸ್ವಂತ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಿಗೆ 64 ವರ್ಷ ವಯಸ್ಸಾಗಿತ್ತು. ಅವರ ಕೊನೆಯ ದಿನಗಳಲ್ಲಿ ತುಂಬಾ ಆತ್ಮೀಯರಾಗಿದ್ದ ಗೆಳೆಯರ ಪ್ರಕಾರ ಕುಟುಂಬದಲ್ಲಿ ತಿರಸ್ಕೃತನಾದೆ, ಸೋತೆ, ಎಲ್ಲವನ್ನೂ, ಎಲ್ಲರನ್ನೂ ಕಳೆದುಕೊಂಡು ಏಕಾಂಗಿಯಾದೆ ಎಂಬ ಹತಾಶ ಭಾವವೇ ಅವರನ್ನು ದೀರ್ಘಕಾಲದ ಖಿನ್ನತೆಗೆ ನೂಕಿ ಕೊನೆಗೆ ಅವರ ಜೀವವನ್ನೂ ಕಿತ್ತುಕೊಂಡಿತು.

ಗುರುಮೀತ್ ಮೂಲತಃ ಅಮೃತಸರದವರು. 1967ರಲ್ಲಿ ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಸಿಲಿಗುರಿ ಉಪವಿಭಾಗದ ನಕ್ಸಲ್ಬರಿ ಎಂಬ ಹಳ್ಳಿಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ನಾಯಕ ಚಾರು ಮುಜುಂದಾರ್ ನೇತೃತ್ವದಲ್ಲಿ ಜೊತೆದಾರ್ ಭೂಮಾಲಿಕರ ವಿರುದ್ಧ ಸಿಡಿದ ಸಶಸ್ತ್ರ ರೈತಬಂಡಾಯ ತದನಂತರದ ದಿನಗಳಲ್ಲಿ ದೇಶವ್ಯಾಪಿಯಾಗಿ ಅಲೆಅಲೆಯಾಗಿ ವ್ಯಾಪಿಸುತ್ತಿದ್ದಾಗ ಗುರುಮೀತ್ ಅಮೃತಸರ ಕಾಲೇಜಿನಲ್ಲಿ ಓದುತ್ತಿದ್ದರು. ಈ ವೀರೋಚಿತ ಹೋರಾಟ ಮತ್ತು ಕಮ್ಯೂನಿಸ್ಟ್ ವಿಚಾರಧಾರೆಯಿಂದ ಆಕರ್ಷಿತರಾದ ಅವರು 1970ರಲ್ಲಿ ಕಾಲೇಜು ತೊರೆದು ಪೂರ್ಣಾವಧಿ ಕಾರ್ಯಕರ್ತರಾಗಿ ತೊಡಗಿಸಿಕೊಂಡರು. ಅಲ್ಲಿಂದಾಚೆಗೆ ಅವರು ಎಂದೂ ಹಿಂತಿರುಗಿ ನೋಡಲೇ ಇಲ್ಲ. ಪಕ್ಷ ವಹಿಸಿದ ಕೆಲಸವನ್ನು ನಿಷ್ಠನಾಗಿ ಮಾಡುತ್ತಾ ಕಾರ್ಮಿಕರ ನಡುವೆ, ರೈತರ ನಡುವೆ ನೀರಿನಲ್ಲಿ ಮೀನಿನಂತೆ ಬೆರೆತು ಅವರನ್ನು ಅನ್ಯಾಯ, ಶೋಷಣೆ, ದಮನಗಳ ವಿರುದ್ಧ ಹೋರಾಡುವುದಕ್ಕೆ ಹುರಿದುಂಬಿಸಿದರು. ಬುದ್ಧಿಜೀವಿ ವಲಯದಲ್ಲೂ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಾ ದುಡಿಯುವ ಜನಸಮುದಾಯಗಳ ಹೋರಾಟಕ್ಕೆ ಬುದ್ಧಿಜೀವಿ ವಲಯದ ಬೆಂಬಲವನ್ನು ಪಡೆದುಕೊಂಡರು. ಕೊನೆಗೆ ಭಾರತದ ಎಲ್ಲಾ ವಿಚಾರಧಾರೆಗಳ ಜನಪರ ಹೋರಾಟಗಳನ್ನು ಒಂದೆಡೆ ಸೇರಿಸಬೇಕೆಂಬ ಆಶಯದೊಂದಿಗೆ ಪೀಪಲ್ಸ್ ಡೆಮಾಕ್ರಟಿಕ್ ಫ್ರಂಟ್ ಆಫ್ ಇಂಡಿಯ ಎಂಬ ವಿಶಾಲ ವೇದಿಕೆ ಹುಟ್ಟಿಕೊಂಡಾಗ ಗುರುಮೀತ್ ಅದರ ಮುಂಚೂಣಿ ನಾಯಕರಲ್ಲೊಬ್ಬರಾಗಿ ನಿಂತಿದ್ದರು.

ನಾನು ಗುರುಮೀತ್‌ನನ್ನು ಮೊದಲ ಬಾರಿಗೆ ಭೇಟಿಯಾಗಿದ್ದು 2002ರಲ್ಲಿ. ನಾನು ಆಗ ಆಲ್ ಇಂಡಿಯಾ ಪೀಪಲ್ಸ್ ರೆಸಿಸ್ಟೆನ್ಸ್ ಫೋರಂ ಎಂಬ ಅಖಿಲ ಭಾರತ ಸಂಘಟನೆಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿದ್ದೆ. ದೆಹಲಿಯ ಆಜಾದ್‌ಪುರದಲ್ಲಿದ್ದ ನಮ್ಮ ಕೇಂದ್ರ ಕಚೇರಿಯಲ್ಲಿ ನಾವು ಒಂದು ಸಭೆ ನಡೆಸುತ್ತಿದ್ದಾಗ ಅಲ್ಲಿಗೆ ಗುರುಮೀತ್ ಬಂದಿದ್ದರು. ಅಂದಿನ ನಮ್ಮಿಬ್ಬರ ಔಪಚಾರಿಕ ಪರಿಚಯ ಗಾಢಸ್ನೇಹವಾಗಿ ಬೆಳೆಯುವುದಕ್ಕೆ ತಡವಾಗಲಿಲ್ಲ. ನಂತರದ ದಿನಗಳಲ್ಲಿ ನಾನು ಮತ್ತು ಗುರುಮೀತ್ ಒಂದೇ ಸಂಘಟನೆಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ ಮೇಲಂತೂ ಅವರೊಂದಿಗೆ ನಿತ್ಯದ ಒಡನಾಟ ಪ್ರಾರಂಭವಾಗಿ ಇನ್ನಷ್ಟೂ ಆತ್ಮೀಯರಾಗಿ ಹೋದೆವು.

2004ರಲ್ಲಿ ಮುಂಬೈನಲ್ಲಿ ವಿಶ್ವದ ಎಲ್ಲಾ ಸರ್ಕಾರೇತರ ಸಂಘಟನೆಗಳು (ಎನ್‌ಜಿಓ) ಸೇರಿ ವಿಶ್ವ ಸಾಮಾಜಿಕ ವೇದಿಕೆ ಎಂಬ ಬೃಹತ್ ಸಮಾವೇಶವನ್ನು ಸಂಘಟಿಸಲು ಮುಂದಾದಾಗ ನಾವು ಅದನ್ನು ಬಲವಾಗಿ ವಿರೋಧಿಸಿದೆವು. ತಳಮಟ್ಟದಲ್ಲಿ ಗಟ್ಟಿಯಾಗಿ ಹುಟ್ಟುತ್ತಿರುವ ಜನಹೋರಾಟಗಳನ್ನು ಹಾದಿ ತಪ್ಪಿಸುವುದಕ್ಕಾಗಿಯೇ ಇಂತಹ ಸಮಾವೇಶಗಳನ್ನು ನಡೆಸಲಾಗುತ್ತಿದೆ ಎಂಬುದು ನಮ್ಮ ಬಲವಾದ ನಂಬಿಕೆಯಾಗಿತ್ತು. ಜನರನ್ನು ಹೋರಾಟಗಳಿಂದ ವಿಮುಖವಾಗಿಸಿ ಕೇವಲ ಹೋರಾಟರಹಿತ ಚರ್ಚೆಯಲ್ಲಿ ಮುಳುಗುವಂತೆ ಮಾಡುವುದಕ್ಕಾಗಿಯೇ ಸಾಮ್ರಾಜ್ಯಶಾಹಿ ಶಕ್ತಿಗಳು ಇಂತಹ ಸಮಾವೇಶಗಳ ಷಡ್ಯಂತ್ರವನ್ನು ರಚಿಸಿದ್ದಾರೆ ಎಂಬುದು ನಮ್ಮ ತರ್ಕವಾಗಿತ್ತು. ಆದ್ದರಿಂದ ಈ ಷಡ್ಯಂತ್ರಕ್ಕೆ ನೈಜ ಜನಹೋರಾಟಗಳು ಬಲಿಯಾಗಬಾರದೆಂಬ ಉದ್ದೇಶದಿಂದ ನಾವು ಮುಂಬೈನಲ್ಲೇ, ಆ ಸಮಾವೇಶ ನಡೆಯುವ ಸ್ಥಳದ ಎದುರೇ ಪರ್ಯಾಯ ಸಮಾವೇಶವೊಂದನ್ನು ಸಂಘಟಿಸಲು ನಿರ್ಧರಿಸಿದೆವು. "ಮುಂಬೈ ಪ್ರತಿರೋಧ - 2004" ಎಂಬ ಹೆಸರಿನ ನಾಲ್ಕು ದಿನಗಳ ಈ ಪರ್ಯಾಯ ಸಮಾವೇಶ ಅದ್ಭುತವಾಗಿ ಯಶಸ್ಸು ಕಾಣುವುದಕ್ಕೆ ಗುರುಮೀತ್ ಕೂಡ ಸಾಕಷ್ಟು ಶ್ರಮಿಸಿದ್ದರು. ದೇಶದ ವಿವಿಧ ಮೂಲೆಗಳಿಂದ ಬಂದಿದ್ದ ನೂರಾರು ಸ್ವಯಂಸೇವಕ ಕಾರ್ಯಕರ್ತರನ್ನು, ಪ್ರಚಾರ ತಂಡಗಳನ್ನು, ಹಣಕಾಸು ವ್ಯವಹಾರಗಳನ್ನು ನಾನು ನೋಡಿಕೊಳ್ಳುತ್ತಿದ್ದರೆ ಗುರುಮೀತ್ ಮತ್ತಿತರ ಸ್ನೇಹಿತರು ವಿವಿಧ ಸಂಘಟನೆಗಳನ್ನು, ವ್ಯಕ್ತಿಗಳನ್ನು ಸಮಾವೇಶಕ್ಕೆ ಕರೆತರಲು




ಅವಿರತವಾಗಿ ಶ್ರಮಿಸುತ್ತಿದ್ದರು. ಮುಂಬೈನ ಗೋರೇಗಾಂವ್‌ನಲ್ಲಿ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇಯ ಬದಿಯಲ್ಲಿ ತಲೆಯೆತ್ತಿ ನಿಂತಿದ್ದ ಬಹುಮಹಡಿ ವಸತಿ ಸಮುಚ್ಚಯವೊಂದರಲ್ಲಿ ಪುಟ್ಟ ಬಾಡಿಗೆ ಮನೆಯಲ್ಲಿ ಪ್ರಾರಂಭವಾದ ನಮ್ಮ ಆಫೀಸಿನಲ್ಲಿ ಗುರುಮೀತ್ ಒಂದು ಹಳೆಯ ಕಂಪ್ಯೂಟರ್ ಇಟ್ಟುಕೊಂಡು ನಿರಂತರವಾಗಿ ನಮ್ಮ ಪರ್ಯಾಯ ಸಮಾವೇಶದ ಬಗ್ಗೆ ಬರೆಯುತ್ತಾ ಪ್ರಚಾರಾಂದೋಲನದಲ್ಲಿ ತೊಡಗಿರುತ್ತಿದ್ದರು.

2004ರಲ್ಲಿ ಲೋಕಸಭಾ ಚುನಾವಣೆಗಳು ಘೋಷಣೆಯಾದಾಗ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ, ಅದರಲ್ಲೂ ವಿಶೇಷವಾಗಿ ಜಮ್ಮು ಪ್ರಾಂತ್ಯದ ಪೂಂಚ್, ರಜೌರಿ ಮತ್ತು ದೋಡಾ ಜಿಲ್ಲೆಗಳಲ್ಲಿ ಹಾಗೂ ಕಾಶ್ಮೀರ ಕಣಿವೆಯಲ್ಲಿ ಚುನಾವಣೆಗಳು ಹೇಗೆ ಭಾರತೀಯ ಸೇನೆಯ ಬಂದೂಕಿನ ತುದಿಯಲ್ಲಿ ನಡೆಯುತ್ತವೆ ಎಂಬುದನ್ನು ಪ್ರತ್ಯಕ್ಷವಾಗಿ ನೋಡುವುದಕ್ಕೆ, ಅಲ್ಲಿನ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಮನಗಾಣುವುದಕ್ಕೆ ನಾನು ಮತ್ತು ಗುರುಮೀತ್ ಇತರ ಸಂಗಾತಿಗಳೊಂದಿಗೆ ಅಲ್ಲಿಗೆ ಹೋಗಿದ್ದೆವು. 2004ರ ಏಪ್ರಿಲ್ 20ರಂದು ಮೊದಲ ಸುತ್ತಿನ ಮತದಾನವಿತ್ತು. ಅಂದು ಬೆಳಗ್ಗೆ ಶ್ರೀನಗರದ ಲಾಲ್‌ಚೌಕ್‌ನಿಂದ ಒಟ್ಟು ಎಂಟು ತಂಡಗಳು ತಮ್ಮ ತಮ್ಮ ವಾಹನಗಳನ್ನೇರಿ ಎಂಟು ದಿಕ್ಕಿಗೆ ಮುಖ ಮಾಡಿ ಕಣಿವೆಯೊಳಗೆ ನುಸುಳಿದ್ದವು. ನಾನು ಉತ್ತರ ಕಾಶ್ಮೀರದಲ್ಲಿ ಭಾರತ-ಪಾಕಿಸ್ತಾನಗಳ ಗಡಿಯಲ್ಲಿರುವ ಕುಪ್ವಾರ ಜಿಲ್ಲೆಯ ಲೋಲಾಬ್ ಎಂಬ ಬಹಳ ಸೆನ್ಸಿಟಿವ್ ಪ್ರದೇಶಕ್ಕೆ ಹೋಗಿದ್ದರೆ ಗುರುಮೀತ್ ಇನ್ನೊಂದು ತಂಡದೊಂದಿಗೆ ಕಣಿವೆಯ ಇನ್ನೊಂದು ಪ್ರದೇಶಕ್ಕೆ ಹೋಗಿದ್ದರು. ನಾನು ಪ್ರಯಾಣಿಸುತ್ತಿದ್ದ ವಾಹನ ಲಷ್ಕರ್ ಎ ತೊಯ್ಬಾ ಉಗ್ರರು ಹುದುಗಿಸಿಟ್ಟಿದ್ದ ನೆಲಬಾಂಬ್ ಮೇಲೆ ಹರಿದು ಸ್ಫೋಟಗೊಂಡು ಡ್ರೈ?ವರ್ ಸ್ಥಳದಲ್ಲಿ ಅಸುನೀಗಿದರೆ ನನ್ನ ಜೊತೆ ಮಧ್ಯದ ಸೀಟಿನಲ್ಲಿ ಕುಳಿತಿದ್ದ ಕಾಶ್ಮೀರದ ಮಾನವ ಹಕ್ಕುಗಳ ಹೋರಾಟಗಾರ್ತಿ ಮತ್ತು **'Voices Unheard'** ಎಂಬ ಮಾಸಿಕ ಪತ್ರಿಕೆಯ ಸಂಪಾದಕಿ ಆಶಿಯಾ ಗಿಲಾನಿ ಬಹಳ ಗಂಭೀರವಾಗಿ ಗಾಯಗೊಂಡು ಶ್ರೀನಗರದ ಆಸ್ಪತ್ರೆಗೆ ಬರುವ ಮೊದಲೇ ಅಸು ನೀಗಿದರು. ನನ್ನ ಮತ್ತು ಆಶಿಯ ಗಿಲಾನಿಯ ನಡುವೆ ಕುಳಿತಿದ್ದ ಇನ್ನೊಬ್ಬ ಕಾಶ್ಮೀರಿ ಮಾನವ ಹಕ್ಕುಗಳ ಹೋರಾಟಗಾರ ಖುರ್ರಂ ಪರ್ವೇಜ್ ತನ್ನ ಬಲಗಾಲನ್ನು ಕಳೆದುಕೊಂಡ. ನನ್ನ ಬೆನ್ನುಮೂಳೆಗೆ ಬಲವಾಗಿ ಏಟು ಬಿದ್ದಿತ್ತಲ್ಲದೇ ಕಣ್ಣಿನಲ್ಲಿ ಸ್ಫೋಟದ ಧೂಳು ತುಂಬಿಕೊಂಡು ಒಂದೊಂದು ವಸ್ತು ಎರಡೆರಡಾಗಿ ಕಾಣುತ್ತಿದ್ದವು. ಈ ದುರಂತದಲ್ಲಿ ನಾನೇ ಸತ್ತಿದ್ದೇನೆಂಬ ತಪ್ಪು ಸುದ್ದಿ ಗುರುಮೀತ್ ಇದ್ದ ತಂಡಕ್ಕೆ ಹೋಗಿತ್ತು. ತಮ್ಮ ಚುನಾವಣಾ ಪರಿವೀಕ್ಷಣೆಯನ್ನು ಅರ್ಧಕ್ಕೆ ಬಿಟ್ಟು ಗುರುಮೀತ್ ತನ್ನ ತಂಡದೊಂದಿಗೆ ಶ್ರೀನಗರದ ಆಸ್ಪತ್ರೆಗೆ ಧಾವಿಸಿದ್ದರು. ನಾನು ಆಸ್ಪತ್ರೆಯ ಹಾಸಿಗೆಯ ಮೇಲೆ ನರಳುತ್ತಾ ಬಿದ್ದಿರುವುದನ್ನು ನೋಡಿ ಗುರುಮೀತ್‌ಗೆ ಖುಷಿ, ಸಮಾಧಾನ ಆಯಿತು. ಆದರೆ ನನ್ನ ಮರುಹುಟ್ಟನ್ನು ಆತ ಸಂಭ್ರಮಿಸಲಿಲ್ಲ. ಏಕೆಂದರೆ, ಪಕ್ಕದ ರೂಮಿನಲ್ಲಿ ಸ್ಫೋಟದ ಬೆಂಕಿಯಲ್ಲಿ ಬೆಂದು ಹೆಣವಾಗಿದ್ದ ಆಶಿಯಾಳನ್ನು ಆಗ ತಾನೆ ಆತ ನೋಡಿಕೊಂಡು ಬಂದಿದ್ದ.

"ನೀನೇ ಸತ್ತಿದ್ದೀಯ ಅಂತ ನನಗೆ ಸುದ್ದಿ ಬಂತು. ನಿನ್ನ ಹೆಣವನ್ನು ಎಲ್ಲಿಗೆ ಒಯ್ಯಬೇಕು, ಹೇಗೆ ಒಯ್ಯಬೇಕು, ಹೇಗೆ ಅಂತ್ಯಸಂಸ್ಕಾರ ಮಾಡಬೇಕು ಎಂಬ ಯೋಚನೆಗಳಲ್ಲೇ ಮುಳುಗಿದ್ದೆ. ಕಳೆಬರವನ್ನು ಕರ್ನಾಟಕಕ್ಕೆ ಒಯ್ದು ನಿನ್ನ ಮನೆಯವರಿಗೆ ಒಪ್ಪಿಸಬೇಕು ಎಂಬ ಆಲೋಚನೆ ಒಮ್ಮೆ ಬಂತು. ನೀನು ಕಾಶ್ಮೀರಿಗಳ ಸ್ವಯಂನಿರ್ಣಯಾಧಿಕಾರದ ಹಕ್ಕನ್ನು ಮೊದಲಿನಿಂದಲೂ ಎತ್ತಿ ಹಿಡಿಯುತ್ತಾ ಬಂದವನು; ಕಾಶ್ಮೀರದಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಹೊರಜಗತ್ತಿಗೆ ತೋರಿಸುವುದಕ್ಕಾಗಿಯೇ ಈ ಸ್ವತಂತ್ರ ಚುನಾವಣಾ ಪರಿವೀಕ್ಷಣಾ ಕಾರ್ಯಕ್ಕೆ ಬಂದು ಇಲ್ಲೇ ಸತ್ತಿರುವುದರಿಂದ ನಿನ್ನನ್ನು ಇಲ್ಲೇ ಕಾಶ್ಮೀರದಲ್ಲೇ, ಎಂದೂ ಹಿಮದರಾಶಿ ಕರಗದ ಜಾಗದಲ್ಲಿ ದಫನ್ ಮಾಡಬೇಕು ಅನ್ನಿಸಿತು. ಅದಕ್ಕಾಗಿ ನಿಮ್ಮ ಮನೆಯವರನ್ನು ಒಪ್ಪಿಸುವ ತೀರ್ಮಾನ ಮಾಡಿದ್ದೆ. ದರ್ಶನ್‌ಪಾಲ್‌ಗೆ ಅಥವಾ ಶಿವಸುಂದರ್‌ಗೆ ಈ ವಿಷಯ ತಿಳಿಸುವ ಮುನ್ನ ಮೊದಲು ನಿನ್ನ ಹೆಣವನ್ನು ನೋಡಿ ನಿನ್ನ ಸಾವನ್ನು ಖಾತ್ರಿಪಡಿಸಿಕೊಳ್ಳೋಣ ಅಂತ ಆಸ್ಪತ್ರೆಗೆ ಬಂದೆ" ಎಂದು ಗುರುಮೀತ್ ನನಗೆ ಹೇಳಿದ್ದು ಇನ್ನೂ ಕಿವಿಯಲ್ಲಿ ಅನುರಣಿಸುತ್ತಿದೆ.

ಈ ಘಟನೆ ಸಂಭವಿಸಿ ಸರಿಯಾಗಿ ಒಂದು ವರ್ಷಕ್ಕೆ ನಾನು ಮತ್ತು ಗುರುಮೀತ್ ಮತ್ತೆ ಕಾಶ್ಮೀರಕ್ಕೆ ಹೋಗಿದ್ದೆವು. ಆಶಿಯ ಗಿಲಾನಿ ಸಾವಿನ ಮೊದಲ ವರ್ಷಾಚರಣೆಯಲ್ಲಿ ಪಾಲ್ಗೊಳ್ಳುವುದಕ್ಕೆ. ಆ ಸಮಯದಲ್ಲಿ ಕಾರ್ಯಕ್ರಮ ಮುಗಿಸಿ, ಆಶಿಯಾಳ ಸಮಾಧಿಗೆ ಭೇಟಿಕೊಟ್ಟು ನಂತರ ಕಾಶ್ಮೀರಿ ಹೋರಾಟದ ಮುಂಚೂಣಿಯಲ್ಲಿರುವ ಎಲ್ಲಾ ನಾಯಕರನ್ನೂ ಭೇಟಿಯಾದೆವು. ಈ ಬಾರಿ ಬೆಂಗಳೂರಿನಿಂದ ಪ್ರೊ. ನಗರಿ ಬಾಬಯ್ಯ, ಹೈದರಾಬಾದಿನಿಂದ ಕ್ರಾಂತಿಕಾರಿ ಕವಿ ವರವರರಾವ್ ಮುಂತಾದವರು ನಮ್ಮೊಂದಿಗೆ ಬಂದಿದ್ದರು. ಒಬ್ಬ ವ್ಯಕ್ತಿಗೆ ಉಗ್ರರೊಂದಿಗೆ ಸಂಬಂಧವಿದೆ ಎಂದು ಭಾರತೀಯ ಸೇನಾಪಡೆಗಳಿಗೆ ಅನುಮಾನ ಬಂದರೆ ಸಾಕು



ಗುಲ್‌ಮಾರ್ಗ್‌ನಲ್ಲಿ ಗುರುಮೀತ್ ಜೊತೆ ಕುಮಾರ್ ಬುರಡಿಕಟ್ಟಿ

ಅಂಥವರನ್ನು ಅಪಹರಿಸಿ ಕೊಂದು ಅವರ ಶವವೂ ... ಮಾಯ ಮಾಡುವುದು ಮಾಮೂಲಿ. ಹೀಗೆ ಕಣಿವೆಯಲ್ಲಿ ಸುಮಾರು ಒಂದು ಲಕ್ಷ ... "ಕಾಣೆಯಾಗಿದ್ದಾರೆ". ಅವರು ಸತ್ತುಹೋಗಿದ್ದಾರೆ ... ಸತ್ಯವನ್ನು ಒಪ್ಪಿಕೊಳ್ಳಲೊಲ್ಲದ ಅನೇಕ ತಂದೆತಾ... ತಮ್ಮ ಮಗ ಇವತ್ತಲ್ಲಾ ನಾಳೆ ಬರುತ್ತಾನೆ ಎಂದು ... ವರ್ಷಗಳಿಂದ ಕಾಯುತ್ತಿದ್ದಾರೆ. ಅಂತಹ ತಂದೆತಾಯಿಗಳನ್ನು ನಾನು ಮತ್ತು ಗುರುಮೀತ್ ... ಅವರ ಸಂದರ್ಶನ ಮಾಡಿದ್ದೆವು. ಅವರೊಂದಿಗೆ ಮಾ... ಗುರುಮೀತ್ ಭಾವುಕರಾಗುತ್ತಿದ್ದ ದೃಶ್ಯ ನನಗಿನ್ನೂ ... ಕಟ್ಟಿದಂತಿದೆ.

ಗುರುಮೀತ್ ಒಬ್ಬ ಒಳ್ಳೆಯ ಬು... ಮಾವೋವಾದಿ ಕಮ್ಯೂನಿಸ್ಟರ ಮುಖವಾಣಿಯಾದ ... ಮಾರ್ಚ್' ಎಂಬ ಇಂಗ್ಲಿಷ್ ಮಾಸಿಕದಲ್ಲಿ ಬರೆಯುತ್ತಿದ್ದ ಅಂತಾರಾಷ್ಟ್ರೀಯ ವಿದ್ಯಮಾನಗಳ ಶ್ರೀಮಂತ ಲೇಖನಗಳೇ ಅದಕ್ಕೆ ಸಾಕ್ಷಿ. ... ಸೇನಾಪಡೆಗಳು ಹೈಟಿಯನ್ನು ಆಕ್ರಮಿಸಿಕೊಂಡಿದ್ದಿರ... ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿಗಳ ಹಿತಾಸಕ್ತಿ... ಮಧ್ಯಪ್ರಾಚ್ಯದಲ್ಲಿ ಪ್ಯಾಲಿಸ್ತೀನ್-ಇಸ್ರೇಲ್ ಸಂಘರ್ಷ... ಅಥವಾ ವಿಶ್ವದಾದ್ಯಂತ ಮುಂದೆ ಸಾಗುತ್ತಿದ್ದ ಸಾಮ್ರಾ... ವಿರೋಧಿ ಹೋರಾಟಗಳಿರಲಿ - ಈ ಎಲ್ಲಾ ವಿ... ಬಗ್ಗೆ ಅದ್ಭುತ ಲೇಖನಗಳನ್ನು ಅವರು ಬರೆಯು... ಅಂತರರಾಷ್ಟ್ರೀಯ ವಿದ್ಯಮಾನಗಳ ಬಗೆಗಿನ ಗುರುಮೀ... ಆಳ ಜ್ಞಾನ, ತೀಕ್ಷ್ಣ ಒಳನೋಟ ಮತ್ತು ಕಣ್ಣಿಗೆ ಕ... ಬರೆಯುವ ಅಮೋಘ ಕೌಶಲ್ಯವನ್ನು ಕಂಡು ... ಮಾವೋವಾದಿ ನಾಯಕರೇ ಬೆರಗಾಗಿದ್ದುಂಟು. ... ಕಂಪ್ಯೂಟರ್ ಮತ್ತು ಒಂದು ಪ್ಯಾಕ್ ಸಿ... ಇಟ್ಟುಕೊಂಡು ತಮ್ಮ ರೂಮಿನಲ್ಲಿ ಕುಳಿತರೆಂದರೆ ... ಮೇಲೇಳುತ್ತಿದ್ದುದು ಲೇಖನ ಬರೆದು ಮುಗಿಸಿದ... ಅಥವಾ ಸಿಗರೇಟ್ ಖಾಲಿಯಾದ ... ಒಮ್ಮೊಮ್ಮೆಯಂತೂ 'ಪೀಪಲ್ಸ್ ಮಾರ್ಚ್' ... ಲೇಖನಗಳ ಕೊರತೆಯಾಗಿ ಪತ್ರಿಕೆ ಮುದ್ರಣಕ್ಕೆ ಹೋ... ಸಮಯವಾದರೂ ಪುಟಗಳು ತುಂಬಿರುತ್ತಿರಲಿಲ್ಲ. ... ಸಂದರ್ಭದಲ್ಲಿ ಹೆಚ್ಚುವರಿ ಲೇಖನಗಳನ್ನು ಹಗಲು ... ಕುಳಿತು ಬರೆದುಕೊಡುತ್ತಿದ್ದರು. ಪತ್ರಿಕೆ ಪ್ರಕಟ... ಅವರು ಬರೆದ ಐದಾರು ಲೇಖನಗಳು ಬೇರೆ ... ಹೆಸರುಗಳಲ್ಲಿ ಪ್ರಕಟವಾಗಿರುತ್ತಿದ್ದವು. ಅದರಲ್ಲೂ ವಿಶೇ... ಅವರು ಜೆ.ಫೆಲೊ ಎಂಬ ಹೆಸರಿನಲ್ಲಿ ಬರೆ... ಲೇಖನಗಳ ಮೂಲಕ ತನ್ನದೇ ಓದುಗ ವಲ... ಸೃಷ್ಟಿಸಿಕೊಂಡಿದ್ದರು.

"ಇಂಗ್ಲಿಷ್ ಭಾಷೆಯಲ್ಲಿ ಇಷ್ಟೊಂದು ಸು... ಬರೆದು ದೊಡ್ಡ ದೊಡ್ಡ ಇಂಗ್ಲಿಷ್ ಪಂಡಿತರ ಮನ... ಗುರುಮೀತ್‌ಗೆ ಇಂಗ್ಲಿಷ್‌ನಲ್ಲಿ ನಿರರ್ಗಳವಾಗಿ ಮಾತ... ಆಗುವುದಿಲ್ಲ ಎಂಬುದೇ ಬಹಳ ಸೋಜಿಗ" ... ಮುಂಬೈನ ನಮ್ಮಿಬ್ಬರ ಸಾಮಾನ್ಯ ಸ್ನೇಹಿತೆಯೊಬ್ಬಳು ... ಅಚ್ಚರಿಗೊಳ್ಳುತ್ತಿದ್ದಳು. ಗುರುಮೀತ್ ಮಧ್ಯಮ ... ಕುಟುಂಬದಲ್ಲಿ ಹುಟ್ಟಿಬೆಳೆದು, ಸಂಪೂರ್ಣವಾಗಿ ಪ... ಮಾಧ್ಯಮದಲ್ಲೇ ಓದಿದವರು. ಓದು ಮುಗಿಯುವ ಮ... ಕಾಲೇಜು ತೊರೆದು ಉಕ್ಕೇರಿ ಬರುತ್ತಿದ್ದ ದ... ಜನಸಮುದಾಯಗಳ ಹೋರಾಟದ ಸ... ಧುಮುಕಿದವರು. ಇಂಗ್ಲಿಷ್ ಭಾಷೆಯನ್ನಾಡುವ ... ಅವರಿಗೆ ಸಿಗಲಿಲ್ಲವಾದ್ದರಿಂದ ಮಾತಾಡುವು... ಕಲಿಯಲಿಲ್ಲ. ಆದರೆ, ಶಾಲೆಯಿಂದಾಚೆಗೆ ಸ್ವಪ್ರ... ಮೂಲಕ ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿತು ... ಇಂಗ್ಲಿಷ್ ಭಾಷೆಯನ್ನು ಅದ್ಭುತವಾಗಿ ಬರೆಯುವ ಕ... ಸಿದ್ಧಿಸಿಕೊಂಡಿದ್ದರು.

ಒಮ್ಮೆ ನಾವು ಮುಂಬೈನಲ್ಲಿ ಯಾವುದೋ ... ವಿಷಯದ ಬಗ್ಗೆ ಪ್ರಚಾರಾಂದೋಲನ ... ಕೈಗೆತ್ತಿಕೊಂಡಿದ್ದಾಗ ಇಂಗ್ಲಿಷ್ ಮಾತನಾಡುವ ಬು... ವಲಯಕ್ಕೋಸ್ಕರ ನಾನು ಒಂದು ಕರಪತ್ರವನ್ನು ... ಸಾವಿರಾರು ಸಂಖ್ಯೆಯಲ್ಲಿ ಪ್ರಕಟಿಸಿ ಹಂಚುತ್ತಿದ್ದೆ... ಸಮಯದಲ್ಲಿ ಯಾವುದೋ ಕೆಲಸಕ್ಕೆ ಮುಂಬೈಗೆ ಬ... ಗುರುಮೀತ್ ಈ ಕರಪತ್ರ ಬರೆದವರು ಯಾರು ... ಕೇಳಿದರು. "ನಾನೇ ಬರೆದದ್ದು ಯಾಕೆ ಚೆನ್ನಾಗಿ... ಅಂತ ನಾನು ಮರುಪ್ರಶ್ನೆ ಹಾಕಿದಾಗ ಆತ "... ನನ್ನಂಗೆ. ಇಂಗ್ಲಿಷ್ ಮಾತಾಡೋಕೆ ಬರಲ್ಲ, ಆದರೆ ತ... ಬರೆಯೋದನ್ನು ಕಲಿತಿದ್ದೀಯಾ" ಅಂತ ... ಹುರಿದುಂಬಿಸಿದ್ದು ನನಗಿನ್ನೂ ನೆನಪಿದೆ.

ಗುರುಮೀತ್ ರಾಷ್ಟ್ರೀಯ ಮತ್ತು ಅಂತರರಾ... ವಿದ್ಯಮಾನಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವ ... ರಾಜಕೀಯ ವಿಶ್ಲೇಷಕ ಮಾತ್ರ ಆಗಿರಲಿಲ್ಲ, ಅ... ಸೃಜನಶೀಲ ಬರಹಗಾರ ಕೂಡ ಆಗಿದ್ದರು. ಅವರು ಸ... ಹೆಸರಿನಲ್ಲಿ ಬರೆದ 'ಜಂಗಲ್‌ನಾಮಾ' ಎಂಬ ಪ್ರವಾ... ಅವರ ಸೃಜನಶೀಲ ಅಭಿವ್ಯಕ್ತಿಗೆ ಹಿಡಿದ ಕನ್ನಡಿ. ... ಹೇಳುವಂತೆ ಅದು ಕಾಡಿನ ಕತೆ. ಛತ್ತೀಸ್‌ಗಢದ ಕಾಡಿನ ಕತೆ. ಭಾರತ ಸರ್ಕಾರದಿಂದ 'ದೇಶದ ಆ... ಭದ್ರತೆಯ ಅತಿದೊಡ್ಡ ಅಪಾಯ' ...

ಗಿಸಲ್ಪಟ್ಟಿರುವ ಮಾವೋವಾದಿ ನಕ್ಸಲೀಯರನ್ನು ಕುರಿತ . ಮಾವೋವಾದಿಗಳೆಂಬ ಮೀನುಗಳನ್ನು ತನ್ನೊಳಗೆ ಪಾಡಿಕೊಂಡು ಬದುಕುತ್ತಿರುವ ಆದಿವಾಸಿ ಜನಕೋಟಿಯ . ಇಡೀ ದೇಶದಲ್ಲೇ ಸಮೃದ್ಧ ಖನಿಜ ಮತ್ತು ಅರಣ್ಯ ಸಂಪತ್ತುಗಳಿಂದ ತುಂಬಿತುಳುಕುತ್ತಿರುವ ಬಸ್ತರ್ ಕಾಡಿನಲ್ಲಿ ಸಂಪತ್ತಿಗೆ ನಿಜವಾದ ಮಾಲೀಕರಾಗಿರುವ ಆದಿವಾಸಿಗಳು ತ್ತು ಕೂಳಿಗೂ ಪರದಾಡುತ್ತಾ ಹೊಟ್ಟೆಯನ್ನು ಗುಟಿಸಿಕೊಂಡು ಬದುಕುತ್ತಿರುವ ದಾರುಣ ಕತೆ. ಅರಣ್ಯ ತ್ತು ಖನಿಜ ಸಂಪತ್ತಿನ ಮೇಲಿನ ತಮ್ಮ ನ್ಯಾಯಸಮ್ಮತ ಕ್ಕಾಗಿ ಆದಿವಾಸಿಗಳು ಮಾವೋವಾದಿಗಳೊಂದಿಗೆ ೊತಗೂಡಿ ನಡೆಸುತ್ತಿರುವ ವೀರೋಚಿತ ಬಂಡಾಯದ ತೆ. ಶೋಷಣೆ, ಅನ್ಯಾಯ, ದಮನ, ಬೆವರು, ಣ್ಣೀರುಗಳಿಲ್ಲದ ಸುಂದರ ಹೊಸ ಸಮಾಜವೊಂದನ್ನು ಟ್ಟಬೇಕೆಂಬ ಕನಸುಗಳನ್ನು ಕಟ್ಟಿಕೊಂಡು ಪ್ರಾಣವನ್ನೇ ಣವಾಗಿಟ್ಟು ಬದ್ಧತೆಯಿಂದ ಹೋರಾಡುತ್ತಿರುವ ಮಾವೋವಾದಿ ಗೆರಿಲ್ಲಾಗಳ ಕತೆ. ಗುರುಮೀತ್ ಮಾವೋವಾದಿಗಳ ಭದ್ರಕೋಟೆಯಂತಿರುವ ಮಧ್ಯಭಾರತದ ದುರ್ಗಮ ಧಂಡಕಾರಣ್ಯದಲ್ಲಿ ಮೂರು ತಿಂಗಳ ಕಾಲ ಮಾವೋವಾದಿ ಗೆರಿಲ್ಲಾ ಸೇನೆಯೊಂದಿಗೆ ಸುತ್ತಾಡಿ, ಆದಿವಾಸಿ ಸಮುದಾಯಗಳೊಂದಿಗೆ, ಮಾವೋವಾದಿ ನಾಯಕರೊಂದಿಗೆ, ಪ್ರಜಾ ಮಿಲೀಷಿಯಾದೊಂದಿಗೆ ಬೆರೆತು ಕಣ್ಣಾರೆ ಕಂಡ, ಕಿವಿಯಾರೆ ಕೇಳಿದ ಸತ್ಯಗಳನ್ನು ಈ ಪುಸ್ತಕದಲ್ಲಿ ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ.

ಈ ಪುಸ್ತಕವನ್ನು ಅವರು ತಮ್ಮ ಮಾತೃಭಾಷೆಯಾದ ಪಂಜಾಬಿಯಲ್ಲಿ ಬರೆದು 2003ರ ಅಕ್ಟೋಬರ್‌ನಲ್ಲಿ ಪ್ರಕಟಿಸಿದರು. ಆ ಅವಧಿಯಲ್ಲಿ ಇಡೀ ಪಂಜಾಬ್‌ನಾದ್ಯಂತ ಈ ಪುಸ್ತಕ ಭಾರಿ ಚರ್ಚೆ, ವಾಗ್ವಾದಗಳ ಹೊಸ ಅಲೆಯನ್ನೇ ಎಬ್ಬಿಸಿಬಿಟ್ಟಿತು. ಸಾಹಿತಿಗಳು, ಸಾಮಾಜಿಕ ಕಾರ್ಯಕರ್ತರು, ವಿವಿಧ ಕಮ್ಯೂನಿಸ್ಟ್ ಗುಂಪುಗಳು, ಸಾಮಾಜಿಕ ಸಂಘಟನೆಗಳು, ಅಕೆಡೆಮಿಕ್ ವಲಯದ ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಎಲ್ಲರೂ ಈ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಮಾವೋವಾದದ ಪ್ರಸ್ತುತತೆ-ಅಪ್ರಸ್ತುತತೆಯ ಬಗ್ಗೆ ಪರ್ಯಾಯ ಅಭಿವೃದ್ಧಿ ಮಾದರಿಯ ಸಾಧ್ಯಾಸಾಧ್ಯತೆಗಳ ಬಗ್ಗೆ, ಪರ್ಯಾಯ ಸಾಮಾಜಿಕ-ರಾಜಕೀಯ-ಆರ್ಥಿಕ ಸಂರಚನೆಯ ಮಾದರಿಯ ಬಗ್ಗೆ ತಮ್ಮದೇ ಆದ


ನೆಲಬಾಂಬ್ ಸ್ಫೋಟದಲ್ಲಿ ಅಸುನೀಗಿದ ಪತ್ರಕರ್ತೆ ಆಶಿಯ ಗಿಲಾನಿ

ಅಭಿಪ್ರಾಯಗಳನ್ನು, ಭಿನ್ನಾಭಿಪ್ರಾಯಗಳನ್ನು, ನಿಲುವುಗಳನ್ನು ವ್ಯಕ್ತಪಡಿಸಿದರು. ಸಾಹಿತ್ಯ ವಿಮರ್ಶಕರು ಈ ಪುಸ್ತಕದ ಸಾಹಿತ್ಯ ಪ್ರಕಾರದ ಬಗ್ಗೆಯೇ ಚರ್ಚೆ ಮಾಡಿದರು. ಬಹುತೇಕ ಎಲ್ಲಾ ಪತ್ರಿಕೆಗಳು, ಎಲೆಕ್ಟ್ರಾನಿಕ್ ಮಾಧ್ಯಮಗಳು ಪುಸ್ತಕದ ವಿಮರ್ಶೆ, ಚರ್ಚೆಗಳನ್ನು ಬಿತ್ತರಿಸಿದವು. ಅನೇಕ ಸೆಮಿನಾರ್‌ಗಳು, ಮಂಥನ ಗೋಷ್ಠಿಗಳು ನಡೆದವು. ಕೆಲವೇ ದಿನಗಳಲ್ಲಿ ಪುಸ್ತಕದ ಪ್ರತಿಗಳೆಲ್ಲವೂ ಖಾಲಿಯಾಗಿ ಪುನರ್ ಮುದ್ರಣ ಮಾಡಬೇಕಾಗಿ ಬಂತು. ಅಲ್ಲಿಂದಾಚೆಗೆ ಅದು ಅನೇಕ ಮುದ್ರಣಗಳನ್ನು ಕಂಡಿತು. ನಿಜ ಹೇಳಬೇಕೆಂದರೆ ಖುದ್ದು ಸತ್ನಾಮ್ ಕೂಡ ಈ ಪರಿಯ ಅಮೋಘ ಪ್ರತಿಕ್ರಿಯೆಯನ್ನು ನಿರೀಕ್ಷಿಸಿರಲಿಲ್ಲ. ಅಸಲಿಗೆ ಅವರು ಮಾವೋವಾದಿಗಳ ಭದ್ರಕೋಟೆಯೊಳಗೆ ಪ್ರವಾಸ ಮಾಡಿದಾಗ ಇಂತಹದ್ದೊಂದು ಪುಸ್ತಕ ಬರೆಯುತ್ತೇನೆಂದು ಯೋಚಿಸಿಯೇ ಇರಲಿಲ್ಲ. ಯಾವುದೋ ಪಾಶ್ಚಾತ್ಯ ಲೇಖಕನೊಬ್ಬನ ರೋಚಕವಾದ ಪ್ರವಾಸಕಥನವನ್ನು ಓದುತ್ತಿದ್ದಾಗ ತನ್ನ ಸ್ಮೃತಿಪಟಲದಲ್ಲೂ ಇಷ್ಟೇ ರಸವತ್ತಾದ ಅನುಭವಗಳಿರುವುದನ್ನು ಮನಗಂಡು ತಾನೇಕೆ ಬರೆಯಬಾರದು ಎಂದು ಯೋಚಿಸಿ ಪೆನ್ನು, ಹಾಳೆ ಕೈಗೆತ್ತಿಕೊಂಡು ಬರೆಯಲು ಕುಳಿತವರು ಕೇವಲ ಹನ್ನೆರಡು ದಿನಗಳಲ್ಲಿ ಮುಗಿಸಿ ಮೇಲೆದ್ದಿದ್ದರು!

ತನ್ನ ಮೊದಲ ಪುಸ್ತಕಕ್ಕೆ ಬಂದ ಈ ಅಪಾರ ಪ್ರತಿಕ್ರಿಯೆಯನ್ನು ಕಂಡು ಬಹಳ ಪುಳಕಿತರಾಗಿದ್ದ ಗುರುಮೀತ್ ಅದರ ಬಗ್ಗೆ ನಡೆಯುತ್ತಿದ್ದ ಚರ್ಚೆಗಳನ್ನು, ವಾಗ್ವಾದಗಳನ್ನು, ವಿಮರ್ಶೆಗಳನ್ನು, ಹೊಗಳಿಕೆ-ತೆಗಳಿಕೆಗಳನ್ನು ಪ್ರತಿದಿನವೂ ನನ್ನೊಂದಿಗೆ ಹಂಚಿಕೊಳ್ಳುತ್ತಿದ್ದರು. ನನಗೂ


ಗುರುಮೀತ್ ಜೊತೆ ವರವರ ರಾವ್ ಮತ್ತು ನಗರಿ ಬಾಬಯ್ಯ

ಆ ಪುಸ್ತಕವನ್ನು ಓದಬೇಕೆಂಬ ಹಂಬಲ. ಆದರೆ, ಅದು ಪಂಜಾಬಿಯಲ್ಲಿತ್ತು. ಪಂಜಾಬ್‌ನೊಂದಿಗೆ ಸುದೀರ್ಘ ಒಡನಾಟವಿದ್ದುದರಿಂದ ಪಂಜಾಬಿ ಭಾಷೆಯನ್ನು ಅರ್ಥಮಾಡಿಕೊಳ್ಳಬಲ್ಲೆನಾದರೂ ಓದು-ಬರಹ ಕಷ್ಟ. ಆದಷ್ಟು ಬೇಗ ಇಂಗ್ಲಿಷಿಗೆ ಅನುವಾದಿಸಿ ಅಂತ ಅವರಿಗೆ ಒತ್ತಾಯಿಸುತ್ತಲೇ ಇದ್ದೆ. "ಒಬ್ಬ ಪ್ರೊಫೆಸರ್ ಇಂಗ್ಲಿಷಿಗೆ ಅನುವಾದಿಸುತ್ತಿದ್ದಾರೆ, ಇನ್ನೇನು ಬಂದುಬಿಡುತ್ತೆ, ಓದಿ ಅದನ್ನು ಕನ್ನಡಕ್ಕೆ ಅನುವಾದಿಸು" ಅಂತ ಅವರು ಹೇಳುತ್ತಿದ್ದರು. ಪಂಜಾಬ್‌ನಲ್ಲಿ ಅದಕ್ಕೆ ಸಿಕ್ಕ ಅಭೂತಪೂರ್ವ ಪ್ರತಿಕ್ರಿಯೆಗಳನ್ನು ಕಂಡು ಕೂಡಲೇ ಅದನ್ನು ವಿವಿಧ ಭಾಷೆಗಳಿಗೆ ಅನುವಾದಿಸುವ ಕೆಲಸವೂ ಪ್ರಾರಂಭವಾಯಿತು. ಕೆಲವೇ ದಿನಗಳಲ್ಲಿ ಹಿಂದಿಯನ್ನೂ ಒಳಗೊಂಡಂತೆ ಇತರ ಭಾರತೀಯ ಭಾಷೆಗಳಿಗೆ ಅದು ಅನುವಾದಗೊಂಡಿತು. ಈ ಭಾಷೆಗಳಲ್ಲಿನ ನನ್ನ ಜ್ಞಾನ ಅಷ್ಟಕ್ಕಷ್ಟೆ. ಹೀಗಾಗಿ ಅದು ಇಂಗ್ಲಿಷಿಗೆ ಅನುವಾದವಾಗದ ಹೊರತು ಅದನ್ನು ಓದುವ ಭಾಗ್ಯ ನನಗೆ ಸಿಗುವಂತಿರಲಿಲ್ಲ. ಆದರೆ, ಇಂಗ್ಲಿಷ್‌ಗೆ ಅನುವಾದಿಸುವ ಜವಾಬ್ದಾರಿ ಹೊತ್ತುಕೊಂಡವರು ವರ್ಷಗಳಾದರೂ ಅದನ್ನು ಅನುವಾದಿಸಲಿಲ್ಲ. ಸತ್ನಾಮ್ ಕೂಡ ಇದರಿಂದ ಬೇಸತ್ತು ಹೋಗಿದ್ದರು. ಆ ಪುಸ್ತಕವನ್ನು ಓದಬೇಕೆಂಬ ನನ್ನ ಹಂಬಲಕ್ಕೂ ಅದು ತಣ್ಣೀರೆರಚಿತ್ತು.

ಈ ಪುಸ್ತಕದ ಪ್ರಾಮುಖ್ಯತೆಯನ್ನು ಮನಗಂಡ ಪೆಂಗ್ವಿನ್ ಪ್ರಕಾಶನದವರು 2009ರಲ್ಲಿ ಅದನ್ನು ಇಂಗ್ಲಿಷ್ ಮತ್ತು ಪ್ರಪಂಚದ ಇನ್ನಿತರ ಭಾಷೆಗಳಿಗೆ ಅನುವಾದಿಸುವ ಇಚ್ಛೆ ತೋರಿದರು. ಗುರುಮೀತ್ ಕೂಡ ಅದಕ್ಕೆ ಒಪ್ಪಿಗೆ ಕೊಟ್ಟರು. ಇದಾದ ಕೆಲವೇ ದಿನಗಳಲ್ಲಿ ವಿಷವ್ ಭಾರ್ತಿ ಎಂಬುವವರು ಅದನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದರು. ಅದು ತನ್ನ ಕೈಗೆ ಸಿಗುತ್ತಲೇ ಗುರುಮೀತ್ ಅದರ ಸಾಫ್ಟ್ ಕಾಪಿ ಒಂದನ್ನು ನನಗೆ ಈ-ಮೇಲ್ ಮೂಲಕ ಕಳಿಸಿಕೊಟ್ಟು ತಕ್ಷಣವೇ ಅದನ್ನು ಓದಿ ನನ್ನ ಅಭಿಪ್ರಾಯವನ್ನು ತಿಳಿಸುವಂತೆ, ಇಷ್ಟವಾದರೆ ಕನ್ನಡಕ್ಕೆ ಅನುವಾದಿಸುವಂತೆ ಹೇಳಿದರು. ಆಗತಾನೇ ನಾನು ಶ್ರೀಲಂಕಾ ದ್ವೀಪರಾಷ್ಟ್ರದಲ್ಲಿ ತಮಿಳು ರಾಷ್ಟ್ರೀಯವಾದ ಮತ್ತು ಪ್ರತ್ಯೇಕವಾದ ಸ್ವತಂತ್ರ ಹಾಗೂ ಸಾರ್ವಭೌಮ ತಮಿಳು ರಾಷ್ಟ್ರಕ್ಕಾಗಿ ಎಲ್‌ಟಿಟಿಈ ಮತ್ತು ಅದರ ಅಧಿನೇತ ವೇಲುಪಿಳ್ಳೈ ಪ್ರಭಾಕರನ್ ನೇತೃತ್ವದಲ್ಲಿ ಮುನ್ನಡೆದ ಮೂವತ್ತು ವರ್ಷಗಳ ರಕ್ತಸಿಕ್ತ ಹೋರಾಟವನ್ನು ಕುರಿತ 'ಓ ಈಳಂ' ಪುಸ್ತಕವನ್ನು ಬರೆದು ಮುಗಿಸಿ ಸುಧಾರಿಸಿಕೊಳ್ಳುತ್ತಿದ್ದೆ. ಅದೇ ಸಮಯದಲ್ಲಿ 'ಜಂಗಲ್‌ನಾಮಾ'ದ ಇಂಗ್ಲಿಷ್ ಆವೃತ್ತಿ ಕೂಡ ಕೈಸೇರಿತು. ಬಹುದಿನದಿಂದ ಅದನ್ನು ಓದುವುದಕ್ಕಾಗಿ ಕಾಯುತ್ತಿದ್ದ ನಾನು 2010ರ ಜುಲೈ ಎರಡನೇ ವಾರದಲ್ಲಿ ಅದರ ಇಂಗ್ಲಿಷ್ ಆವೃತ್ತಿ ನನ್ನ ಕೈ ತಲುಪಿದೊಡನೆ ಓದಿ ಮುಗಿಸಿದೆ. ನಿಜಕ್ಕೂ ಅದೊಂದು ಮಾಸ್ಟರ್‌ಪೀಸ್ ಎನಿಸಿತು. ಕೂಡಲೇ ಅದನ್ನು ಕನ್ನಡಕ್ಕೆ ಅನುವಾದಿಸಿದೆ. ಸ್ನೇಹಿತ ಬಿಳಿದಾಳೆ ಪಾರ್ವತೀಶ ತಮ್ಮ 'ಚಾರು ಪ್ರಕಾಶನ'ದಿಂದ ಅದನ್ನು ಪ್ರಕಟಿಸಿದರು. ಪುಸ್ತಕವನ್ನು ಬಿಡುಗಡೆ ಮಾಡಿದ ನಾಡಿನ ಹಿರಿಯ ಚಿಂತಕ ಜಿ. ರಾಮಕೃಷ್ಣ "ತುಂಬಾ ಸೊಗಸಾಗಿ ಅನುವಾದಿಸಿದ್ದೀರಿ" ಅಂತ ಬೆನ್ನುತಟ್ಟಿದರು. ಕೆಲವು ಪ್ರತಿಗಳನ್ನು ಗುರುಮೀತ್‌ಗೆ ಕಳಿಸಿಕೊಟ್ಟೆ. ಕನ್ನಡ ಓದಲು ಬಾರದಿದ್ದರೂ ಆ ಪುಸ್ತಕದ ಬಗ್ಗೆ ಇಲ್ಲಿನ ಜನರು ಆಡುತ್ತಿದ್ದ ಮಾತುಗಳನ್ನು ಕೇಳಿ, ಪ್ರಕಟವಾಗುತ್ತಿದ್ದ ವಿಮರ್ಶೆಗಳನ್ನು ನೋಡಿ ಖುಷಿಪಟ್ಟುಕೊಂಡಿದ್ದರು.

ಸಮಾಜದ ಒಳಿತಿಗೋಸ್ಕರ, ತಳಸ್ತರದ ದುಡಿಯುವ ಸಮುದಾಯಗಳ ವಿಮೋಚನೆಗಾಗಿ ತುಡಿದ, ನಿಸ್ವಾರ್ಥದಿಂದ ದುಡಿದ ಗುರುಮೀತ್‌ಗೆ ವೈಯಕ್ತಿಕ ಬದುಕಿನಲ್ಲಿ ನೆಮ್ಮದಿಯೇ ಇರಲಿಲ್ಲ. ಸಾರ್ವಜನಿಕ ವಿಷಯಗಳನ್ನು ಚರ್ಚಿಸುವಾಗ ಉಲ್ಲಾಸಭರಿತನಾಗಿರುತ್ತಿದ್ದ ಆತ ವೈಯಕ್ತಿಕ, ಕೌಟುಂಬಿಕ ವಿಷಯಗಳು ಬಂದ ತಕ್ಷಣವೇ ಭಾವಾವೇಶದಿಂದ ಪ್ರಕ್ಷುಬ್ಧನಾಗಿಬಿಡುತ್ತಿದ್ದ. ಅಂತಹ ಸಂದರ್ಭದಲ್ಲಿ ಆತನನ್ನು ಸಮಾಧಾನಗೊಳಿಸುವುದು ಅಷ್ಟು ಸುಲಭವಾಗಿರುತ್ತಿರಲಿಲ್ಲ. ಕಡುಕೋಪದಿಂದ ವ್ಯಗ್ರನಾಗುತ್ತಿದ್ದ ಉದ್ವಿಗ್ನ ಪರಿಸ್ಥಿತಿಯಲ್ಲಿ ಆತ ಯಾರ ಮಾತನ್ನೂ ಕೇಳುತ್ತಿರಲಿಲ್ಲ. ಸ್ವಲ್ಪ ಸಾವರಿಸಿಕೊಂಡ ಮೇಲೆ ಅಥವಾ ಕೆಲವು ದಿನಗಳಾದ ಮೇಲೆ ತನ್ನ ವರ್ತನೆಯನ್ನೆಲ್ಲಾ ನೆನಪಿಸಿಕೊಂಡು ಅಕ್ಷರಶಃ ಮಗುವಿನಂತೆ ಅಳುತ್ತಿದ್ದರು. ಆತ ಭಾವಾವೇಶಕ್ಕೆ ಒಳಗಾದ ಸಂದರ್ಭದಲ್ಲಿ ಆತನನ್ನು ಸಮಾಧಾನಪಡಿಸುವುದಕ್ಕೆ ಕೆಲವೇ ಬೆರಳೆಣಿಕೆಯಷ್ಟು ವ್ಯಕ್ತಿಗಳಿಂದ ಮಾತ್ರ ಸಾಧ್ಯವಾಗುತ್ತಿತ್ತು. ಅವರು ಕಷ್ಟಕಾಲದಲ್ಲಿ ಮಾನಸಿಕವಾಗಿ ಧೈರ್ಯಕೊಟ್ಟು ಆತನ ಜೊತೆಗಿದ್ದವರು. ಆದರೆ, ಎಲ್ಲಾ ಸಂದರ್ಭದಲ್ಲೂ ಅವರು ಆತನ ಜೊತೆಗಿರುತ್ತಿರಲಿಲ್ಲ.

ಗುರುಮೀತ್ ತನ್ನ ವೈಯಕ್ತಿಕ ಬದುಕಿನಲ್ಲಿ ಮೂವರು ಮಹಿಳೆಯರನ್ನು - ತನ್ನ ತಾಯಿ, ಹೆಂಡತಿ ಮತ್ತು ಮಗಳು - ಹುಚ್ಚನಂತೆ ಪ್ರೀತಿಸಿದರು. ದುರಂತ ಎಂದರೆ ಆ ಮೂವರಿಂದಲೂ ಅವರು ಬರೀ ನೋವನ್ನೇ ಅನುಭವಿಸಿದರು. ತನ್ನ ತಾಯಿಯೊಂದಿಗಿನ ವೈಷಮ್ಯವನ್ನು ನಿಧಾನವಾಗಿ ಮರೆತು ಅವರೊಂದಿಗೆ ಮತ್ತೆ ಮೊದಲಿನ ಬಾಂಧವ್ಯವನ್ನು ಮರುಸ್ಥಾಪಿಸಿಕೊಂಡರು. ಆದರೆ ಹೆಂಡತಿ ಮತ್ತು ಮಗಳೊಂದಿಗೆ ಅದು ಸಾಧ್ಯವಾಗಲೇ ಇಲ್ಲ.

ತನ್ನ ಹೆಂಡತಿ ಸಂಘಟನೆಯ ಇನ್ನೊಬ್ಬ ಪೂರ್ಣಾವಧಿ ಕಾರ್ಯಕರ್ತನನ್ನು ಪ್ರೇಮಿಸಿ ಆತನೊಂದಿಗೆ ಸಂಬಂಧವೇರ್ಪಡಿಸಿಕೊಳ್ಳುವುದರೊಂದಿಗೆ ಗುರುಮೀತ್ ಮಾನಸಿಕವಾಗಿ ಕುಗ್ಗಿಹೋಗಿ ತನ್ನ ಬದುಕಿನ ಅತ್ಯಂತ ಭೀಕರ ಬಿಕ್ಕಟ್ಟಿಗೆ ಸಿಲುಕಿಬಿಟ್ಟ. ಆಕೆ ಅಂತಿಮವಾಗಿ ಗುರುಮೀತ್‌ನನ್ನು ತೊರೆದು ತಾನು ಪ್ರೇಮಿಸಿದವನೊಂದಿಗೆ ಹೊರಟುಹೋದ ಮೇಲೆ ವಾಸ್ತವವನ್ನು ಒಪ್ಪಿಕೊಂಡು ಬದುಕಿನಲ್ಲಿ ಮುಂದೆ ಸಾಗಲು ಆತನಿಂದ ಆಗಲೇ ಇಲ್ಲ. ಆ ಆಘಾತದಿಂದ ಬಳಲಿ ಬೆಂಡಾಗಿಹೋಗಿದ್ದ ಗುರುಮೀತ್ ವರ್ಷಗಟ್ಟಲೇ ಖಿನ್ನತೆಯಿಂದ ಬಳಲಿದ. ಆತ ಮಾನಸಿಕ ಹಿಂಸೆಯಿಂದ ಆಂಶಿಕವಾಗಿ ಹೊರಬರುವುದಕ್ಕೆ ಬರೋಬ್ಬರಿ ಮೂರು ವರ್ಷಗಳನ್ನು ತೆಗೆದುಕೊಂಡ. ಈ ನಡುವೆ ಒಮ್ಮೆ ಆತ್ಮಹತ್ಯೆಗೂ ಪ್ರಯತ್ನಿಸಿ ವಿಫಲನಾಗಿದ್ದ. ಈ ಸಂದರ್ಭದಲ್ಲಿ ಆತನಿಗೆ ಭರವಸೆ ಕೊಟ್ಟು ಬದುಕುವುದಕ್ಕೆ ಕಾರಣವನ್ನು ಒದಗಿಸಿದ್ದು ಆತನ ತಾಯಿ, ಮಗಳು ಮತ್ತು ಜನಸಮುದಾಯಗಳಿಗಾಗಿ ದುಡಿಯುವ ಧ್ಯೇಯ ಮಾತ್ರ. ಆದರೂ ಆ ವಿಷಯವನ್ನು ನೆನೆದಾಗಲೆಲ್ಲಾ ಭೀಕರ ಮಾನಸಿಕ ಖಿನ್ನತೆಗೆ, ಭಾವೋದ್ವೇಗಕ್ಕೆ ಒಳಗಾಗಿ ನರಳುತ್ತಲೇ ಇದ್ದ.

ಆತನ ವೈಯಕ್ತಿಕ ಬದುಕಿನ ದುರಂತಗಳ ಬಗ್ಗೆ ಏನೂ ಗೊತ್ತಿರದಿದ್ದ ನಾನು ಪಟಿಯಾಲದ ಆತನ ಮನೆಗೆ ಮೊದಲ ಬಾರಿಗೆ ಹೋದಾಗ "ನಿನ್ನ ಹೆಂಡತಿ ಎಲ್ಲಿ?" ಅಂತ ಸಹಜವಾಗಿ ಕೇಳಿಬಿಟ್ಟಿದ್ದೆ. ಅದಕ್ಕವನು ತನ್ನ ಕಣ್ಣಂಚಿನಲ್ಲಿ ನೀರು ತಂದುಕೊಂಡು ಬಹಳ ಪ್ರಶಾಂತವಾಗಿ "ಉಡ್ ಗಯಿ" ಅಂದಿದ್ದ. ನನಗೆ ಆತನ ಮಾತು ಅರ್ಥವಾಗಲಿಲ್ಲ. ನಂತರ ಆತನಿಗೂ ಮತ್ತು ನನಗೂ ಆತ್ಮೀಯವಾಗಿರುವ ಇನ್ನೊಬ್ಬ ಸ್ನೇಹಿತನನ್ನು ವಿಚಾರಿಸಿದಾಗ ಗುರುಮೀತನ ದುರಂತ ಬದುಕಿನ ಅಧ್ಯಾಯಗಳನ್ನು ಎಳೆಎಳೆಯಾಗಿ ವಿವರಿಸಿದ್ದ.

ಹೆಂಡತಿ ತನ್ನನ್ನು ತೊರೆದು ಹೋದ ಮೇಲೆ ಆತ ತನ್ನ ತಾಯಿಯ ಮೇಲೆ ಬಹಳವಾಗಿ ಅವಲಂಬಿತನಾಗಿದ್ದ. ಆನಂತರದಲ್ಲಿ ತಾಯಿ-ಮಗ ಇಬ್ಬರೂ ಒಬ್ಬರನ್ನೊಬ್ಬರು ಬಹಳ ಪ್ರೀತಿಸಿದರು; ಒಬ್ಬರನ್ನೊಬ್ಬರು ಅತೀವವಾಗಿ ಹಚ್ಚಿಕೊಂಡರು, ನೆಚ್ಚಿಕೊಂಡರು. ನಾವೆಲ್ಲಾ ದಾದಿಮಾ ಎಂದು ಕರೆಯುತ್ತಿದ್ದ ಅವರ ತಾಯಿಗೆ ಗುರುಮೀತ್ ಮೇಲಿದ್ದ ಉತ್ಕಟ ಪ್ರೀತಿಯನ್ನು ಮುಚ್ಚಿಡುವುದಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ. ಅವರ ನಡುವಿನ ಪ್ರೀತಿ ಮತ್ತು ಬಾಂಧವ್ಯಗಳು ಕೆಲವೊಮ್ಮೆ ಅತಿ ಎನ್ನಿಸುವಷ್ಟು ಬಹಿರಂಗವಾಗಿ ಪ್ರಕಟಗೊಳ್ಳುತ್ತಿದ್ದವು. ಚಹಾ ತಿಂಡಿ ಕೊಡುವಾಗ, ಊಟ ಬಡಿಸುವಾಗ, ಐಸ್‌ಕ್ರೀಮ್ ಹಾಕಿಕೊಡುವಾಗ ದಾದಿಮಾ ಗುರುಮೀತ್‌ಗೆ ನಮ್ಮೆಲ್ಲರಿಗಿಂತ ಒಂದಿಷ್ಟು ಜಾಸ್ತಿಯನ್ನೇ ಕೊಡುತ್ತಿದ್ದುದನ್ನು ನೋಡಿ ಗುರುಮೀತ್ ಕೂಡ ಮುಗುಳ್ನಗುತ್ತಿದ್ದ. ತಾಯಿ ಸತ್ತ ಮೇಲೆ ಗುರುಮೀತ್ ವೈಯಕ್ತಿಕವಾಗಿ ಮತ್ತೊಮ್ಮೆ ಜರ್ಝರಿತನಾದ.

ವೈಯಕ್ತಿಕ ಬದುಕಿನಲ್ಲಿ ಆತನಿಗೆ ಉಳಿದದ್ದು ಮಗಳು ಮಾತ್ರ. ಆಕೆಯಾದರೂ ತನ್ನೊಂದಿಗೆ, ತನ್ನ ಧ್ಯೇಯಗಳೊಂದಿಗೆ ಇರುತ್ತಾಳೆ ಎಂದು ಆತ ಆಶಿಸಿದ್ದ. ಆದರೆ ಅದೂ ಆಗಲಿಲ್ಲ. ಆಕೆಯನ್ನು ಮರಳಿಪಡೆಯಬೇಕೆಂಬ ಆತನ ಪ್ರಯತ್ನಗಳೆಲ್ಲವೂ ನಿಷ್ಫಲವಾಗಿಹೋದವು. ಕೊನೆಗೆ ತನ್ನ ಮನೆಯನ್ನಾದರೂ ಉದಾತ್ತ ಸಾಮಾಜಿಕ ಆಶಯಗಳನ್ನು ಹೊತ್ತು ನಿಸ್ವಾರ್ಥದಿಂದ ದುಡಿಯುತ್ತಿರುವ ಕಾರ್ಯಕರ್ತರ ಕೇಂದ್ರವನ್ನಾಗಿ ಮಾಡಬೇಕು ಅಥವಾ ಅದನ್ನು ಇತರ ಸಾಮಾಜಿಕ ಉದ್ದೇಶಗಳಿಗಾಗಿ ಬಳಸಬೇಕು ಎನ್ನುವ ಆತನ ಕೊನೆಯ ಪ್ರಯತ್ನವೂ ಫಲ ನೀಡಲಿಲ್ಲ.

ಈ ಎಲ್ಲಾ ವಿದ್ಯಮಾನಗಳು ಆತನಲ್ಲಿ ಒಂದು ರೀತಿಯ ವಿಶ್ವಾಸದ್ರೋಹಕ್ಕೆ ಒಳಗಾದ, ಮೋಸಹೋದ, ಸೋತ ಭಾವನೆಗಳನ್ನು ಬೆಳೆಸಿದ್ದವು. ಅಲ್ಲದೇ ವೈಯಕ್ತಿಕ ಬದುಕಿನಲ್ಲಿ ತಾನು ಏಕಾಂಗಿಯಾದೆ ಎಂಬ ಕೊರಗನ್ನು ಹುಟ್ಟುಹಾಕಿದ್ದವು. ಆದರಿಂದ ಆತ ಹೊರಬರಲಾಗದೇ ಒದ್ದಾಡುತ್ತಿದ್ದ. ಕೊನೆಗೆ ತನಗೆ ಬದುಕುವುದಕ್ಕೆ ಕಾರಣವೇ ಇಲ್ಲ ಎಂಬ ತೀರ್ಮಾನ ಮಾಡಿಕೊಂಡು ನೇಣಿಗೆ ಕೊರಳೊಡ್ಡಿ ಇಹಲೋಕ ತ್ಯಜಿಸಿಬಿಟ್ಟ.

ಅಗಲಿದ ಗೆಳೆಯನಿಗೆ ನನ್ನ ಕಂಬನಿಯ ನಮನ.

■ ಕುಮಾರ್ ಬುರಡಿಕಟ್ಟಿ

ಡೆತ್ ನೋಟ್

“ಕೊಲೆಯು ಸಬ್‌ವುಲ್ ಮುಅಬಿಕಾತ್ ಎಂಬ ಏಳು ಮಹಾಪಾಪಗಳಲ್ಲೊಂದಾಗಿದೆ. ಅನ್ಯಾಯವಾಗಿ ಒಂದು ಜೀವವನ್ನು ವಧಿಸುವುದು [illegible] ಮಾನವಕುಲವನ್ನು ವಧಿಸಿದ್ದಕ್ಕೆ ಸಮ. ಒಬ್ಬ ಮನುಷ್ಯನ ಪ್ರಾಣ ರಕ್ಷಿಸಿದರೆ ಸಂಪೂರ್ಣ ಮಾನವಕುಲಕ್ಕೆ ಜೀವದಾನ ನೀಡಿದ್ದಕ್ಕೆ ಸಮ. ಕೊಲೆಗಾರರಿಗೆ ರೌರವ ನರಕ ಶಿಕ್ಷೆ ಕಾದಿದೆ. ಅಂತೆಯೇ ಯಾರು ಸ್ವಯಂ ಜೀವವನ್ನು ವಧಿಸುತ್ತಾರೋ ಅರ್ಥಾತ್ ಆತ್ಮಹತ್ಯೆ ಮಾಡಿಕೊಳ್ಳುತ್ತಾರೋ ಅವರು ಧರ್ಮಭ್ರಷ್ಟರಾಗಿ ಸಾಯುತ್ತಾರೆ ಮತ್ತು ಅವರಿಗೂ ರೌರವ ನರಕದ ಶಿಕ್ಷೆ ಕಾದಿದೆ.” ಮೊಗ್ರುಪಾಡಿ ಜುಮಾ ಮಸೀದಿಯ ಉಸ್ತಾದರ ಅಸ್ಖಲಿತ ಧಾರ್ಮಿಕ ಉಪನ್ಯಾಸ ಕೇಳಿ ಐಸಮ್ಮಳಿಗೆ ಮಗಳು ಶಮೀರಾಳ ಹಸಿಹಸಿ ನೆನಪು ಕಾಡತೊಡಗಿತು. ಅಂದು ಸಂಜೆಯಷ್ಟೇ ಸಿಕ್ಕಿದ ಮಗಳ ಡೆತ್‌ನೋಟ್ ಹಿಡಿದುಕೊಂಡು ಮಸೀದಿಯ ಪಕ್ಕದಲ್ಲೇ ಇದ್ದ ತನ್ನ ಶೆಡ್‌ನಂತಹ ಮನೆಯಿಂದ ಹೊರನಡೆದ ಐಸಮ್ಮ ಮಸೀದಿಯ ಕಾಂಪೌಂಡ್ ಹೊಕ್ಕು ಒಂದು ನಿಮಿಷ ಅಲ್ಲೇ ನಿಂತು ಧಾರ್ಮಿಕ ಉಪನ್ಯಾಸ ನಡೆಯುತ್ತಿದ್ದ ವೇದಿಕೆಯತ್ತ ದೃಷ್ಟಿ ಹಾಯಿಸಿ ನೋಡಿದಳು..

ವೇದಿಕೆಯಲ್ಲಿ ಮಸೀದಿ ಆಡಳಿತ ಸಮಿತಿಯ ಅಧ್ಯಕ್ಷ ಪೋಕರ್ ಬ್ಯಾರಿ, ಕಾರ್ಯದರ್ಶಿ ಗಫ್ಫಾರ್ ಸಾಹೇಬರಾದಿಯಾಗಿ ಮೊಹಲ್ಲಾದ ಅತಿರಥ ಮಹಾರಥರು ಮಹಾಧರ್ಮಿಷ್ಠರಂತೆ ಗಂಭೀರವಾಗಿ ಕೂತು ಉಪನ್ಯಾಸ ಆಲಿಸುತ್ತಿದ್ದರು. ವೇದಿಕೆಯ ಮುಂಭಾಗದಲ್ಲಿ ಸುಮಾರು ಇನ್ನೂರರಷ್ಟು ಗಂಡಸರು, ವೇದಿಕೆಯ ವಿರುದ್ಧ ದಿಕ್ಕಿಗಿದ್ದ ಮದ್ರಸದ ಸ್ಲಾಬ್‌ನ ಮೇಲೆ ನೂರೈವತ್ತಕ್ಕೂ ಮಿಕ್ಕಿದ ಮಹಿಳೆಯರು ಕೂತು ಉಪನ್ಯಾಸ ಆಲಿಸುತ್ತಿದ್ದರು. ಮಸೀದಿ ಹಿಂಬದಿಯ ಕಾಂಪೌಂಡ್‌ಗೆ ತಾಗಿಕೊಂಡಿದ್ದ ತಾತ್ಕಾಲಿಕ ಚಹ ಕ್ಯಾಂಟೀನ್‌ನಲ್ಲಿ ಚಹ ಹೀರುತ್ತಾ, ಸಿಗರೇಟು ಸೇದುತ್ತಾ ಹತ್ತುಹನ್ನೆರಡು ಯುವಕರು ಈ ಉಪನ್ಯಾಸಕ್ಕೂ ತಮಗೂ ಸಂಬಂಧವಿಲ್ಲವೆಂಬಂತೆ ಹರಟೆ ಕೊಚ್ಚುವುದರಲ್ಲಿ ಮುಳುಗಿದ್ದರು. ಮತ್ತೆ ಕೆಲವು ಯುವಕರು ವೇದಿಕೆಯ ಹಿಂಬದಿಯ ಕಾಂಪೌಂಡ್ ಮೇಲೆ ಸಾಲಾಗಿ ಕೂತು ಜರ್ದಾ ಅಗಿಯುತ್ತಾ ಮಸೀದಿಯತ್ತ ಬರುವ ಹುಡುಗಿಯರನ್ನು ಕಿಚಾಯಿಸಲು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದರು.

ಆತ್ಮಹತ್ಯೆಯ ಕುರಿತಂತೆ ಉಸ್ತಾದರ ವಾಗ್ಝರಿಯು ತಡೆಯಿಲ್ಲದಂತೆ ಹರಿಯುತ್ತಿತ್ತು. ಐಸಮ್ಮಳಿಗೆ ದುಃಖ ಉಮ್ಮಳಿಸಿ ಬರುತ್ತಿದ್ದರೂ ಆಕೆಯ ಮನದೊಳಗೆ ಎದ್ದ ದಾವಾಗ್ನಿಯು ಹೊತ್ತಿ ಉರಿಯುತ್ತಿತ್ತು. ಎಲ್ಲರೂ ನೋಡುತ್ತಿದ್ದಂತೆಯೇ ಬಿರಬಿರನೇ ನಡೆಯುತ್ತಾ ವೇದಿಕೆ ಏರಿಬಿಟ್ಟಳು. ಅನಿರೀಕ್ಷಿತವಾಗಿ ಓರ್ವ ಮಹಿಳೆ ವೇದಿಕೆ ಏರುತ್ತಿದ್ದರೂ ಯಾರಿಗೂ ಏನಾಗುತ್ತಿದೆ ಎಂದು ತಿಳಿಯಲೇ ಇಲ್ಲ, ಆದರೆ ಏಕಾಏಕಿ ಕಿಕ್ಕಿರಿದು ತುಂಬಿದ್ದ ಜನಸ್ತೋಮದ ಮುಂದೆ ಓರ್ವ ಮಹಿಳೆ ವೇದಿಕೆ ಏರುವುದನ್ನು ತಡೆಯುವ ಧೈರ್ಯ ಯಾರಿಗೂ ಬರಲಿಲ್ಲ.


ಆಕೆ ಪೋಡಿಯಂ ಬಳಿಗೆ ತಲುಪಿದಾಗ ಉಪನ್ಯಾಸ ನೀಡುತ್ತಿದ್ದ ಉಸ್ತಾದ್ ಸಂಕೋಚದಿಂದ ಪಕ್ಕಕ್ಕೆ ಸರಿದುನಿಂತರು. ಧ್ವನಿವರ್ಧಕದ ಮುಂದೆ ನಿಂತವಳೇ ತನ್ನ ಕೈಯಲ್ಲಿದ್ದ ಪುಟ್ಟ ಕಾಗದವೊಂದನ್ನು ಬಿಡಿಸುತ್ತಾ ಅಸ್ಸಲಾಮು ಅಲೈಕುಂ ಎಂದಳು.

“ನನ್ನ ಎಲ್ಲವೂ ಆದ ಉಮ್ಮಾ

ನಿನ್ನಲ್ಲಿ ಹೇಳದೇಕೇಳದೇ ಬದುಕಿಗೆ ವಿದಾಯ ಹೇಳಿ ಹೋದ ನನ್ನನ್ನು ಕ್ಷಮಿಸು. ನಾನು ಆತ್ಮಹತ್ಯೆಯ ಕುರಿತು ಕನಸಿನಲ್ಲೂ ಯೋಚಿಸಿದವಳಲ್ಲ. ಆದರೆ ವಿಧಿ ನನ್ನನ್ನು ಇಂತಹ ಘೋರ ತೀರ್ಮಾನ ತೆಗೆದುಕೊಳ್ಳುವಂತೆ ನಿರ್ಬಂಧಿಸಿದೆ. ನಿನ್ನಾಸೆಯಂತೆಯೇ ಚೆನ್ನಾಗಿ ಕಲಿತು ಒಳ್ಳೆಯ ನೌಕರಿ ಗಿಟ್ಟಿಸಿ ನಿನ್ನ ಗಾಣದೆತ್ತಿನಂತಹ ದುಡಿಮೆಗೆ ವಿರಾಮ ಹಾಕಿಸಬೇಕು, ನಿನ್ನನ್ನು ಚೆನ್ನಾಗಿ ಸಾಕಬೇಕೆಂದು ಕನಸಿನಗೋಪುರ ಕಟ್ಟಿದ್ದೆ. ನಿನ್ನನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಲು ಒಂದೂವರೆ ಸಾವಿರ ರೂಪಾಯಿ ದುಡ್ಡು ಹೊಂದಿಸಲಾಗದೆ ಆತ್ಮಹತ್ಯೆ ಕೊಂಡದ್ದಲ್ಲ. ನೀನು ಮನೆಗೆಲಸಕ್ಕೆ ಹೋಗುತ್ತಿದ್ದ ನಮ್ಮ ಮಸೀದಿಯ ಅಧ್ಯಕ್ಷ ಪೋಕರ್ ಬ್ಯಾರಿ...”

ತನ್ನ ಹೆಸರು ಐಸಮ್ಮಳ ಬಾಯಿಯಿಂದ ಕೇಳಿದ್ದೇ ತಡ, ಪೋಕರ್ ಬ್ಯಾರಿ “ಏನು ನೋಡುತ್ತಿದ್ದೀರಿ ಆ ಧರ್ಮಗೆಟ್ಟ ಬೊಗ್ಗಿಯನ್ನು ಒದ್ದು ಕೆಳಗೆ ಹಾಕಿ...” ಎಂದು ಅರಚಾಡಿದ. ಕೋಪಾವಿಷ್ಟರಾದ ಯುವಕರು ವೇದಿಕೆಯತ್ತ ಮುನ್ನುಗ್ಗಿ ಬಂದು “ಐಸಮ್ಮಳನ್ನು ಮುಟ್ಟಿದರೆ ಜಾಗ್ರತೆ” ಎಂದು ತೋಳೇರಿಸಿದರು. ವೇದಿಕೆಯಿಂದ ತಡಬಡಾಯಿಸಿ ಇಳಿಯಲು ಹವಣಿಸುತ್ತಿದ್ದ ಪೋಕರ್ ಬ್ಯಾರಿಯನ್ನು ಯುವಕರು ತಡೆದು “ಎಲ್ಲಿಗೆ ಹೋಗುತ್ತಿದ್ದೀರಿ...? ಮರ್ಯಾದೆಗೆ ಅಲ್ಲೇ ಕುಳಿತುಕೊಳ್ಳಿ” ಎಂದು ಆವಾಜ್ ಹಾಕಿದರು.

“ಐಸಮ್ಮದಾದ ನೀವು ಮುಂದುವರಿಸಿ” ಎಂದರು. ಐಸಮ್ಮ ಮುಂದುವರಿಸಿದಳು “ನೀನು ಮನೆಕೆಲಸಕ್ಕೆ ಹೋಗುತ್ತಿದ್ದ ನಮ್ಮ ಮಸೀದಿಯ ಅಧ್ಯಕ್ಷ ಪೋಕರ್ ಬ್ಯಾರಿಯ ಮನೆಗೆ ನಿನ್ನ ಸಲಹೆಯಂತೆ ಕಡ ಕೇಳಲು ಹೋಗಿದ್ದೆ, ಆಗ ಆತನ ಮನೆಯಲ್ಲಿ ಆತನ ಹೊರತಾಗಿ ಬೇರ್ಯಾರೂ ಇರಲಿಲ್ಲ, ಪಾತುಂಞುದಾದ ಮನೆಯಲ್ಲಿಲ್ಲದ ಕಾರಣ ಪೋಕರ್ ಬ್ಯಾರಿಯಲ್ಲಿ ನಿನ್ನನ್ನು ಡಿಸ್‌ಚಾರ್ಜ್ ಮಾಡಿಸಲು ದುಡ್ಡು ಕೇಳಿದೆ. ಒಳಹೋದಾತ ಸ್ವಲ್ಪ ಹೊತ್ತಿನ ಬಳಿಕ ಒಂದು ಲೋಟದಲ್ಲಿ ತಂಪು ಪಾನೀಯ ತಂದುಕೊಟ್ಟ. ಬೇಡಬೇಡವೆಂದರೂ ಕುಡಿಯಲು ಒತ್ತಾಯಿಸಿದ. ಆತನ ಒತ್ತಾಯಕ್ಕೆ ಮಣಿದು ಕುಡಿದೆ. ಆತ ದುಡ್ಡು ತರುತ್ತೇನೆಂದು



ಮತ್ತೆ ಒಳಹೋದ. ನನ್ನ ಕಣ್ಣುಗಳಿಗೆ ಮಂಪರು ಕವಿದಂತಾದುದೊಂದು ನೆನಪಿದೆ. ಮತ್ತೆ ನನಗೆ ಎಚ್ಚರವಾದಾಗ ನನ್ನ ಚೂಡಿದಾರದ ಪ್ಯಾಂಟಿನ ಲಾಡಿ ಬಿಚ್ಚಿತ್ತು. ನನ್ನ ಗುಪ್ತಾಂಗ ವಿಪರೀತವಾಗಿ ನೋಯುತ್ತಿತ್ತು. ಅಲ್ಪ ಸ್ವಲ್ಪ ಹೆಪ್ಪುಗಟ್ಟಿದ ರಕ್ತವೂ ಇತ್ತು.”

ಆಕೆಗೆ ಮುಂದೆ ಓದಲಾಗಲಿಲ್ಲ, ಗಂಟಲುಬ್ಬಿ ಬಂತು. ಸೇರಿದ್ದ ಜನಸ್ತೋಮದ ಮುಂದೆ ಬಿಕ್ಕಿಬಿಕ್ಕಿ ಅಳತೊಡಗಿದಳು.

* * * *

ಕತೆ

ಐಸಮ್ಮಳ ಮಗಳು ಶಮೀರಾಳಿಗೆ ಇನ್ನೂ ಹರೆಯ ತುಂಬುವ ಮೊದಲೇ ಆಕೆಯ ಗಂಡ ಅಬ್ಬೋನು ಇಹಲೋಕ ತ್ಯಜಿಸಿದ್ದ. ಅಬ್ಬೋನುನ ಕುಟುಂಬಿಕರು ಐಸಮ್ಮಳನ್ನು ಇದ್ದತ್ (ನಾಲ್ಕು ತಿಂಗಳು ಹತ್ತು ದಿನದ ಶೋಕಾಚರಣೆ) ಆಚರಿಸಲೂ ಬಿಡದೇ ಮನೆಯಿಂದ ಹೊರದಬ್ಬಿದರು. ಆಕೆಗೆ ಅನ್ಯದಾರಿಯಿರಲಿಲ್ಲ. ಐಸಮ್ಮಳಿಗೆ ಮದುವೆಯಾಗುವ ಮುನ್ನವೇ ಅವಳಪ್ಪ ಇಹಲೋಕ ತ್ಯಜಿಸಿದ್ದರು. ಐಸಮ್ಮಳ ಅಮ್ಮ ಮಸೀದಿ ಮಸೀದಿಗೆ ಅಲೆದು ಭಿಕ್ಷೆ ಬೇಡಿ ಐಸಮ್ಮಳ ಮದುವೆ ಮಾಡಿದ್ದರು. ಐಸಮ್ಮಳ ಮದುವೆಯಾಗಿ ತಿಂಗಳು ತುಂಬುವ ಮುನ್ನವೇ ಆಕೆಯ ಅಮ್ಮ ಪುತ್ತಲಿಮ ಕೂಡ ಇಹಲೋಕ ತ್ಯಜಿಸಿದರು. ಇದ್ದ ಒಬ್ಬ ಅಣ್ಣ ಅಮ್ಮ ಮರಣಹೊಂದಿ ಎರಡು ತಿಂಗಳಾಗುವಾಗಲೇ ಮನೆಮಾರಿ ಹೆಂಡತಿ ಮಕ್ಕಳೊಂದಿಗೆ ಬೊಂಬಾಯಿ ಸೇರಿದವನು ಮತ್ತೆಂದೂ ತಂಗಿಯತ್ತ ತಿರುಗಿ ನೋಡಲಿಲ್ಲ. ಐಸಮ್ಮ ಹಾಲುಗೂಸನ್ನು ಹಿಡಿದು ಸಂಬಂಧಿಕರ ಮನೆಗಳಲ್ಲಿ ಆಶ್ರಯ ಕೋರಿ ಹೋದರೂ ಅವರೆಲ್ಲಾ ನಿಷ್ಕರುಣೆಯಿಂದ ಆಕೆಯನ್ನು ದೂರ ಮಾಡಿದರು. ಐಸಮ್ಮ ವಿಧಿಯಿಲ್ಲದೇ ಉಳ್ಳಾಲ ದರ್ಗಾದ ಬಳಿ ಬಂದು ಭಿಕ್ಷೆ ಬೇಡಿ ಹೊಟ್ಟೆ ತುಂಬಿಸತೊಡಗಿದಳು. ಅಲ್ಲೇ ಪಕ್ಕ ಮಸೀದಿಯ ಬಯಲಲ್ಲೇ ಮಲಗಿ ರಾತ್ರಿಗಳನ್ನು ಕಳೆಯುತ್ತಿದ್ದಳು.

ಒಂದು ಸಂಜೆ ಮೊಗ್ರುಪಾಡಿಯ ಸಾಹುಕಾರ ಪೋಕರ್ ಬ್ಯಾರಿ ಕುಟುಂಬ ಸಮೇತರಾಗಿ ದರ್ಗಾಕ್ಕೆ ಬಂದು ಮರಳಿಹೋಗಲು ಕಾರು ಹತ್ತುತ್ತಿದ್ದಾಗ ಐಸಮ್ಮ ಹಾಲುಗೂಸನ್ನು ಕೈಯಲ್ಲಿ ಹಿಡಿದು ಭಿಕ್ಷೆಗಾಗಿ ಇವರ ಹತ್ತಿರ ಬಂದಳು. ಪೋಕರ್ ಬ್ಯಾರಿಯ ಹೆಂಡತಿ ಪಾತುಂಞುದಾದರಿಗೆ ಕೈಯಲ್ಲಿ ಪುಟ್ಟ ಕೂಸೊಂದನ್ನು ಹಿಡಿದು ಭಿಕ್ಷೆ ಬೇಡುತ್ತಿದ್ದ ಐಸಮ್ಮಳನ್ನು ಕಂಡು ಕರುಳು ಚುರುಕ್ಕೆಂದಿತು. ಪಾತುಂಞುದಾದ ಐಸಮ್ಮಳನ್ನು ಬಳಿಗೆ ಕರೆದು ಆಕೆಯ ವ್ಯಥೆ ಕೇಳಿದರು. ಗಂಡನನ್ನು ಒತ್ತಾಯಿಸಿ “ಪಾಪದ ಹುಡುಗಿ, ಹಿಂದೆಮುಂದೆ ಯಾರೂ ಇಲ್ಲ, ನಮ್ಮ ಮನೆಕೆಲಸಕ್ಕೆ ಇರಲಿ” ಎಂದು ಗಂಡನನ್ನು ಒಪ್ಪಿಸಿ ಐಸಮ್ಮಳನ್ನು ಕರೆದುಕೊಂಡು ಬಂದರು. ಮೊಗ್ರುಪಾಡಿಯ ತಮ್ಮ ಹಳೆಯ ಶೆಡ್‌ನಲ್ಲಿ ಆಕೆಗೆ ಆಶ್ರಯ ಕೊಟ್ಟರು. ಐಸಮ್ಮ ಪೋಕರ್ ಬ್ಯಾರಿಯ ಮನೆಯಲ್ಲಿ ಸಂಜೆತನಕ ಮೈಮುರಿದು ದುಡಿದು ದನಿಯ ಮನೆಯಲ್ಲಿ ಉಳಿದ ತಂಗಳನ್ನ ತಂದು ಉಂಡು ಹೊಟ್ಟೆ ಹೊರೆಯುತ್ತಿದಳು.


ಆ ಕಾಲಕ್ಕೆ ಐದನೆಯ ಇಯತ್ತೆವರೆಗೆ ಓದಿದ್ದ ಐಸಮ್ಮಳಿಗೆ ಶಿಕ್ಷಣದ ಮಹತ್ವ ಗೊತ್ತಿತ್ತು. ಎಷ್ಟೇ ಕಷ್ಟವಾದರೂ ತನಗಿರುವ ಏಕೈಕ ಆಸರೆಯಾದ ಮಗಳನ್ನು ಚೆನ್ನಾಗಿ ಓದಿಸಬೇಕೆಂದು ಐಸಮ್ಮ ಕನಸಿದ್ದಳು. ಅಮ್ಮನ ಆಶೆಯಂತೆ ಶಮೀರಾ ಚೆನ್ನಾಗಿ ಓದಿ ಎಸ್ಸೆಸ್ಸೆಲ್ಸಿಯಲ್ಲಿ ಡಿಸ್ಟಿಂಕ್ಷನ್ ಪಡೆದಳು. ಪಿ.ಯು.ಸಿ ಯಲ್ಲಿ ವಿಜ್ಞಾನವನ್ನು ಆಯ್ದು ಶಮೀರಾ ಚೆನ್ನಾಗಿ ಓದುತ್ತಿದ್ದಳು. ಅಮ್ಮನ ಕಸ ಮುಸುರೆ ತಿಕ್ಕುವ ದುಡಿತದಿಂದ ಹೇಗೂ ಎರಡು ಹೊತ್ತು ಉಣ್ಣಲು ಸಾಧ್ಯವಾಗುತ್ತಿತ್ತು. ಇರಲು ದನಿ ಪೋಕರ್ ಬ್ಯಾರಿಯ ಹಳೆಯ ಶೆಡ್ಡಿತ್ತು. ಶಮೀರಾ ನಾಲ್ಕನೇ ಕ್ಲಾಸಿನಲ್ಲಿರುವಾಗಲೇ ಬೀಡಿಕಟ್ಟಲು ಕಲಿತಿದ್ದಳು. ತಾನು ಬೀಡಿ ಕಟ್ಟಿ ಸಂಪಾದಿಸಿದ ದುಡ್ಡಿನಿಂದಲೇ ಶಾಲೆಯ ಫೀಸು, ಸಮವಸ್ತ್ರ ಪುಸ್ತಕ ಇತ್ಯಾದಿಗಳ ವೆಚ್ಚವನ್ನು ಭರಿಸುತ್ತಿದ್ದಳು. ಸಂಜೆ ಶಾಲೆಯಿಂದ ಬಂದು ಮದ್ರಸಕ್ಕೆ ತೆರಳುತ್ತಿದ್ದಳು. ಮದ್ರಸದ ತರಗತಿ ಮುಗಿಸಿ ಬಂದು ರಾತ್ರಿ ಒಂಬತ್ತು ಗಂಟೆಯಿಂದ ಹನ್ನೆರಡು ಗಂಟೆಯವರೆಗೆ ಚಿಮಿಣಿ ದೀಪದ ಬೆಳಕಿನಿಂದ ಬೀಡಿ ಸುತ್ತುತ್ತಿದ್ದಳು. ಪ್ರಭಾತದ ನಮಾಜ್‌ಗೆ ಎದ್ದು ಸುಮಾರು ಒಂದೂವರೆ ತಾಸು ದಿನನಿತ್ಯದ ಪಠ್ಯಗಳನ್ನು ಅಭ್ಯಸಿಸುತ್ತಿದ್ದಳು. ಆ ಬಳಿಕ ಅಮ್ಮನಿಗೆ ಮನೆಗೆಲಸದಲ್ಲಿ ನೆರವಾಗಿ ನಿತ್ಯ ಕರ್ಮ ಮುಗಿಸಿ ಒಂಬತ್ತೂವರೆ ಗಂಟೆಗೆಲ್ಲಾ ಕಾಲ್ನಡಿಗೆಯ ದೂರದಲ್ಲಿರುವ ಮೊಗ್ರುಪಾಡಿ ಸರಕಾರಿ ಪದವಿ ಪೂರ್ವ ಕಾಲೇಜು ತಲುಪುತ್ತಿದ್ದಳು.

* * * *

ಅಸ್ತಮಾ ರೋಗಿಯಾಗಿದ್ದ ಐಸಮ್ಮಳಿಗೆ ಒಮ್ಮೆ ಇದ್ದಕ್ಕಿದ್ದಂತೆ ಕಾಯಿಲೆ ಉಲ್ಬಣಿಸಿ ಮಂಗಳೂರಿನ ಸರಕಾರಿ ವೆನ್‌ಲಾಕ್ ಆಸ್ಪತ್ರೆಗೆ ದಾಖಲಾಗಿದ್ದಳು. ಅಲ್ಲಿ ಹಲವು ದಿನಗಳ ಚಿಕಿತ್ಸೆ ಪಡೆದರೂ ಐಸಮ್ಮ ಚೇತರಿಸಿಕೊಳ್ಳಲಿ[illegible] ಆ ಬಳಿಕ ವೈದ್ಯರ ಸಲಹೆಯ ಮೇರೆಗೆ ಒಳ್ಳೆಯ ಚಿಕಿತ್ಸೆಗ[illegible] ದೇರಳಕಟ್ಟೆಯ ಖಾಸಗಿ ಕೆ.ಎಸ್.ಹೆಗ್ಡೆ ಆಸ್ಪತ್ರೆಗೆ ಶಮೀರಾ ಅಮ್ಮನನ್ನು ದಾಖಲಿಸಿದಳು. ಔಷಧಿಗಳು, ಇಂಜೆಕ್ಷನ್ ರಕ್ತಪರೀಕ್ಷೆ, ಎಕ್ಸ್‌ರೇ ಇತ್ಯಾದಿಗಳ ವೆಚ್ಚವನ್ನು ಶಮೀರಾ ಬೀಡಿ ಕಟ್ಟಿ ಉಳಿಸಿದ್ದ ಪುಡಿಕಾಸಿನಿಂದಲೇ ಭರಿಸಿದಳು. ಸುಮಾರು ಹತ್ತು ದಿನಗಳ ಚಿಕಿತ್ಸೆಯ ಬಳಿಕ ಐಸಮ್ಮ ಗುಣಮುಖಳಾದಳು. ಮೆಡಿಕಲ್ ಕಾಲೇಜು ಆಸ್ಪತ್ರೆಯಾ[illegible]ದ್ದರಿಂದ ಜನರಲ್ ವಾರ್ಡಿನ ಚಿಕಿತ್ಸೆಗೆ ದೊಡ್ಡ ಬಿಲ್ಲೇನೂ ಆಗಲಿಲ್ಲ, ಆದರೂ ಡಿಸ್‌ಚಾರ್ಜ್ ಮಾಡಲು ಒಂದೂವರೆ ಸಾವಿರ ರೂಪಾಯಿ ದುಡ್ಡು ಬೇಕಿತ್ತು, ಶಮೀರಾಳ [illegible] ಖಾಲಿಯಾಗಿದ್ದರಿಂದ ಆಕೆ ಅಮ್ಮನಲ್ಲಿ ದುಡ್ಡಿಗೇನು ಮಾಡು[illegible]ದಮ್ಮಾ ಎಂದು ಕೇಳಿದಳು. ಐಸಮ್ಮ ತನ್ನ ದನಿ ಪೋಕರ್ ಬ್ಯಾರಿಯ ಹೆಂಡತಿಯ ಬಳಿಗೆ ಸಾಲ ಕೇಳಲು ಮಗಳನ್ನು ಕಳುಹಿಸಿದಳು. ಡಿಸ್‌ಚಾರ್ಜ್ ಮಾಡಲು ದುಡ್ಡು ತರುತ್ತೇನೆಂದು ಹೋದ ಶಮೀರಾ ಬಾರದ ಲೋಕಕ್ಕೆ ತೆರಳಿದ್ದಳು. ಮನೆಯ (ಶೆಡ್ಡಿನ) ಮೇಲ್ಛಾವಣಿಯ ಪಕ್ಕಾಸಿಗೆ ತನ್ನ ಚೂಡಿದಾರದ ಶಾಲಿನಿಂದ ನೇಣು ಬಿಗಿಯುವುದಕ್ಕಿಂತ ಮುಂ[illegible] ಅಮ್ಮನ ತುಕ್ಕು ಹಿಡಿದ ಟ್ರಂಕಿನಲ್ಲಿ ಡೆತ್‌ನೋಟನ್ನು ಇಟ್ಟಿದ್ದಳು. ಶಮೀರಾ ರಾತ್ರಿ ಹೊತ್ತು ಬಾಗಿಲು ತೆರೆದಿಟ್ಟೇ ನೇಣು ಬಿಗಿದಿದ್ದರಿಂದ ಮರುದಿನ ಮುಂಜಾನೆಯೇ ಊರಿಡೀ ಸುದ್ದಿ ಹಬ್ಬಿತ್ತು, ನಿಜವಾದ ಕಾರಣ ಪೋಕರ್ ಬ್ಯಾರಿಯ ಹೊರತಾಗಿ ಊರಿಗೂ ತಿಳಿದಿರಲಿಲ್ಲ, ಅಮ್ಮನನ್ನು ಡಿಸ್ಚಾರ್ಜ್ ಮಾಡಲು ದುಡ್ಡು ಹೊಂದಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಳೆಂದು ಊರಿಗೆ ಊರೇ ಮಾತನಾಡುತ್ತಿತ್ತು. ಪೋಕರ್ ಬ್ಯಾರಿ ಸ್ವತಃ ಆಸ್ಪತ್ರೆಗೆ ಹೋಗಿ ಐಸಮ್ಮಳನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಬಂದ. ಮಗಳ ಅಂತ್ಯಸಂಸ್ಕಾರ ನಡೆದು ಮೂರನೇ ದಿನ ಐಸಮ್ಮಳಿಗೆ ಮಗಳ ಡೆತ್‌ನೋಟ್ ಸಿಕ್ಕಿತು. ಮೊಗ್ರುಪಾಡಿ ಮಸೀದಿಯಲ್ಲಿ ಅಂದಿನಿಂದ ಧಾರ್ಮಿಕ ಉಪನ್ಯಾಸ ಕಾರ್ಯಕ್ರಮವೂ ಪ್ರಾರಂಭವಾಗಿತ್ತು.

ಐಸಮ್ಮಳ ಮಾತಿನ ಬಾಣಕ್ಕೆ ತತ್ತರಿಸಿದ್ದ ಪೋಕರ್ ಬ್ಯಾರಿಯನ್ನು ಯುವಕರು ಓಡದಂತೆ ತಡೆದಿದ್ದರಿಂದ ವೇದಿಕೆ ಮೇಲೆ ತಲೆತಗ್ಗಿಸಿ ಕೂತಿದ್ದ. ಮತ್ತೆ ಸಾವರಿಸಿಕೊಂಡು ಎದ್ದ ಐಸಮ್ಮ ನಿಂತಲ್ಲೇ ಕಲ್ಲಾಗಿದ್ದ ಉಸ್ತಾದರ ಭುಜವನ್ನು ಹಿಡಿದು ಅಲುಗಾಡಿಸಿ ಗದ್ಗದಿತಳಾಗಿ ಅರಚಾಡಿದಳು “ಉಸ್ತಾದರೇ ಆತ್ಮಹತ್ಯೆ ಮಾಡಿದವರು ಧರ್ಮಭ್ರಷ್ಟರಾಗಿ ಸಾಯುತ್ತಾರೆ. ಅವರಿಗೆ ರೌರವ ನರಕ ಶಿಕ್ಷೆ ಕಾದಿದೆ ಎಂದಿರಲ್ಲಾ...? ಮಸೀದಿಯ ಅಧ್ಯಕ್ಷನಾಗಿ ಊರಿಗೇ ಬುದ್ಧಿ ಹೇಳಿ ತಿದ್ದಬೇಕಾಗಿದ್ದ ಈ ಪೋಕರ್ ಬ್ಯಾರಿಯೇ ನನ್ನ ಮಗಳ ಆತ್ಮಹತ್ಯೆಗೆ ಕಾರಣ. ಆತ್ಮಹತ್ಯೆಗೆ ಕಾರಣರಾದವರಿಗೆ ಯಾವ ಶಿಕ್ಷೆ...? ಅತ್ಯಾಚಾರಿಗಳಿಗೆ ಯಾವ ಶಿಕ್ಷೆ.... ಹೇಳಿ ಉಸ್ತಾದರೇ ಹೇಳಿ...”

■ ಇಸ್ಮತ್ ಫಜೀರ್



ಯೋಗೇಶ್ ಮಾಸ್ಟರ್
ಪುರಾಣದ ಹೂರಣ

ನಿರ್ಲಜ್ಜೇಶ್ವರ ಕೊಂತಪ್ಪ

ಲಜ್ಜೆಯೆಂಬುದು ಹುಟ್ಟಿರಬಹುದಾದ ಬಗೆಯನ್ನು ಗಮನಿಸುವುದೂ ಮತ್ತು ಅದರ ಮೂಲವನ್ನು ಶೋಧಿಸುವುದು ಅಷ್ಟೇನೂ ಸುಲಭವೇನಲ್ಲ. ಲಜ್ಜೆ ಎಂದರೆ ಏನು ಎಂಬುದನ್ನು ವ್ಯಾಖ್ಯಾನಿಸಲು ಕಷ್ಟವಾಗುತ್ತದೆ. ಲಜ್ಜೆ ಎಂಬುದು ವ್ಯಕ್ತಿಯಿಂದ ಹುಟ್ಟುತ್ತದೆಯೇ ಅಥವಾ ಸಮಾಜದ ಧೋರಣೆಯಿಂದಾಗಿ ರೂಪುಗೊಳ್ಳುತ್ತದೆಯೇ ಎಂಬುದನ್ನು ಗಮನಿಸಿದರೆ ಕೋಳಿ ಮೊದಲೋ ಮೊಟ್ಟೆ ಮೊದಲೋ ಕಥೆ ಎನಿಸುತ್ತದೆ.

ಲಜ್ಜೆ ಎಂಬುದು ಬಾಲ್ಯಾವಸ್ಥೆಯಲ್ಲಿ ನಮಗಿರಲಿಲ್ಲ ಎಂಬುದನ್ನು ನೆನಪಿಸಿಕೊಂಡಂತೆ ಸಮಾಜದ ಅಥವಾ ನಾಗರಿಕತೆಯ ಬಾಲ್ಯಾವಸ್ಥೆಯಲ್ಲಿಯೂ ಲಜ್ಜೆ ಇದ್ದಿರಲಿಲ್ಲವೆಂಬುದನ್ನು ಗುರುತಿಸಬಹುದು.


ಮುಗ್ಧಾವಸ್ಥೆ ಅಥವಾ ಮುಕ್ತ ಮನೋಭಾವದಲ್ಲಿ ಇಲ್ಲದಂತಹ ಲಜ್ಜೆಯು ಕ್ರಮೇಣ ಸಮಾಜದಿಂದ ಆರೋಪಿತವಾಗುತ್ತದೆ. ತನ್ನ ಬೆತ್ತಲೆಯ ಬಗ್ಗೆ ಯಾವುದೇ ಲಜ್ಜೆಯೂ ಇಲ್ಲದ ಮಗುವಿಗೆ, ತನ್ನದೇ ಆದ ಆ ಬೆತ್ತಲನ್ನು ವ್ಯಕ್ತಗೊಳಿಸಬಾರದು ಎಂದು ಶಿಕ್ಷಣ ನೀಡುತ್ತೇವೆ. ಅದಕ್ಕೆ ಕಾರಣಗಳು ಅದೇನೇ ಇರಲಿ, ಸಹಜವಾಗಿ ಇಲ್ಲದಿರುವಂತಹ ಲಜ್ಜೆಯನ್ನು ಅಭ್ಯಾಸ ಮಾಡಿಸುತ್ತೇವೆ. ನಂತರ ರೂಢಿಗತವಾದ ಅದೇ ಲಜ್ಜೆ ಸಹಜವೆನ್ನುವಷ್ಟರಮಟ್ಟಿಗೆ ವ್ಯಕ್ತಿಯಲ್ಲಿ ಹಾಸುಹೊಕ್ಕಾಗುತ್ತದೆ.

ಲಜ್ಜಾಗೌರಿ

ಭೂಮಿಯ ಫಲವತ್ತತೆಯನ್ನು ಸಂಕೇತಿಸುವ, ಮಾತೃತ್ವದ ಪ್ರಾಧಾನ್ಯತೆಯನ್ನು ಅನುಮೋದಿಸುವ ಲಜ್ಜಾಗೌರಿಯ ತೊಡೆಗಳನ್ನು ಅರಳಿಸಿಕೊಂಡು ಕಾಲುಗಳನ್ನು ಮೊಳಕಾಲಲ್ಲಿ ಮಡಿಸಿ ಯೋನಿಯನ್ನು ತೋರಿಸಿಕೊಂಡು ಕುಳಿತಿರುವ ವಿಗ್ರಹಗಳನ್ನು ನೋಡಿದಾಗ, ನಿರ್ಲಜ್ಜವಾಗಿರುವ ಈ ಶಿಲ್ಪಕ್ಕೆ ಲಜ್ಜಾಗೌರಿಯೆಂದೇಕೆ ಕರೆದರು ಎಂದು ಬಹು ಯೋಚಿಸುತ್ತೇನೆ.

ಪುರುಷನೂ ಮಗುವಿನ ಜನನಕ್ಕೆ ಕಾರಣನು ಎಂಬ ವಿಷಯವು ಅರಿವಿಗೆ ಬರುವ ಮುನ್ನ ಹೆರುವುದು ಸ್ತ್ರೀಯ ಸ್ವಾಭಾವಿಕ ಪ್ರಕ್ರಿಯೆ ಎಂದು ಭಾವಿಸಿದ್ದ ಆದಿಮ ಕಾಲದಲ್ಲಿ ಯೋನಿಯೇ ಜೀವಸೃಷ್ಟಿಯ ಮೂಲ ಎಂದು ಭಾವಿಸಿದ್ದರು. ಆಗ ಯೋನಿಯನ್ನು ಅತ್ಯಂತ ಮಾನ್ಯತೆಯಿಂದ ಕಾಣುತ್ತಿದ್ದರು. ಮಾತೃ ಪ್ರಧಾನ ಕುಟುಂಬದ ಪದ್ಧತಿಯೂ ಆಗಿಂದಲೇ ಆರಂಭವಿದ್ದಿರುತ್ತದೆ. ಶಿಶುವಿನ ಜನನಕ್ಕೆ ಪುರುಷನ ಕೊಡುಗೆಯೂ ಮನವರಿಕೆಯಾದ ಮೇಲೆ ಪುರುಷನ ಅಂಗವಾದ ಶಿಶ್ನಕ್ಕೂ ಮಾನ್ಯತೆ ದೊರಕಿತ್ತು. ಯೋನಿ ಮತ್ತು ಶಿಶ್ನ ಈ ಎರಡೂ ಲಿಂಗಗಳಿಗೆ ಮಾನ್ಯತೆ ದೊರೆತಾದ ಮೇಲೆ ತಂತ್ರವಿದ್ಯೆಯು ತಾತ್ವಿಕವಾಗಿ ಇನ್ನೂ ಮುಂದುವರೆದಿತ್ತು. ಸ್ತ್ರೀ ಪುರುಷರ ಸಮಾಗಮದಿಂದ, ಯೋನಿ ಮತ್ತು ಲಿಂಗಗಳ ಕೂಟದಿಂದ ಉಂಟಾಗುವ ಶಕ್ತ್ಯೋತ್ಪನ್ನದ ವೈಶಿಷ್ಟ್ಯವನ್ನೂ ಪ್ರಾಧಾನ್ಯತೆಯನ್ನೂ ಕಂಡುಕೊಂಡರು. ತಂತ್ರಸಾಧಕರು ಸ್ಮಶಾನವಾಸಿಗಳಾಗಿದ್ದವರು, ಸಂಸಾರಿಗಳಲ್ಲದವರು ತಮ್ಮ ಸಾಧನೆಗಳಲ್ಲಿ ಅವಶ್ಯವಾಗಿ ಒಂದಾದ ಮೈಥುನವನ್ನು ಪಡೆಯಲು ತಮ್ಮ ಜೊತೆಗೆ ಕೂಡಲು ಮುಕ್ತವಾಗಿ ಸಮ್ಮತಿಸುವಂತಹ ಹೆಣ್ಣನ್ನು ಅವಲಂಬಿಸಲೇಬೇಕಾಗಿತ್ತು. ಆಗ ವಿವಾಹ ಪದ್ಧತಿಯಲ್ಲಿ ಬಂಧಿತರಾದಂತವರು ಅಥವಾ ಕನ್ಯತ್ವದ ಪಾವಿತ್ರ್ಯತೆಯನ್ನು ಆಚರಿಸುತ್ತಿದ್ದವರು ಈ ತಂತ್ರಸಾಧಕರಿಗೆ ಲಭ್ಯವಾಗುತ್ತಿರಲಿಲ್ಲ. ಆಗ ಅವರು ವೇಶ್ಯೆಯರನ್ನೇ ಆಶ್ರಯಿಸಬೇಕಾಗುತ್ತಿತ್ತು. ಶಿವ ಮತ್ತು ಶಕ್ತಿಯ ಐಕ್ಯ ಸಾಧನೆ ಮಾಡುತ್ತಿದ್ದಂತಹ ತಾಂತ್ರಿಕ ಪುರುಷ ಸಾಧಕರಿಗೆ ಸಹಜವಾಗಿಯೇ ಹೆಣ್ಣಿನ ಕುರಿತು, ಆಕೆಯ ಯೋನಿಯ ಬಗ್ಗೆ ಗೌರವ ಭಾವನೆಯಿತ್ತು, ಅದರಲ್ಲೂ ಅವರ ಅತ್ಯಗತ್ಯವಾದ ಮೈಥುನಕ್ಕೆ ಸಮ್ಮತಿಸುತ್ತಿದ್ದ ವೇಶ್ಯೆಯರ ಮೇಲೆ ಅವರಿಗೆ ಖಂಡಿತವಾಗಿಯೂ ಗೌರವವಿತ್ತು. ಹಾಗೆಯೇ ಅವರು ಸಾಧನೆಯ ಸಮಯದಲ್ಲಿ ವೇಶ್ಯೆಯನ್ನು ಕೂಡುವ ಮುನ್ನ ಆಕೆಯ ಯೋನಿಯನ್ನು ಪೂಜಿಸುತ್ತಿದ್ದ ಕ್ರಮವೂ ವಿವಿಧ ಗ್ರಂಥಗಳಲ್ಲಿ ಉಲ್ಲೇಖವಾಗಿವೆ. ಆಕೆಯನ್ನು ಕೂಡುವ ಆ ಸಾಧನೆಯ ಕ್ರಮದ ತಾತ್ವಿಕ ದೃಷ್ಟಿ ಅಥವಾ ಭಾವದಂತೆ ಸಾಧಕ ಸಾಕ್ಷಾತ್ ಶಿವನೇ ಅಥವಾ ಶಂಕರನೇ ಆದ ಪಕ್ಷದಲ್ಲಿ, ಸಾಧನೆಯ ಸಮಯದಲ್ಲಿ ಯೋನಿಯನ್ನು ಕರಣವನ್ನಾಗಿ ಆತನಿಗೆ ಒದಗಿಸುವ ಹೆಣ್ಣು ಅಥವಾ ವೇಶ್ಯೆ ಸಾಕ್ಷಾತ್ ದೇವಿ ಅಥವಾ ಗೌರಿಯಾಗಿರುತ್ತಿದ್ದಳು. ಆ ಹೆಣ್ಣಿನಲ್ಲಿ ಯಾವುದೇ ವರ್ಣಭೇದವಿರಲಿಲ್ಲ, ಸ್ತ್ರೀ ಎಂದರೆ ಸ್ತ್ರೀ ಅಷ್ಟೇ. ಆದರೂ ಮಾತಂಗಿಯೇ ಮೊದಲಾದ ಪಂಚಮ ವರ್ಣದ ಸ್ತ್ರೀಯರ ಉಲ್ಲೇಖಗಳು ತಂತ್ರ ಸಾಧನೆಯ ಗ್ರಂಥಗಳಲ್ಲಿ ಕಾಣುತ್ತವೆ. ಅದೂ ಕೂಡ ಲೌಕಿಕ ಸುಖಾಪೇಕ್ಷೆಗೆ ಅಲ್ಲ ಎಂಬುದರ ನೇರ ಸೂಚಕವಾಗಿ ಲಜ್ಜಾಗೌರಿಯ ಮುಖದ ಸ್ಥಳದಲ್ಲಿ ಅರಳಿರುವ ತಾವರೆಯನ್ನು ಮೂಡಿಸುತ್ತಿದ್ದರು.

ಕುಂಡಲಿನಿ ಶಕ್ತಿಯು ಲೌಕಿಕದಿಂದ ಅಲೌಕಿಕವಾದಂತಹ ಸಾಫಲ್ಯವನ್ನು ಪಡೆಯುವ ಅಥವಾ ಕಾಮ ಎಂಬ ಸಹಜ ಮೂಲ ವಾಸನೆಯಿಂದ ಸಮಾಧಿ ಎಂಬ ನಿಷ್ಕಾಮಪೂರ್ಣ ಸ್ಥಿತಿಯನ್ನು ಪಡೆಯುವ ಶಕ್ತಿ ಸಂವಹನದ ಮಾರ್ಗವು ಏಳು ಚಕ್ರಗಳನ್ನು ಅಥವಾ ಶರೀರದಲ್ಲಿರುವ ಕೇಂದ್ರಗಳನ್ನು ಹಾದು ಹೋಗಬೇಕಾಗುತ್ತದೆ ಎಂದು ತಂತ್ರ ಸಾಧನೆ ಅಥವಾ ರಾಜಯೋಗವು ಹೇಳುತ್ತದೆ. ಶರೀರದಲ್ಲಿರುವ



ಆ ಶಕ್ತಿ ಕೇಂದ್ರಗಳೆಂದರೆ ಲೈಂಗಿಕಾಂಗದ ಕೇಂದ್ರದಲ್ಲಿ ಬೇರಿನ ಹಾಗಿರುವ ಮೂಲಾಧಾರ ಚಕ್ರ. ನಂತರ ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಅಜ್ಞಾ ಮತ್ತು ಕೊನೆಯದಾಗಿ ಸಹಸ್ರಾರ ಚಕ್ರವೆಂಬ ಅಂತಿಮ ಕೇಂದ್ರ. ಅಲ್ಲಿಗೆ ಯೋಗ ಸಾಧನೆಯ ಸಂಪೂರ್ಣ ಸಿದ್ಧಿ. ಆ ಸಹಸ್ರಾರವನ್ನು ಅರಳಿರುವ ಕಮಲದ ಸಂಕೇತದ ಮೂಲಕ ಬಿಂಬಿಸುತ್ತಾರೆ.


ಪುರುಷನೊಬ್ಬ ತಾನೇ ಶಿವನಾಗಿ ತೊಡಗುವ ಈ ಯೋಗ ಸಾಧನೆಗೆ ಅಗತ್ಯವಿರುವ ಮೈಥುನಕ್ಕೆ ಒದಗುವ ವೇಶ್ಯೆಯು ಕೇವಲ ಲೌಕಿಕ ಉಪಭೋಗದ ವಸ್ತುವಲ್ಲ, ಬದಲಿಗೆ ಪಾರಮಾರ್ಥ ಸಾಧನೆಯಾದ ಸಹಸ್ರಾರಕ್ಕೆ ತಲುಪಲಗತ್ಯವಿರುವಂತಹ ಶಕ್ತಿಯ ಭಾಗ.

ಲಂಜೆ ಎಂಬ ಪದಕ್ಕೆ ವೇಶ್ಯೆ ಎಂಬ ಅರ್ಥವಿದೆ. ಮರಾಠಿಯಲ್ಲಿಯೂ ಕೂಡ ಲಂಜೆ, ಲಂಜಾ ಪದಗಳಿಗೆ ವ್ಯಭಿಚಾರಿಣಿ ಎಂಬ ಅರ್ಥವಿದೆ. ಸಂಸ್ಕೃತದಲ್ಲಿ ಲಜ್ಜಾ ಮತ್ತು ಲಂಜಿಕಾ ಎಂಬ ಪದಗಳಿಗೆ ವೇಶ್ಯೆ ಮತ್ತು ಲಕ್ಷ್ಮಿ ಎಂದು ಅರ್ಥಗಳಿವೆ. ಅದೇರೀತಿ ತೆಲುಗಿನಲ್ಲಿಯೂ ಲಂಜಾ ಎಂದರೆ ಸೂಳೆಯೆಂದೇ ಅರ್ಥ.

ಯೋನಿ ಪೂಜೆಯ ಪಳೆಯುಳಿಕೆ

ತಂತ್ರ ಸಾಧಕನಾದ ಪುರುಷನಿಂದ ಆಧ್ಯಾತ್ಮಿಕ ಸಾಧನೆಗೆ ಪೂಜೆಗೊಳಗಾಗುತ್ತಿದ್ದ ವೇಶ್ಯೆಯು ಅವನಿಗೆ ಆಗ ಶಕ್ತಿ ರೂಪಿಣಿಯಾದ ಕಾರಣದಿಂದ ಲಜ್ಜಾಗೌರಿಯಾದಳು. ಅವಳು ಯೋನಿಪೂಜೆಗೊಳಗಾಗುವ ಭಂಗಿ ಪುರಾತನ ವಿಶ್ವಯೋನಿಯ ಮಾತೃಪ್ರಧಾನ ತತ್ವಕ್ಕೂ, ತಾಂತ್ರಿಕ ಪುರುಷರ ಆರಾಧ್ಯ ವಸ್ತುವಿಗೂ ಪ್ರತಿಮೆಯಾಯಿತು. ನಾನೊಮ್ಮೆ ನಮ್ಮ ಸಾಹಿತಿ ಮಿತ್ರರೊಬ್ಬರಿಂದ ಈ ಯೋನಿ ಆರಾಧನೆಗೆ ಸಂಬಂಧಪಟ್ಟ ವಿಷಯವೊಂದನ್ನು ಕೇಳ್ಪಟ್ಟೆ. ಅವರ ಪರಿಚಿತರೊಬ್ಬರ ಮನೆಯಲ್ಲಿ ವಯಸ್ಸಾದ ಕುಟುಂಬದ ಹಿರಿಯ, ಯಾವುದೇ ಒಳ್ಳೆಯ ಕೆಲಸಕ್ಕೆ ಹೋಗುವ ಮುನ್ನ ತನ್ನ ಹೆಂಡತಿಯ ಯೋನಿಯನ್ನು ದರ್ಶಿಸಿ, ಸ್ಪರ್ಶಿಸಿ, ನಮಸ್ಕರಿಸಿಕೊಂಡು ಹೋಗುವರೆಂದು. ಇದೊಂದು ಯೋನಿಯಾರಾಧನೆಯ ಪಳೆಯುಳಿಕೆಯೆಂದು ನಾನು ಭಾವಿಸುತ್ತೇನೆ.

ಸರಿ, ವೇಶ್ಯೆ ಎಂಬ ಅರ್ಥವುಳ್ಳ ಲಜ್ಜಾ ಎಂಬುದು





ಸಂಕೋಚ ಅಥವಾ ನಾಚಿಕೆ ಎಂಬಂತಹ ಅರ್ಥಕ್ಕೆ ಹೇಗೆ ಸೇರಿಬಂತೆಂಬುದನ್ನು ಯೋಚಿಸಲು ತೊಡಗಿದರೆ ಮತ್ತೆ ವೇಶ್ಯೆಯ ಬಳಿಗೇ ಹೋಗಬೇಕಾಗುತ್ತದೆ.

ನಾಚು, ಸಂಕೋಚ ಮತ್ತು ಲಜ್ಜೆ

ಸಂಕೋಚ, ಸಂಕೋಚನ ಎಂದರೆ ಕುಗ್ಗುವುದು, ಮುದುಡುವುದು. ನಾಚುವುದು ಎನ್ನುವುದನ್ನು ಸಕಾರಾತ್ಮಕವಾಗಿಯೂ ಮತ್ತು ನಕಾರಾತ್ಮಕವಾಗಿಯೂ ಬಳಸುತ್ತೇವೆ. ನಾಚಿಕೆ ಇಲ್ಲದವನು ಎಂದಾಗ ನಕಾರಾತ್ಮಕವಾಗಿ ಕಂಡರೆ, ನಾಚುವುದು ತನಗಿಂತ ಮೇಲಾಗಿರುವುದಕ್ಕೆ ಬಾಗುವ ರೀತಿಯೂ ಆಗುತ್ತದೆ. ಅವಳ ಕೆಂಪು ಕೆನ್ನೆಗಳನ್ನು ಕಂಡು ತಾವರೆಯ ಕೆಂಪು ನಾಚಿತೆಂದಾಗ, ತಾವರೆಯ ಬಣ್ಣದ ಸಹಜವಾದ ವೈಭವವು ಆಕೆಯ ಕೆಂಪಾದ ಕೆನ್ನೆಗಳ ಮುಂದೆ ಮಂಕಾಯಿತು ಎಂದು ರೂಪಕದಲ್ಲಿ ಬಣ್ಣಿಸಲಾಗುತ್ತದೆ. ಅದೇರೀತಿ ಒಬ್ಬನ ಘನತೆ ಮತ್ತು ಆತ್ಮಗೌರವವನ್ನು ಕುಗ್ಗಿಸುವಂತಹ ಅಪಮಾನಕ್ಕೆ ಒಳಗಾಗುವುದೋ ಅಥವಾ ಒಳಪಡಿಸುವುದೋ ಆದಾಗಲೂ ನಾಚಿಕೆಗೆಟ್ಟ ಸ್ಥಿತಿ ನಿರ್ಮಾಣವಾಗುತ್ತದೆ.

ವೇಶ್ಯೆಯು ನಾಚಿಕೊಂಡರೂ ಅದನ್ನು ಸಂಕೋಚವೆಂದೆನ್ನಲಾಗದೇ ಅದನ್ನು ವಯ್ಯಾರವಾಗಿ ವರ್ಣಿಸುವಷ್ಟು ಆಕೆಯ ಮುಕ್ತತೆಯನ್ನು ಗುರುತಿಸಲಾಗುತ್ತದೆ. ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಅತ್ಯಂತ ನಾಚಿಕೆಗೊಳಗಾಗುವ ಅಂಶವೆಂದರೆ ಲೈಂಗಿಕತೆಯ ವಿಷಯದಲ್ಲಿ. ಅಂತಹ ಲೈಂಗಿಕತೆಯಲ್ಲಿಯೇ ನಾಚಿಕೆಗೆ ಒಳಗಾಗದ ಆಕೆಯ ಮುಂದೆ ಮಿಕ್ಕವರೆಲ್ಲರೂ ಅಂತಹ ಮುಕ್ತತೆಯ ವಿಷಯದಲ್ಲಿ ನಾಚಬೇಕು. ಹಾಗಾಗಿ ಅಂತಹ ನಾಚುವಿಕೆಗೆ ಸಮಾನಾರ್ಥಕವಾಗಿ ಲಜ್ಜಾ ಅಥವಾ ಲಜ್ಜೆಯೆಂಬುದೇ ಬಂದಿತೇ? ಒಂದು ಜಿಜ್ಞಾಸೆ. ಒಟ್ಟಾರೆ ಈಗ ನಾವು ಲಜ್ಜೆಯನ್ನು ಸಂಕೋಚ ಮತ್ತು ನಾಚಿಕೆಗೆ ಸಮಾನಾರ್ಥಕವಾಗಿ ಬಳಸುತ್ತೇವೆ ಎಂಬುದು ನಿರ್ವಿವಾದ ಮತ್ತು ರೂಢಿ.


ಅದೇನೇ ಇರಲಿ, ಲಜ್ಜೆ ಎಂಬುದು ಸಾಮೂಹಿಕವಾಗಿಯೂ ಮತ್ತು ವ್ಯಕ್ತಿಗತವಾಗಿಯೂ ಇರುವುದನ್ನು ಗಮನಿಸಿದರೆ, ವ್ಯಕ್ತಿಯಿಂದ ಸಮೂಹಕ್ಕೆ ಬಂತು ಎನ್ನುವುದಕ್ಕಿಂತ ಸಮೂಹದಿಂದಲೇ ವ್ಯಕ್ತಿಗೆ ಆರೋಪಿತವಾಗಿದೆ ಎಂದೇ ಅನ್ನಿಸುತ್ತದೆ. ಮುಕ್ತವಾಗಿ ಮಕ್ಕಳು ನಗ್ನಾವಸ್ಥೆಯಲ್ಲಿರುವಾಗ ಅದನ್ನು ನಾಚಿಗೇಡು, ನಾಚಿಗೇಡು ಎಂದೆನ್ನುವಂತೆ ಶೇಮ್ ಶೇಮ್ ಎಂದಾಗ ಪ್ರಕೃತಿಯನ್ನೇ ಅಪಮಾನಿಸುವವರನ್ನು ನೋಡುವ ಹಾಗೆ ನನಗೆ ಭಾಸವಾಗುತ್ತದೆ. ತಮ್ಮ ನಗ್ನತೆಯನ್ನು ನಾಚಿಗೇಡಿನ ವಿಷಯವೆಂದು ಭಾವಿಸಿ ನಿಧಾನವಾಗಿ ನಾಚಿಕೆಯನ್ನು ಅಭ್ಯಾಸ ಮಾಡಿಕೊಳ್ಳುತ್ತಾರೆ. ಹೆಣ್ಣಿಗೆ ನಾಚಿಕೆ ಭೂಷಣವೆಂದೋ, ಲಜ್ಜೆಯು ಸಹಜವೆಂದೋ ಹೇಳಿದಾಗ ಪ್ರಕೃತಿಯ ತತ್ವವನ್ನು ಆರೋಪಿಸಲ್ಪಡುವಂತ ಅವಳು ಹುಟ್ಟುವಾಗಲೇ ಹೇಗೆ ಲಜ್ಜಿತಳಾಗಿರುತ್ತಾಳೆ ಎಂಬ ಪ್ರಶ್ನೆಯೇಳುತ್ತದೆ.

ಪ್ರಕೃತಿ ಖಂಡಿತವಾಗಿಯೂ ನಿರ್ಲಜ್ಜವಾದದ್ದು. ನಾಚಿಕೆ ಎಂಬುದರ ಲವಲೇಶವೂ ಇಲ್ಲದಿರುವುದು. ಆದರೂ ಹೆಣ್ಣಿಗೆ ನಾಚಿಕೆಯನ್ನು ಗಂಡು ಕವಿಗಳೇಕೆ ಹೊರಿಸಿದರು ಎಂದು ನಾನಾ ಬಗೆಯಲ್ಲಿ ಯೋಚಿಸುವ ಅಗತ್ಯವಿಲ್ಲದೇ ಹೇಳಬಹುದಾದರೂ, ಹೆಣ್ಣುಗಳೇಕೆ ಲಜ್ಜೆಯನ್ನು ಅಭಿನಯಿಸುವ ಕಲಾವಿದೆಯಾದರು ಎಂದು ಹೇಳುವುದು ಬಹು ಕಠಿಣವಾಗಿ ತೋರುವುದು.

ಪ್ರಾಣಿಗಳಿಗೆ ಇಲ್ಲದ ಲಜ್ಜೆ ಮನುಷ್ಯನಿಗೆ ಎಂದರೆ ಇದು ಮಾನವ ನಿರ್ಮಿತವೇ ಹೊರತು ನೈಸರ್ಗಿಕವಲ್ಲ.

ಕೊಂತಪ್ಪನ ಕಥೆ

ಕರ್ನಾಟಕದ ಕಿಕ್ಕೇರಿಯಲ್ಲಿ ಕಿಕ್ಕೇರಮ್ಮನ ಜಾತ್ರೆ ಮಾಡುತ್ತಾರೆ. ಪ್ರೇಮಕವಿ ಕೆ.ಎಸ್.ನರಸಿಂಹ ಸ್ವಾಮಿಯವರ ತವರೂರು ಕಿಕ್ಕೇರಿ. ಇಲ್ಲಿ ನಡೆಯುವ ವಸಂತ ಹಬ್ಬದಲ್ಲಿ ಈ ಕಿಕ್ಕೇರಮ್ಮನ ಜಾತ್ರೆಯಂತೆ. ಇದರಲ್ಲಿ ಬಹಳ ಶ್ರದ್ಧಾಭಕ್ತಿಯಿಂದ ಮರದಲ್ಲಿ ಮಾಡಿರುವ ಶಿಶ್ನವನ್ನು ಕೊಂತಪ್ಪನೆಂದು ಪೂಜಿಸಿ ಅದನ್ನು ದೇವರ ಮುಂದೆ ಗುಡ್ಡಪ್ಪನ ಸೊಂಟಕ್ಕೆ ಕಟ್ಟಿಕೊಂಡು, ಕಾಲಿಗೆ ಗೆಜ್ಜೆ, ತಲೆಗೆ ಕೆಂಪು ಪೇಟ, ಮೈಗೆ ಕೆಂಪು ಜರತಾರಿ ಧರಿಸಿ ಕುಣಿಯುತ್ತಾನೆ. ಈ ಕೊಂತಪ್ಪ ಊರಿನ ಬೀದಿಬೀದಿಗಳಲ್ಲಿ ಸುತ್ತುತ್ತಾ ಜಿಗಿಜಿಗಿದಾಡುತ್ತಾ ಮೆರವಣಿಗೆ ಬರುತ್ತಾನೆ. ಅವನಿಗೆ ಸಹ ಭಂಟರೂ ಇರುತ್ತಾರೆ. ತುಂಬಾ ಸ್ವಾರಸ್ಯಕರವಾದ ವಿಷಯವೆಂದರೆ, ದೇವಿ ಗುಡಿಯ ಹೆಬ್ಬಾಗಿಲಿಗೆ ಬಂದಾಗ ಕೊಂತಪ್ಪ ಊರಿನ ಪ್ರಮುಖರೊಂದಿಗೆ ಸೇರಿಕೊಂಡು ನಿರ್ಲಜ್ಜೆಯಿಂದ ವಿವಿಧ ಸಮುದಾಯದವರ ಗುಪ್ತಾಂಗಗಳನ್ನು ವರ್ಣಿಸುತ್ತಾ ದೇವರನ್ನು ಜರಿಯುತ್ತಾರಂತೆ. ಈ ಮರದ ಕೊಂತಪ್ಪನನ್ನು ನೋಡಿದರೆ ಮಕ್ಕಳಾಗುತ್ತವೆ ಎಂಬ ನಂಬುಗೆ ಇದೆಯಂತೆ. ಈ ಆಚರಣೆಯು ಪೆರುಮಾಳ್ ಮುರುಗನ್ ತಮ್ಮ 'ಅರ್ಧನಾರೀಶ್ವರ' ಕೃತಿಯಲ್ಲಿ ವರ್ಣಿಸಿರುವಂತಹ ರಥ ಯಾತ್ರೆಯ ಸಮಯದಲ್ಲಿ ಆಗ ಇದ್ದಂತಹ ಕೂಡಿಕೆಯ



ಆಚರಣೆಯ ಪಳೆಯುಳಿಕೆ ಆಗಿದ್ದರೂ ಆಶ್ಚರ್ಯವೇನಿಲ್ಲ.

ದೇವರು ಬಯಸಿದ್ದು ಬೆತ್ತಲಾಗಿರಲು

ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿನ ಜೆನಿಸಿಸ್ ಅಥವಾ ಆದಿಕಾಂಡದಲ್ಲಿನ ಆ್ಯಡಂ ಮತ್ತು ಈವ್ ಪ್ರಕರಣವು ನಿರ್ಲಜ್ಜೆಯಿಂದ ಕೂಡಿರುವುದು ನೈಸರ್ಗಿಕ ಎಂದು ಬಹು ಸರಳವಾಗಿ ವಿವರಿಸುತ್ತದೆ. ದೇವರ ಸೃಷ್ಟಿಯಾದ ಆದಾಮನೂ ಮತ್ತು ಹವ್ವ ಸಂಪೂರ್ಣ ನಗ್ನವಾಗಿದ್ದು ಸಹಜವಾಗಿ ಸ್ವರ್ಗದ ತೋಟದಲ್ಲಿ ತಿರುಗಾಡಿಕೊಂಡಿರುತ್ತಾರೆ. ನಗ್ನತೆಯು ನಗ್ನವಾಗಿರುವುದು ಎಂದು ತಿಳಿಯುವ ಜ್ಞಾನವೇ ಅನೈಸರ್ಗಿಕ ಅಥವಾ ಮುಗ್ಧತೆಗೆ ವಿರುದ್ಧ ಎಂಬುದನ್ನು ಆ ಕಥೆ ಧ್ವನಿಸುತ್ತದೆ. ಅಂತಹುದೊಂದು ಜ್ಞಾನವು ಬೇಕಿಲ್ಲದ್ದು, ಮುಗ್ಧತೆಯ ಹೊರತಾದದ್ದು. ಮುಗ್ಧತೆಯ ಹೊರತಾದ ಅದು ಎಂತಹ ಜ್ಞಾನವಾದರೂ ಕಶ್ಮಲವೇ ಅಥವಾ ಕಳಂಕಿತವೇ ಎಂದೂ ಅದು ಧ್ವನಿಸುತ್ತದೆ. ಆದರೆ ಸರ್ಪವು ಅವರನ್ನು ಪ್ರಚೋದಿಸುತ್ತದೆ. ಜ್ಞಾನವೃಕ್ಷದ ಫಲವನ್ನು ತಿಂದರೆ ಒಳಿತು ಕೆಡಕುಗಳ ಅರಿವನ್ನು ಪಡೆಯುವಿರಿ ಎಂದು ಹಣ್ಣನ್ನು ತಿನ್ನಲು ಪ್ರೇರೇಪಿಸುತ್ತದೆ. ಅದರಂತೆ ಹವ್ವ ಅದನ್ನು ತಿನ್ನುವಳು. ತಾನು ಮೊದಲು ನಾಚಿಕೆ ಹೊಂದುವಳು. ನಂತರ ಆದಾಮನೂ ಅದನ್ನು ಸೇವಿಸಿ ತಾನು ಬೆತ್ತಲಾಗಿರುವುದರ ಬಗ್ಗೆ ಸಂಕೋಚಕ್ಕೆ ಒಳಗಾಗುವನು. ದೇವರು ಕರೆದಾಗ ಬೆತ್ತಲಾಗಿದ್ದೇವೆಂದು ಅವಿತುಕೊಳ್ಳುತ್ತಾರೆ. ದೇವರಿಗೆ ಇವರಿಗೆ ಬೆತ್ತಲಾಗಿದ್ದಾರೆಂದು ಹೇಗೆ ತಿಳಿಯಿತು ಎಂಬ ಪ್ರಶ್ನೆ ಮೂಡುತ್ತದೆ. ತಾನು ಬೆತ್ತಲಾಗಿದ್ದೇವೆ ಎಂದು ತಿಳಿಯುವ ಕಾಲಕ್ಕೆ ಅಲ್ಲಿ ಮುಗ್ಧತೆಯೆಂಬುದು ಹೋಯಿತೆಂಬಂತೆ ಕಥೆ ತಿಳಿಸುತ್ತದೆ. ಮುಂದೆ ಯೇಸುವೂ ಕೂಡ ನೀವು ಮಕ್ಕಳಂತಾಗದಿದ್ದರೆ ನಿಮಗೆ ಸ್ವರ್ಗ ಎನ್ನುವುದಿಲ್ಲ ಎಂದು ಬೋಧಿಸುತ್ತಾನೆ.

ನಿರ್ಲಜ್ಜ ಸ್ಥಿತಿಯಲ್ಲಿರುವಂತಹ ಮುಕ್ತತೆ ಮತ್ತು ಮುಗ್ಧತೆಗಳು ಮಕ್ಕಳಿಗೆ ಸಹಜ ಮತ್ತು ಪ್ರಕೃತಿಯಲ್ಲಿ ಸ್ವಾಭಾವಿಕ.

ಸೂಳೆ ಸಂಕವ್ವಳ ನಿರ್ಲಜ್ಜೇಶ್ವರ


ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಅನುಭವ ಮಂಟಪದ ಗರಡಿಯಲ್ಲಿ ಸೂಳೆ ಸಂಕವ್ವ ಎಂಬ ಶಿವಶರಣೆಯು ನಿರ್ಲಜ್ಜೇಶ್ವರನನ್ನು ತನ್ನ ಇಷ್ಟದೈವವನ್ನಾಗಿ ಕಾಣುತ್ತಾಳೆ. ಸಂಕವ್ವ ಎಂಬ ವೇಶ್ಯೆ ಲಜ್ಜಾಗೌರಿಯಾಗಿದ್ದು ಲೋಕಾರೂಢಿಯಲ್ಲಿರುವ ತನ್ನ ಲಜ್ಜೆಯನ್ನೇ ತೊರೆದು ನಿರ್ಲಜ್ಜೇಶ್ವರನ ಪ್ರತಿಬಿಂಬಿಸುತ್ತಾಳೆ.

ನಿರ್ಲಜ್ಜೆಯೆಂದಾಕ್ಷಣವೇ ಮುಕ್ತತೆ ಮತ್ತು ಮುಗ್ಧತೆ ಎಂಬ ಸಹಜವಾದ ಮನಸ್ಥಿತಿಯ ಪರಿಕಲ್ಪನೆಯೇ ಮೂಡಲಿದ್ದು, ಈ ಸಮಾಜವು ಮುಕ್ತ ಮತ್ತು ತಾನು ಬೆತ್ತಲಾಗಿದ್ದೇನೆಂಬ ಅರಿವೇ ಇಲ್ಲದಂತಹ ಭಾವವಿದ್ದಲ್ಲಿ ಅದೇ ನಿರ್ಲಜ್ಜೇಶ್ವರನ ಸಮಾಜವೆಂದು ಭಾಸವಾಗುತ್ತದೆ. ಹಾಗೊಂದು ಕಲ್ಪನೆಯೇ ಅದ್ಭುತ!

ಮೈ ಮುಚ್ಚುವ ಬಟ್ಟೆಯಂತೆ, ಯಾವುದೇ ಮನಸ್ಥಿತಿಗೆ ಮತ್ತು ಸಹಜ ಭಾವನೆಗೆ ಲೋಕಾರೂಢಿಯ ಒಂದು ಸಮವಸ್ತ್ರವನ್ನು ಧರಿಸುವುದಾದರೂ ಏಕೆಂದರೆ ಕಂಡವರು ಅದೇನೆಂದಾರೋ ಎಂಬ ನಾಚಿಕೆಗೆ. ಕಾಣುವರ ಕಣ್ಣಿಗೆ ಇಂತೆಯೇ ಕಾಣಬೇಕೆಂಬ ಇರಾದೆಯೇ ಕೃತಕತೆಯನ್ನು ಹುಟ್ಟುಹಾಕುವುದು. ಅಂತಹ ಆಷಾಢಭೂತಿಗಳೊಂದು ಕಡೆಯಾದರೆ, ತಮ್ಮ ಮಾನಸಿಕ, ಭಾವನಾತ್ಮಕ ಮತ್ತು ಶಾರೀರಿಕ ಬೆತ್ತಲನ್ನು ಎಂತದ್ದೋ ಒಂದು ಅಮಲಿನಲ್ಲಿ ಬಹಿರಂಗಗೊಳಿಸುವ ಮಂದಿ ಇನ್ನೊಂದು ಕಡೆ. ಒಟ್ಟಾರೆ ಮುಗ್ಧತೆ ಮತ್ತು ಮುಕ್ತತೆ ಮಾತ್ರ ಎರಡೂ ಕಡೆ ನಾಪತ್ತೆ.

ಕರಗಳಿಗೆಟಕುವ ಕರಣಂಗಳ ಕರುಣಾದಿಂದುಪ ಯೋಗಿಸುತ್ತಾ, ಕಂದದ ಪಟ್ಟಿಯುಳ್ಳ ಕಂದನಾಗಿಯುಳಿಯುತ್ತಾ, ಕಮಂದದ ಕೈಮರವಾಗುವಂತ ಜೀವ ತಾನಾಗಿರಲು ಅದೆಷ್ಟು ಸೊಗಸು! ಆಗಾದರೂ ಕಂಡೀತೇ ನಿರ್ಲಜ್ಜೇಶ್ವರನ ಸಮಾಜವು. ■

ಗಾಂಪ ಜನರ ರಾಂಪ ಜೋಕುಗಳು




ಕಳೆದ ಸಂಚಿಕೆಯಲ್ಲಿ ದಿತೇಶ್ ಪೂಜಾರಿಯವರು ಬರೆದ ತಳವರ್ಗದಿಂದ ಬಂದ ಹೋಟೆಲ್ ಉದ್ಯಮಿ ಜೆಪ್ಪಿನ ಮೊಗರು ರಾಮಪ್ಪನವರ ಜೀವನಗಾಥೆ ಮನಮುಟ್ಟುವಂತಿತ್ತು.

ಮೊದಲಬಾರಿಗೆ ಅವರ ಜೋಕುಗಳನ್ನು ಕೇಳಿದಾಗ ಇದೆಂತಹ ಅನ್ಯಾಯ ಅಂತನ್ನಿಸಿದ್ದುಂಟು. ಕಷ್ಟದಿಂದ ಮೇಲೆ ಬಂದ ಜನಾನುರಾಗಿ ಹಾಗು ಕೊಡುಗೈ ದಾನಿಯಾದವನ ಹೆಸರಲ್ಲಿ ಅವರ ಹೆಂಡತಿಯ ಪಾತ್ರವೂ ಅಲ್ಲಲ್ಲಿ ಬರುವಂತೆ ಸಾಮಾನ್ಯದಿಂದ ಹಿಡಿದು ಅಶ್ಲೀಲತೆಯನ್ನು ಹೊಂದಿರುವ ಜೋಕುಗಳನ್ನು ಹೆಣೆಯಲು ಜನರಿಗೆ ಮನಸ್ಸಾದರೂ ಹೇಗೆ ಬಂತು ಅಂತನ್ನಿಸಿತ್ತು.

90ರ ಸುಮಾರಿಗೆ ಅವರ ಎರಡೂ ಹೊಟೇಲ್‌ಗಳಲ್ಲಿ ಹಲವು ಬಾರಿ ನಾನು ಊಟ ಮಾಡಿದ್ದೆ (87ರಲ್ಲೇ ಅವರು ತೀರಿಕೊಂಡಿದ್ದರು). ಹೆಚ್ಚಾಗಿ ಕೂಲಿ ಕಾರ್ಮಿಕರು ಮತ್ತು ಶ್ರಮಜೀವಿಗಳೇ ಅವರ ಹೊಟೇಲಿನಲ್ಲಿ ತುಂಬಿರುತ್ತಿದ್ದರು.

ಹಿಂದೆ ಚಾಲ್ತಿಯಿದ್ದಂತೆ ಜಿಲ್ಲೆಯ ಬಂಟರು ಇನ್ನಿತರರು ಹೋಗುವಂತೆ ಬಿಲ್ಲವರು ದೂರದ ಬೊಂಬಾಯಿಗೋ ಇನ್ನೆಲ್ಲಿಗೋ ಹೋಗಿ ಒಂದಷ್ಟು ಕಾಸುಮಾಡಿಕೊಳ್ಳಲು ನೋಡುತ್ತಿರುವಾಗ ರಾಮಪ್ಪರು ಸ್ವಂತ ಊರಿನಲ್ಲೇ ಯಶಸ್ವಿ



ಹೋಟೆಲ್ ಉದ್ಯಮ ನಡೆಸಿ ಮಾದರಿಯೆನಿಸಿಕೊಂಡಂತ ವರು. ಇವರಿಂದ ಸಹಾಯ ಪಡೆದವರಲ್ಲಿ ಕೇಂದ್ರಮಂತ್ರಿಗಳು, ಮುಖ್ಯಮಂತ್ರಿಗಳೆಲ್ಲ ಆಗಿ ಹೋದರೆ ಹೊರತು (ಪತ್ರಿಕೆಯೊಂದರಲ್ಲಿ ಬಂದ ಆವತ್ತಿನ ಬಂಗಾರಪ್ಪನವರ ಆಸ್ತಿ ವಿವರದಲ್ಲಿ ಕಾರು ಮಂಗಳೂರಿನ ರಾಮಪ್ಪನವರು ಕೊಟ್ಟಿದ್ದು ಎಂಬ ವಿವರಣೆ ನೋಡಿದ ನೆನಪು) ರಾಮಪ್ಪರು ಮಾತ್ರ ಅವರ ಕಣ್ಣೆದುರೇ ಆಗ್ಗದ ವಸ್ತು ಆಗುವುದನ್ನು ಮಾತ್ರ ಯಾರಿಂದಲೂ ತಡೆಯಲಾಗಲೇ ಇಲ್ಲ.

ಕಥೆಗಿಂತ ಹಾಸ್ಯ ಸನ್ನಿವೇಶಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಇರುವ ತುಳು ನಾಟಕ, ಸಿನಿಮಾಗಳಲ್ಲಿ ರಾಮಪ್ಪರ ಹೆಸರನ್ನು ದುರುಪಯೋಗಪಡಿಸಿಕೊಳ್ಳಲು ಆಗಾಗ ಯತ್ನಿಸಲಾಗುತ್ತಿತ್ತು. ಅಂತಹ ಇತ್ತೀಚಿನ ಸಿನಿಮಾವೊಂದು 'ರಾಂಪ' ಹೆಸರಲ್ಲೇ ಪ್ರಚಾರ ಪಡೆದು ಕೊನೆಗೆ ಸೋಂಪ ಹೆಸರಲ್ಲಿ ಬಿಡುಗಡೆಯಾಗಿತ್ತು.

ಯಾವ ಗಟ್ಟಿ ತಳಪಾಯವೂ ಇಲ್ಲದೆ ಕಷ್ಟಪಟ್ಟು ಪ್ರಾಮಾಣಿಕವಾಗಿ ದುಡಿದು ಮೇಲೆ ಬಂದ ರಾಮಪ್ಪರನ್ನು ಮಂಗಳೂರಿನ ಜನತೆ ಮಾದರಿಯನ್ನಾಗಿಸಿ ಮೆರೆಸುವುದನ್ನ ಬಿಟ್ಟು ಆಗ್ಗದ ಸರಕನ್ನಾಗಿಸಿ ಅವಮಾನಿಸುತ್ತಿರುವುದು ಅದು ತಮ್ಮನ್ನು ತಾವೇ ಅವಮಾನಿಸಿಕೊಂಡಂತಲ್ಲದೆ ಮತ್ತೇನು?


ಬಡತನದ ಹಿನ್ನೆಲೆಯ ಕೆಳವರ್ಗದ ಅನಕ್ಷರಸ್ಥನೊಬ್ಬ ತಮಗೆಲ್ಲ ದೊಡ್ಡ ಪ್ರತಿಸ್ಪರ್ಧಿಯಾಗಿ ಬೆಳೆಯುತ್ತಿರುವುದನ್ನು ಮಂಗಳೂರಿನ ಅನೇಕ ಕಣ್ಣುಗಳಿಗೆ ಸಹಿಸಿಕೊಳ್ಳಲಾಗಲಿಲ್ಲ (ಆಗ ಮಂಗಳೂರಿನಲ್ಲಿದ್ದ ಬೆರಳೆಣಿಕೆಯ ಕಾಂಟೆಸ್ಸಾ ಕಾರುಗಳಲ್ಲಿ ರಾಮಪ್ಪರದ್ದೂ ಒಂದು). ಮಕ್ಕಳಿಲ್ಲದ ರಾಮಪ್ಪರನ್ನು ಸುಲಭವಾಗಿ ವಾಮಮಾರ್ಗದಿಂದ ತುಳಿಯಹೊರಟ ಮೇಲ್ಜಾತಿ ಉದ್ಯಮಿಗಳ ಹಿಕ್ಮತ್ತು ತಿಳಿಯದ ಬಿಲ್ಲವರು ತಮ್ಮದೇ ಸಮುದಾಯದ ಧೀಮಂತ ವ್ಯಕ್ತಿತ್ವಕ್ಕೆ ಅಲ್ಲಲ್ಲಿ ಅವಮಾನ ಆಗುತ್ತಿರುವುದನ್ನು ಕಂಡೂ ಕಾಣದಂತೆ ಕುಳಿತಿರುವ ನಡೆಯೇ ಅತ್ಯಂತ ಆಶ್ಚರ್ಯಕರ.

ಎಲ್ಲೋ ಕೇಳಿಬರುವ ಸಂಬಂಧವೇ ಇಲ್ಲದ ಬೊಗಳೆ ಲವ್ ಜೆಹಾದಿಗೆ, ಬೊಗಳೆ ಮತಾಂತರಗಳಿಗೆಲ್ಲ ತಲೆಕೆಡಿಸಿಕೊಂಡು ದೊಂಬಿಗಿಳಿದು ಜೈಲುವಾಸಕ್ಕೂ ಸಿದ್ಧರಾಗುವ ಬಿಲ್ಲವ ಯುವಕರು ತಮ್ಮದೇ ಸಮುದಾಯದ ಸ್ವಾಭಿಮಾನಿ ರಾಮಪ್ಪನವರ ಹೆಸರಲ್ಲಿ ನಡೆಸಲಾಗುತ್ತಿರುವ ಅಪಮಾನದ ವಿರುದ್ಧ ಎಂದೋ ಗುಟುರು ಹಾಕಿದ್ದರೆ ಇಂದು ಕೊಡುಗೈ ದಾನಿ, ಶಿಕ್ಷಣ ಪ್ರೇಮಿ (ವಿದ್ಯಾಸಂಸ್ಥೆಗಾಗಿ ಆ ಸಮಯದಲ್ಲಿ ರೂ. 1,11,111 ದಾನ ನೀಡಿ ರಾಮಪ್ಪ ಸುದ್ದಿ ಮಾಡಿದ್ದರು), ಸಜ್ಜನ ರಾಮಪ್ಪನವರು ಈ ರೀತಿ ರಾಂಪನೆನಿಸಿಕೊಂಡು ಗೇಲಿಯ ವಸ್ತುವೆನಿಸಿಕೊಳ್ಳುವ ಪ್ರಮೇಯವೇ ಬರುತ್ತಿರಲಿಲ್ಲ.


- ಶಶಿ ಪುತ್ತೂರು, ದಕ

ಮೋದಿಯ ಅಸಲಿ, ನಕಲಿ ನಾಟಕಗಳು

ಮೋದಿ ಚಹಾ ಮಾರಿದಾಗ ಜನರು ಮೋದಿ ಕೈಯಿಂದ ಚಹಾ ಕುಡಿದರು, ಆದರೆ ಮಲ್ಲಿಕಾರ್ಜುನ ಖರ್ಗೆ ಚಹಾ ಮಾರಿದ್ದರೆ ಯಾರು ಕುಡಿಯುತ್ತಿದ್ದರು ಎಂದು ಪ್ರವೀಣ್ ಶೆಟ್ಟರು ತಮ್ಮ ಮೇ 4 ರ ಸಂಚಿಕೆಯಲ್ಲಿ ಬರೆದದ್ದು ಸೂಕ್ತವಾಗಿದೆ. ಬೆಂಗಳೂರಿನಂತಹ ಮಹಾನಗರದಲ್ಲೂ ರಸ್ತೆಬದಿಯಲ್ಲಿ ತಿಂಡಿ ಚಹಾ ಮಾರುವವರು ಯಾವುದೇ ದೇವರ ಫೋಟೋ ಹಾಕಿಕೊಂಡು ವ್ಯಾಪಾರ ಮಾಡಬಹುದು, ಅವರ ತಿಂಡಿಗಳ ಶುಚಿ ರುಚಿ ಆಧರಿಸಿ ಅವರಿಗೆ ವ್ಯಾಪಾರವಾಗುತ್ತದೆ. ಆದರೆ ಅದೇ ವ್ಯಾಪಾರಿಯು ಗೌತಮ ಬುದ್ಧ ಹಾಗೂ ಡಾ.ಅಂಬೇಡ್ಕರರ ಫೋಟೋ ಹಾಕಿಕೊಂಡು ಅದೇ ಕ್ವಾಲಿಟಿಯ ಒಳ್ಳೆ ತಿಂಡಿ ಮಾರಿದರೂ ಅವನ ವ್ಯಾಪಾರ ಕಡಿಮೆಯಾಗುವುದು ಖಂಡಿತ. ಇನ್ನೂ ಇನ್ನೂರು ವರ್ಷ ಕಳೆದರೂ ಹಿಂದೂ ಸಮಾಜ ಸುಧಾರಿಸಲಾರದು. ಕೇವಲ ಚಪ್ಪಲಿ ರಿಪೇರಿ ಅಂಗಡಿಯಲ್ಲಿ ಮಾತ್ರ ಈ ಫೋಟೋಗಳಿದ್ದರೆ ಜನರು ಚಪ್ಪಲಿ ರಿಪೇರಿ ಮಾಡಿಸುತ್ತಾರೆ ಕಾರಣ ಅದಕ್ಕೆ ಪರ್ಯಾಯವಿಲ್ಲ, ಆದರೆ ಒಂದು ವೇಳೆ ಮೇಲ್ಜಾತಿಯವರೇ ಚಪ್ಪಲಿ ರಿಪೇರಿ ಅಂಗಡಿ ಇಟ್ಟರೆ ಆಗ ಮಾತ್ರ ಮೇಲ್ಜಾತಿ ಗ್ರಾಹಕರು ಮೇಲ್ಜಾತಿ ಚಪ್ಪಲಿ ರಿಪೇರಿ ಅಂಗಡಿಗೇ ಓಡುವ ಸಾಧ್ಯತೆಯೇ ಹೆಚ್ಚು.



ಇನ್ನು ಮೋದಿ ಚಹಾ ಮಾರಿದ ವಿಷಯಕ್ಕೆ ಬಂದರೆ - ವಡನಗರ್ ರೇಲ್ವೆ ಸ್ಟೇಷನ್ನಿನಲ್ಲಿ ಮೋದಿಯ ತಂದೆ ದಾಮೋದರದಾಸರ ಟೀ ಸ್ಟಾಲ್ ಇದ್ದದ್ದು ನಿಜ. ಮೋದಿಗಿಂತ ಎಂಟು ವರ್ಷ ಹಿರಿಯ ಅವರ ಅಣ್ಣ ಸೋಮಾಭಾಯಿ ಹಾಗೂ ಇನ್ನೊಬ್ಬ ಅಣ್ಣ ಅಮೃತಭಾಯಿ ತಂದೆಗೆ ರೇಲ್ವೆ ಟೀ ಸ್ಟಾಲ್ ನಡೆಸಲು ಸಹಾಯ ಮಾಡುತ್ತಿದ್ದುದು ನಿಜ. ಆದರೆ ಹೊಣೆಗಾರಿಕೆಯಿಲ್ಲದ ನರೇಂದ್ರ ಮೋದಿ ತಂದೆಗೆ ಸಹಾಯ ಮಾಡಿದ್ದು ಕಡಿಮೆ. ರೇಲ್ವೆ ನಿಯಮದ ಪ್ರಕಾರ ಕೇವಲ ಅಧಿಕೃತ ಲೈಸನ್ಸ್ ಇದ್ದವರು ಮಾತ್ರ ಪ್ಲಾಟ್‌ಫಾರ್ಮಿನಲ್ಲಿ ಚಹಾ ಮಾರಬಹುದು. ಮೋದಿಯ ತಂದೆ ದಾಮೋದರ ದಾಸರಲ್ಲಿ ಅಧಿಕೃತ ರೇಲ್ವೆ ಟೀ ಸ್ಟಾಲ್ ಲೈಸನ್ಸ್ ಇದ್ದುದರಿಂದ ಅವರು ಮತ್ತು ಮಕ್ಕಳು ಪ್ಲಾಟ್ಫಾರ್ಮ್ ಹಾಗೂ ಟ್ರೇನಿನಲ್ಲಿ ಟೀ ಮಾರಲು ಅಡ್ಡಿ ಇರಲಿಲ್ಲ, ಆದರೆ ಭಾರತದ ಎಲ್ಲ ರೇಲ್ವೆ ಸ್ಟೇಷನ್ನುಗಳಲ್ಲಿ ಬಡಮಕ್ಕಳು ಲೈಸನ್ಸ್ ಇಲ್ಲದೇ ಅನಧಿಕೃತವಾಗಿ ಪ್ಲಾಟ್ಫಾರ್ಮಿನಲ್ಲಿ ಅಥವಾ ರೇಲುಗಾಡಿಯೊಳಗೆ ಚಹಾ ತಿಂಡಿ ಮಾರುವುದು ಎಲ್ಲೆಡೆ ಸಾಮಾನ್ಯ. ಆದರೆ ವಡನಗರದಲ್ಲಿ ಲೈಸನ್ಸ್ ಇಲ್ಲದ ಬಡ ಹುಡುಗರು ರೇಲುಗಳಲ್ಲಿ ಚಹಾ ತಿಂಡಿ ಬಿಸ್ಕಿಟ್ ಮಾರಲು ಬಂದರೆ ತನ್ನ ತಂದೆಯ ವ್ಯಾಪಾರಕ್ಕೆ ಕತ್ತರಿ ಬೀಳುತ್ತದೆ ಎಂದು ಆ ಬಡ ಹುಡುಗರನ್ನು ಇದೇ ನರೇಂದ್ರ ಮೋದಿ ಹೊಡೆದು ಬಡಿದು ಓಡಿಸುತ್ತಿದ್ದರಂತೆ. ಹೀಗೆ ನರೇಂದ್ರ ಮೋದಿ ಹೊಡೆದು ಓಡಿಸಿದವರಲ್ಲಿ



ಬಡ ದಲಿತ ಹುಡುಗರೂ ಇದ್ದರಂತೆ. ಒಮ್ಮೆ ಒಬ್ಬ ಬ[...] ಮುದುಕ ಮೋದಿಯಿಂದ ಚಹಾ ಕುಡಿದು ಕೇವಲ ಐ[...] ನಯಾಪೈಸೆ ಕೊಟ್ಟನಂತೆ. ಅವನಲ್ಲಿ ಇದ್ದುದೇ ಅಷ್ಟು[...] ಆಗ ಒಂದು ಚಹಾದ ಬೆಲೆ ಇದ್ದಿದ್ದು ಕೇವಲ [...] ನಯಾಪೈಸೆ ಅಂದರೆ ಒಂದಾಣೆ ಮಾತ್ರ. ಆ ಮುದು[...] ಕೇವಲ ಒಂದು ನಯಾಪೈಸೆ ಕಡಿಮೆ ಕೊಟ್ಟಿದ್ದಕ್ಕೆ [...] ನರೇಂದ್ರ ಮೋದಿ ಆ ಬಡ ಮುದುಕನ ಮೇಲೆ ಹ[...] ಮಾಡಿದ್ದನಂತೆ.

ರೇಲ್ವೆ ಟೀ ಸ್ಟಾಲಿನಲ್ಲಿ ಬಹಳ ಹಿಂದಿನಿಂದಲೂ ಉತ್ತ[...] ಗಳಿಕೆ ಇದೆ. ಅದಕ್ಕಾಗಿ 1947 ರಿಂದಲೂ ಕರ್ನಾಟ[...] ಮತ್ತು ಮಹಾರಾಷ್ಟ್ರದಲ್ಲಿ ರೇಲ್ವೆ ಟೀ ಸ್ಟಾಲುಗಳ[...] ಪಾಕಿಸ್ತಾನದಿಂದ ನಿರ್ವಾಸಿತರಾಗಿ ಬಂದ ಸಿಂ[...] ಸಮುದಾಯಕ್ಕೇ ಮೀಸಲಾಗಿಡಲಾಗಿತ್ತು. ಇದರಿಂದಾ[...] ಕರ್ನಾಟಕ ಹಾಗೂ ಮಹಾರಾಷ್ಟ್ರದ ಸಣ್ಣ ಊರುಗಳ[...] ರೇಲ್ವೆ ಕ್ಯಾಂಟೀನ್ ಈಗಲೂ ಸಿಂಧಿ ಕುಟುಂಬಗಳ ಕೈಯ[...] ಇದ್ದು ಅದರ ಮೂಲಕವೇ ಅವರು ಲಕ್ಷಾಧೀಶರಾಗಿ [...] ಬಂಡವಾಳದಿಂದ ನಂತರ ಬೇರೆ ವ್ಯಾಪಾರದತ್ತಲೂ ಹೊರ[...] ಈಗ ಕೋಟ್ಯಾಧೀಶರಾಗಿದ್ದಾರೆ. (ಸಿಂಧಿಗಳಲ್ಲಿ ದಲಿ[...] ಜಾತಿಯಿಲ್ಲ ಎಂಬುದನ್ನೂ ಗಮನಿಸಿ.) ನರೇಂ[...] ಮೋದಿಯವರ ಅಣ್ಣ ತಮ್ಮಂದಿರೆಲ್ಲಾ ಉತ್ತಮ ಕಾಲೇಜ[...] ವಿದ್ಯಾಭ್ಯಾಸ ಪಡೆಯಲು ಹಾಗೂ ಸರಕಾರಿ ಹುದ್ದೆ ಮ[...] ಸರಕಾರಿ ರೇಷನ್ ಅಂಗಡಿ ಪಡೆಯಲು ಸಾಧ್ಯವಾಗಿದ[...] ಅವರ ತಂದೆಯ ಉತ್ತಮ ಆರ್ಥಿಕ ಸ್ಥಿತಿಯಿಂದಾಗಿಯೆ[...] ಮೋದಿಯ ತಂದೆಯ ರೇಲ್ವೆ ಟೀ ಸ್ಟಾಲ್ ಲಾಭಕರವಾ[...] ನಡೆಯುತ್ತಿದ್ದು ಮೋದಿಯವರ ಬಾಲ್ಯದ ಬಡತನದ ಕ[...] ಹಾಗೂ ಅವರ ತಾಯಿ ಬೇರೆಯವರ ಮನೆಯಲ್ಲಿ ಮುಸು[...] ತಿಕ್ಕಿರುವ ಕತೆಯೆಲ್ಲ ಶುದ್ಧ ಕಟ್ಟು ಕತೆಯಾಗಿದ್ದು ಅದೇ[...] ಚುನಾವಣೆಯಲ್ಲಿ ಜನರ ಸಹಾನುಭೂತಿ ಗೆಲ್ಲಲು ಹೆಣೆ[...] ಮನೋವೈಜ್ಞಾನಿಕ ತಂತ್ರವಾಗಿತ್ತು ಎಂಬುದನ್[...] ಸಾಬೀತುಮಾಡಲು ಮೇಲಿನದೆಲ್ಲಾ ಹೇಳಬೇಕಾಯಿತು.


ಮೋದಿಯ ಅಣ್ಣ ಸೋಮಾಭಾಯಿ ಪರಿಶ್ರಮದಿಂ[...] ಕಲಿತು ಪದವಿ ಮುಗಿಸಿ ಗುಜರಾತ್ ರಾಜ್ಯದ ಸರಕಾ[...] ನೌಕರಿ ಸೇರಿ ಆರೋಗ್ಯಾಧಿಕಾರಿಯಾಗಿ ನಿವೃತ್ತಿ ಹೊಂದಿದ್ದಾ[...] ಇನ್ನೊಬ್ಬ ಅಣ್ಣ ಅಮೃತಾಭಾಯಿ ಪದವಿ ಮುಗಿಸಿ ರೇಷನ್ ಅಂಗಡಿ ನಡೆಸುತ್ತಾರೆ. ತಮ್ಮಂದಿರಲ್ಲಿ ಮೊದಲನೆಯವನ[...] ಪ್ರಹ್ಲಾದ್ ಭಾಯಿ ಪದವಿ ಮುಗಿಸಿ ಖಾಸಗಿ ಕಂಪನಿಯ[...] ಕೆಲಸಕ್ಕಿದ್ದರೆ, ಕೊನೆಯ ತಮ್ಮ ಪಂಕಜ್ ಭಾಯಿ ಪದ[...] ಮುಗಿಸಿ ರಾಜ್ಯ ಸರಕಾರಿ ನೌಕರನಾಗಿದ್ದಾನಂತೆ. ತಂ[...] ವಸಂತಿಬೆನ್ ಇವರ ಪತಿ ಎಲ್‌ಐಸಿಯಲ್ಲಿ ಅಧಿಕಾರಿಯಾ[...] ನಿವೃತ್ತಿ ಹೊಂದಿದ್ದಾರೆ. ಎಲ್ಲರೂ ಒಳ್ಳೆಯ[...] ವಿದ್ಯಾವಂತರಾದರೂ ಕೇವಲ ನರೇಂದ್ರ ಮಾತ್ರ 16 ನೆ[...] ವರ್ಷಕ್ಕೆ ಮನೆ ಬಿಟ್ಟು ಓಡಿಹೋದವನು ವಿದ್ಯೆ[...] ಪ್ರಾಮುಖ್ಯತೆ ಕೊಡಲೇ ಇಲ್ಲವಂತೆ. ಕೊನೆಗೆ ರಾಜಕಾರಣ[...] ಬಂದಮೇಲೆ 1978 ಮುಕ್ತ ದಿಲ್ಲಿ ವಿಶ್ವವಿದ್ಯಾಲಯದ[...] ಪದವಿ ಹಾಗೂ ಗುಜರಾತ್ ವಿವಿಯಲ್ಲಿ ಸ್ನಾತಕೋತ್ತ[...] ಪದವಿ ಮುಗಿಸಿದರು ಎನ್ನಲಾಗುತ್ತಿದೆ. ಆದರೆ ಅವರು ಫೇಕೂ ಎಂಬ ಅತ್ಯುಚ್ಚ ಪದವಿ ಗಳಿಸಿದ್ದು ಮಾತ್ರ ಖಂಡಿತ. ಈಗಾಗಲೇ ಅಮಿತ್ ಶಾ ಕಳುಹಿಸಿದ ನೂರು ಕೋಟಿಯ ಬಲದಿಂದ ಜೆಡಿಎಸ್ ಸದಸ್ಯರನ್ನು ಖರೀದಿಸಿ ಅತಂತ್ರವಾಗಿದ್ದ ಆರು ಜಿಲ್ಲಾ ಪಂಚಾಯತಿಯನ್ನು ಬಿಜೆಪಿ ಕೈವಶ ಮಾಡಿಕೊಂಡಿದೆ. ಮುಂದಿನ ದಿನಗಳಲ್ಲಿ ದಿಲ್ಲಿಯಿಂದ ಬರುವ **ಕೋಟಿ-ಕೋಟಿಯ ಆಸೆಗಾಗಿ ಹುಂಬ ಅರೆ-ಸಾಕ್ಷರ ರೇವಣ್ಣ ಸಹಿತ ಸಂಪೂರ್ಣ ಜೆಡಿಎಸ್ ಪಕ್ಷ ಬಿಜೆಪಿ ಪಕ್ಷದಲ್ಲಿ ವಿಲೀನವಾದರೆ ಆಶ್ಚರ್ಯವಿಲ್ಲ. ಯಾವುದೇ ತತ್ವ ಆದರ್ಶಗಳಿಲ್ಲದಿದ್ದರೂ ದೇವೇಗೌಡರು ಬದುಕಿರುವಷ್ಟು ದಿನ ಮಾತ್ರ ಜೆಡಿಎಸ್ ಬದುಕಿರುತ್ತದೆ ಅಷ್ಟೇ.** ಹಾಗಾಗಿ ಈ ತತ್ವಹೀನ ಪಕ್ಷದ ಬೆಂಬಲಕ್ಕಿರುವ ದಲಿತರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು ಈ ಕಹಿ ಸತ್ಯವನ್ನು ಅರಿತರೆ ಒಳ್ಳೆಯದು.

ಜಾತಿವಾದಿ ಪಕ್ಷದ ದೇವೇಗೌಡರು

ಕೆಲವು ವರ್ಷಗಳ ಹಿಂದೆ ಮಾಜಿ ಪ್ರಧಾನಿ ದೇವೇಗೌಡರು ಒಂದು ಸಾರ್ವಜನಿಕ ಸಭೆಯಲ್ಲಿ "ಮುಂದಿನ ಜನ್ಮದಲ್ಲಿ ನಾನು ಮುಸ್ಲಿಮನಾಗಿ ಹುಟ್ಟಲು ಬಯಸುತ್ತೇನೆ" ಎಂದು ಘೋಷಿಸಿದ್ದರು. ಆದರೆ ಅವರೆಂದೂ "ನಾನು ಮುಂದಿನ ಜನ್ಮದಲ್ಲಿ ದಲಿತನಾಗಿ ಹುಟ್ಟಲು ಬಯಸುತ್ತೇನೆ" ಎಂದು ಹೇಳಲೇ ಇಲ್ಲ. ಯಾಕೆಂದರೆ ಅವರೊಳಗೇ ಹುದುಗಿರುವ ಮೇಲ್ಜಾತಿ ಒಕ್ಕಲಿಗ ಅವರಿಗೆ ಈ ಮಾತು ಹೇಳಲು ಆಸ್ಪದ ಕೊಡಲೇ ಇಲ್ಲ.

ಸ್ವತಃ ಬ್ರಾಹ್ಮಣರೇ ಹೇಳುತ್ತಾರೆ 'ನಮಗಿಂತ ಮಧ್ಯಮ ಜಾತಿಯ ಹಿಂದೂಗಳೇ ದಲಿತರ ಪ್ರಥಮ ವೈರಿಗಳು' ಎಂದು. ಇದು ನಿಜ ಅನ್ನಿಸುತ್ತದೆ. ನಿಜವಾಗಿ ಬ್ರಾಹ್ಮಣರು ಕೇವಲ ಪಾಳೆಗಾರಿಕೆ ಬುದ್ಧಿ ಮತ್ತು ಹಣಬಲ-ಬಾಹುಬಲ ಇರುವ ಈ ಮಧ್ಯಮ ಜಾತಿಯ ಶೂದ್ರರನ್ನು ದಲಿತರ ವಿರುದ್ಧ ಪ್ರಚೋದಿಸಿ ಬಿಟ್ಟುಬಿಡುತ್ತಾರೆ. ಆದರೆ ದಲಿತರ ಕೇರಿಗೆ ನುಗ್ಗಿ ರಕ್ತಪಾತ ಮಾಡುವವರು ಯಾವಾಗಲೂ ಈ ಪ್ರಬಲ ಮಧ್ಯಮ ಜಾತಿಯ ಶೂದ್ರರೇ ಆಗಿರುತ್ತಾರೆ. ಆಂಧ್ರದಲ್ಲಿ ದಲಿತರ ಮೇಲೆ ಹಲ್ಲೆ ಮಾಡುವವರು ಕೇವಲ ರೆಡ್ಡಿಗಳು ಮತ್ತು ಕಮ್ಮಾಗಳು ಮಾತ್ರ. ಉತ್ತರ ಪ್ರದೇಶದಲ್ಲಿ ಈ ನೀಚ ಕೆಲಸ ಮಾಡುವವರು ಹೆಚ್ಚಾಗಿ ಠಾಕೂರ್ ಮತ್ತು ಕುರ್ಮಿ ಜಾತಿಯವರು. ರಾಜಸ್ಥಾನದಲ್ಲಿ ದಲಿತರ ಮೇಲೆ ಅಮಾನವೀಯತೆ ತೋರುವವರು ರಜಪೂತರು, ಗುಜರಾತಿನಲ್ಲಿ ದಲಿತರನ್ನು ಶೋಷಿಸುವವರು ಪಾಟಿದಾರ್ ಪಟೇಲರು, ಹರ್ಯಾಣದಲ್ಲಿ ಜಾಟರೇ ದಲಿತರ ಪ್ರಥಮ ವೈರಿಗಳು, ತಮಿಳುನಾಡಿನಲ್ಲಿಯೂ ಗೌಂಡರ್ ಮತ್ತು ಮುದಲಿಯಾರ್ ಜಾತಿಯವರೇ ದಲಿತರನ್ನು ಕೊಚ್ಚಿ ಹಾಕುವುದು. ಮಹಾರಾಷ್ಟ್ರದಲ್ಲಿ ಪ್ರಬಲ ಮರಾಠ ಜಾತಿಯವರಿಂದಲೇ ದಲಿತರು ಅತೀ ಹೆಚ್ಚು ಕಿರುಕುಳ ಅನುಭವಿಸುತ್ತಿರುವುದು.

ಜ್ಯೋತಿಷ್ಯ ಹಾಗೂ ವೈದಿಕ ಪೂಜಾವಿಧಿಗಳಲ್ಲಿ ವಿಪರೀತ ನಂಬಿಕೆಯಿರುವ ದೇವೇಗೌಡರ ಒಕ್ಕಲಿಗ ಜಾತಿಯವರೂ ಅದೇ ಶೂದ್ರ ಪಾಳೇಗಾರ ಗುಂಪಿನಲ್ಲಿ ಬರುತ್ತಿದ್ದಾರೆ ಅನಿಸುತ್ತದೆ.




ಮಂಡ್ಯಾದಲ್ಲಿ ಆದ ಒಕ್ಕಲಿಗ ಹುಡುಗಿ ಮುಸ್ಲಿಂ ಹುಡುಗನ ಮದುವೆಯ ನಂತರ ಅಲ್ಲಿ "ಒಕ್ಕಲಿಗ ಸೇನೆ" ಎಂಬ ಗೂಂಡಾ ಪಡೆಯನ್ನು ಸಂಘ ಪರಿವಾರ ಹುಟ್ಟು ಹಾಕಿದೆ. ಇದು ಬಜರಂಗದಳದ ಸಹೋದರ. ದಕ್ಷಿಣ ಕನ್ನಡದ ಮತ್ತು ಕೊಡಗಿನ ಪ್ರಬಲ ಅರೆಭಾಷೆ ಗೌಡರು ತಲೆಯಲ್ಲಿ ಸಂಪೂರ್ಣ ಕೇಸರಿ ವಿಷ ತುಂಬಿಕೊಂಡು ತುಂಬಾ ಸಮಯವಾಯಿತು. ಇನ್ನು ಹಳೆ ಮೈಸೂರಿನಲ್ಲಿ ಕೆಲಸವಿಲ್ಲದ ಗೌಡರ ಪಡ್ಡೆಗಳನ್ನೆಲ್ಲಾ ಸೇರಿಸಿಕೊಂಡು ಈ ಒಕ್ಕಲಿಗ ಕೇಸರಿ ಸೇನೆ ಕ್ರಮೇಣ ಇಡೀ ಹಳೆ ಮೈಸೂರು ಜಿಲ್ಲೆಗಳನ್ನು ವ್ಯಾಪಿಸಿ ದೇವೇಗೌಡರ ಜೆಡಿಎಸ್ ಅನ್ನು ನುಂಗಿ ಹಾಕುವುದು ಖಂಡಿತ. ದೇವೇಗೌಡರು ಜೀವಂತ ಇರುವವರೆಗೆ ಜೆಡಿಎಸ್ ಜೀವಂತ ಇರುತ್ತದೆ. ನಂತರ ಅರೇ ತಿಂಗಳಲ್ಲಿ ಅದು ಸಂಪೂರ್ಣ ಬಿಜೆಪಿ ತೆಕ್ಕೆಗೆ ಹೋಗುವುದು ಖಂಡಿತ.

ಹಾಸನ ಜಿಲ್ಲೆಯ ಹೊಳೆನರಸೀಪುರದ ಸಿಗರನಹಳ್ಳಿಯ ಬಸವೇಶ್ವರ ದೇವಾಲಯದಲ್ಲಿ ದಲಿತರು ಪೂಜೆ ಮಾಡುವ ವಿಷಯದಲ್ಲಿ ಎದ್ದ ಸಣ್ಣ ವಿವಾದವನ್ನು ದೊಡ್ಡದು ಮಾಡಿದ್ದು ಅಲ್ಲಿಯ ಶಾಸಕ ರೇವಣ್ಣ ಹಾಗೂ ಈ ಒಕ್ಕಲಿಗರ ಗುಂಪಿಗೆ ಬೆಂಬಲವಾಗಿ ಸ್ವತಃ ಮಾಜಿ ಪ್ರಧಾನಿ ದೇವೇಗೌಡರು ನಿಂತಿದ್ದರು ಎಂಬ ವಿಷಯ ಈಗ ಬಹಿರಂಗವಾದ ಮೇಲೆ ಎಂತಹ ಸಂಕುಚಿತ ಬುದ್ಧಿಯ ಜಾತಿವಾದಿಯೊಬ್ಬರು ಹಿಂದೊಮ್ಮೆ ನಮ್ಮ ದೇಶದ ಪ್ರಧಾನಿಯಾಗಿದ್ದರು ಎಂದು ಜನರು ಖೇದಪಡುವಂತಾಗಿದೆ. ಜಾತ್ಯತೀತ ಜನತಾ ದಳ ಎಂಬ ಹೆಸರು ಅವರ ಪಕ್ಷಕ್ಕೆ ಬಿಲ್‌ಕುಲ್ ಸರಿಹೊಂದುವುದಿಲ್ಲ. ಅದಕ್ಕೆ ಬದಲು 'ಜಾತಿವಾದಿ' ಜನತಾದಳ ಎಂಬ ಹೆಸರೇ ಹೆಚ್ಚು ಸರಿಹೊಂದುತ್ತದೆ. ಮುಂದಿನ ಜನ್ಮದಲ್ಲಿ ದೇವೇಗೌಡರು ಹಾಗೂ ಹಣಕ್ಕಾಗಿ ಅವರನ್ನು ಬೆಂಬಲಿಸುವ ಅರ್ಚಕರು, ಸ್ವಾಮೀಜಿಗಳು ಮತ್ತು ಜ್ಯೋತಿಷಿಗಳೆಲ್ಲಾ ದಲಿತರಾಗಿ ಹುಟ್ಟಿ ಬಂದು ಭಾರತದಲ್ಲಿ ದಲಿತನಾಗಿ ಹುಟ್ಟುವುದು ಎಂತಹ ಘೋರ ನರಕ ಎಂಬುದನ್ನೂ ಸ್ವತಃ ಅನುಭವಿಸಲಿ.

-ವೀರಪ್ಪ ದಿ.ಎನ್, ಮಡಿಕೇರಿ

ಗುಜರಾತಿನ ಮುಖ್ಯಮಂತ್ರಿ ಆದಮೇಲೆ.


ಅಣ್ಣ ಸೋಮಾಭಾಯಿಯವರೇ ಒಂದೆಡೆ ಹೇಳಿರುವಂತೆ ತುಂಬಾ ಒರಟು ಸ್ವಭಾವದ ತನ್ನ ತಮ್ಮ ನರೇಂದ್ರ 16 ವಯಸ್ಸಿಗೇ ಮೆಟ್ರಿಕ್‌ನಲ್ಲಿ ಫೇಲಾದುದಕ್ಕೆ ತಂದೆಯೊಂದಿಗೆ ಜಗಳಾಡಿ ಮನೆ ಬಿಟ್ಟು ಕಲ್ಕತ್ತಾಗೆ ಓಡಿಹೋದವನು ನಂತರ ಐದು ವರ್ಷಗಳ ಬಳಿಕ ಊರಿಗೆ ಮರಳಿದರೂ ಕುಟುಂಬಿಕರೊಂದಿಗೆ ಮಧುರ ಸಂಬಂಧ ಇಟ್ಟುಕೊಳ್ಳದೇ ಬೇರೆಯಾಗಿಯೇ ಇದ್ದನಂತೆ. ಆನಂತರ ನಾಲ್ಕು ಅಣ್ಣ-ತಮ್ಮಂದಿರು ಹಾಗೂ ಒಬ್ಬ ತಂಗಿಯ ಕುಟುಂಬಗಳಲ್ಲಿ ಒಟ್ಟು 12 ಕ್ಕೂ ಹೆಚ್ಚು ಮದುವೆಯಾಗಿದ್ದರೂ ಒಂದಕ್ಕೂ ನರೇಂದ್ರ ಮೋದಿ ಬರಲೇ ಇಲ್ಲವಂತೆ. ನಿಜವಾಗಿ ನರೇಂದ್ರನ ಒರಟು ಜಗಳಗಂಟ ಬುದ್ಧಿಯಿಂದ ಅವರ ತಂದೆ ಸಹಿತ ಎಲ್ಲರೂ ರೋಸಿಹೋಗಿದ್ದರಿಂದ ಅವರ ಮನವೊಲಿಸಿ ಮರಳಿ ಮನೆಗೆ ಕರೆತರುವ ಪ್ರಯತ್ನವನ್ನು ತಂದೆ-ತಾಯಿ ಅಣ್ಣಂದಿರು ಮಾಡಲಿಲ್ಲ, ಚಿಕ್ಕಂದಿನಿಂದಲೂ ಸರ್ವಾಧಿಕಾರಿ ಮನೋವೃತ್ತಿಯ ನರೇಂದ್ರ ಮೋದಿ ಏಕಾಂಗಿ ಪ್ರವೃತ್ತಿಯವನಾಗಿದ್ದು ಯಾರೊಂದಿಗೂ ಅವನಿಗೆ ಸರಿಹೋಗುತ್ತಿರಲಿಲ್ಲವಂತೆ. ಹಾಗಾಗಿ ಆತನಿಗೆ ಚಿಕ್ಕಂದಿನಿಂದಲೂ ಮಿತ್ರರು ಕಡಿಮೆಯೇ ಇದ್ದರಂತೆ. ಹುಟ್ಟಿನಿಂದ ಬಂದ ಈ ಒರಟು ಸರ್ವಾಧಿಕಾರಿ ಬುದ್ಧಿ ಈಗಲೂ ಮೋದಿಯವರ ವ್ಯಕ್ತಿತ್ವದ ಭಾಗವೇ ಆಗಿರುವುದರಲ್ಲಿ ಆಶ್ಚರ್ಯವಿಲ್ಲ. ಚಹಾ ಮಾರಿ ತಂದೆಗೆ ಸಹಾಯ ಮಾಡಿದ್ದೆಲ್ಲಾ ಬರಿ ಬೊಗಳೆ ಅಷ್ಟೇ. ಒಟ್ಟಾರೆ ನಕಲಿ ರಾಷ್ಟ್ರಭಕ್ತಿ, ನಕಲಿ ಅಭಿವೃದ್ಧಿ, ನಕಲಿ ಪದವಿ, ನಕಲಿ ಚಹಾದಂಗಡಿ, ನಕಲಿ ಬಡತನ, ನಕಲಿ ಹಿಮಾಲಯದಲ್ಲಿ 12 ವರ್ಷ ತಪಸ್ಸು, ನಕಲಿ ಮೊಸಳೆಗಳೊಂದಿಗೆ ಹೊಡೆದಾಟ, ನಕಲಿ ಎನ್‌ಕೌಂಟರ್, ಹೀಗೆ ಬೂಸಿಬಸ್ಯಾನದು ಎಲ್ಲವೂ ನಕಲಿ. ಕೇವಲ 2002ರ ಹತ್ಯಾಕಾಂಡಕ್ಕೆ ಕಾರಣವಾಗಿದ್ದು ಮತ್ತೂ ಹೆಂಡತಿಗೆ ಬಾಳು ಕೊಡದಿರುವುದು ಮಾತ್ರ ಅಸಲಿ.



-ರಾಮಕೃಷ್ಣ ಎ.ಕೆ. ಬೆಂಗಳೂರು

ಕರಾವಳಿಯಲ್ಲಿ ಚೆಡ್ಡಿ ಶಕುನಿಗಳದ್ದೇ ಕೈಮೇಲು

ಕಳೆದ ಸಂಚಿಕೆಯಲ್ಲಿ ರವಿಕಿರಣ ರೈಯವರು ಬರೆದ 'ಶೂದ್ರರ ಕುರಿತು ವೈದಿಕರ ಕೀಳು ಅಭಿವ್ಯಕ್ತಿ' ಎಂಬ ಲೇಖನ ಎಲ್ಲರೂ ಓದಲೇಬೇಕಾದಂತಹ ಸಕಾಲಿಕ ಬರಹವಾಗಿದೆ. ಅವರು ಎತ್ತಿರುವಂತಹ ವಿಚಾರ ಅಂದರೆ ವೈದಿಕರ ಡಬ್ಬಲ್ ಗೇಮ್ (ತಮ್ಮ ಬೇಳೆ ಬೇಯಲು ಶೂದ್ರರು ಹಾಗು ಅನ್ಯಮತೀಯರ ನಡುವೆ ಕಚ್ಚಾಟಕ್ಕೆ ಕುಮ್ಮಕ್ಕು ನೀಡುತ್ತಾ ಒಳಗೊಳಗೇ ಅನ್ಯಮತೀಯರೊಂದಿಗೆ ವ್ಯವಹಾರವನ್ನು ನಡೆಸುವುದು ಇತ್ಯಾದಿ) ಇಲ್ಲಿನ ಬಹುತೇಕರಿಗೆ ತಿಳಿದಿರುವಂತಾದ್ದೇ ಆದರೂ ಕಿಲಾಡಿ ವೈದಿಕರು ಮುಖ್ಯವಾಗಿ ಆರೆಸ್ಸೆಸ್ ಬೆನ್ನೆಲುಬಾದ ಇಲ್ಲಿನ ಜಿಎಸ್‌ಬಿಗಳು ಕರಾವಳಿಯ ಶೂದ್ರರಲ್ಲಿ ಹಬ್ಬಿಸಿದ ಕೋಮು ಉನ್ಮಾದದ ಅಮಲಿನಲ್ಲಿ ಈ ಸತ್ಯಾಂಶದ ಅರಿವು ಶೂದ್ರ (ಬಂಟ ಬಿಲ್ಲವ ಮೊಗವೀರ ಕುಂಬಾರ ದಲಿತ ಇತ್ಯಾದಿ) ರನ್ನು ಯಾವುದೇ ರೀತಿಯಲ್ಲೂ ಪರಿಣಮಿಸದು. ಯಾಕೆಂದರೆ ಜನರಿಗೆ ಒಳ್ಳೆಯದಕ್ಕಿಂತ ಕೆಡುವ ವಿಚಾರದೆಡೆಗೇ ಆಕರ್ಷಣೆ ಹೆಚ್ಚಲ್ಲವೇ?



ರವಿಕಿರಣರು ಅಂದಂತೆ ವೈದಿಕರಿಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಈ ಅನ್ಯಮತೀಯರ ಭೂತ ಬಹಳಷ್ಟು ಸಹಾಯ ಮಾಡಿದ್ದು ಹಗಲಿನಷ್ಟೇ ಸತ್ಯ. ಸಾಬರ ಪಾಕಿಸ್ತಾನವನ್ನೇ ಪುಡಿಮಾಡಬಲ್ಲ (ಹಾಗೆಂದೇ ಚುನಾವಣಾ ಪೂರ್ವದಲ್ಲಿ ಬಿಂಬಿಸಲ್ಪಟ್ಟ) ಮೋದಿ ನಂತರ ಭರ್ಜರಿಯಾಗಿ ಗೆದ್ದದ್ದಾಗಲೀ, ಅಡ್ವಾಣಿ ರಥಯಾತ್ರೆ ಮಾಡಿ ಸಿಂಗಲ್ ಡಿಜಿಟ್‌ನಿಂದ ದೇಶವನ್ನೇ ಆಳುವಷ್ಟು ಓಟು ಗಿಟ್ಟಿಸಿ ದಕ್ಕಾಗಲೀ ಬೆಳಕೆಯಾದದ್ದು ಇದೇ ಅನ್ಯಮತೀಯರ ಭೂತವೇ ಕಾರಣ ತಾನೇ? ಅಷ್ಟೇ ಯಾಕೆ ಈಗ ಹಿಂದೂ ಎನ್ನುವ ಬಲವಂತದ 'ಯುನೈಟೆಡ್' ಧರ್ಮ ಹುಟ್ಟಿ ಕೊಳ್ಳಲೂ ಕೂಡ ಈ ಅನ್ಯಮತೀಯರೇ ಕಾರಣ ತಾನೇ? ತಮ್ಮೊಳಗೇ ಬಡಿದಾಡಿಕೊಳ್ಳುತ್ತಿದ್ದ ಶಾಕ್ತರು, ಶೈವರು, ವೈಷ್ಣವರು, ನಾಥಪಂಥೀಯರು ಹಾಗು ಲೆಕ್ಕವಿಲ್ಲದಷ್ಟು ಅವರದ್ದೇ ಆದ ಸಂಪ್ರದಾಯಗಳನ್ನು ಅನುಸರಿಸಿ ಬದುಕುತ್ತಿದ್ದ ಬುಡಕಟ್ಟು ಹಾಗು ಇನ್ನಿತರ ಸಮುದಾಯಗಳನ್ನೆಲ್ಲ ಯಾರ ಅಭಿಪ್ರಾಯವನ್ನೂ ಕೇಳದೇ ಒಂದೇ ತಕ್ಕಡಿಯಲ್ಲಿ 'ಹಿಂದೂ' ಎಂದು ಕಲ್ಪಿಸಿಕೊಂಡ ಬೆಳವಣಿಗೆಗೂ ಈ ಅನ್ಯಮತೀಯರ ಭೂತವೇ ಕಾರಣ ತಾನೇ? ವಿಚಿತ್ರವೆಂದರೆ ಸಿಂಧೂ ನದಿಯ ಪ್ರಾದೇಶಿಕ ಗುರುತಿನಿಂದ ಯಾರಿಂದಲೋ ಗುರುತಿಸಿಕೊಂಡ ಸಿಂಧೂ ಅರ್ಥಾತ್ ಹಿಂದೂ ಸಮುದಾಯ ಕೆಲ ರಾಜಕೀಯ ಹಾಗು ಸಾಮಾಜಿಕ ಕಾರಣಗಳಿಂದ ಹಿಂದೂ ಧರ್ಮ ಎಂದು ಕರೆಸಿಕೊಂಡಿತು. ಅದರಲ್ಲಿ ಹೊರಗಿನಿಂದ ಬಂದ ಶಕರೂ, ಹೂಣರೂ, ಗ್ರೀಕ್ ಮೊದಲಾದವರಲ್ಲದೇ ಈಗ ಚಿತ್ಪಾವನ ಬ್ರಾಹ್ಮಣರೆಂದು ಕರೆಸಿಕೊಳ್ಳುವ ಇಸ್ರೇಲಿಗರೂ ಹಿಂದೂ ಗುಂಪಿನೊಳಗೆ ಬೆರೆತುಬಿಟ್ಟು ಆ ಕಾಲಕ್ಕೆ ಅವರು ಆಕ್ರಮಿಸಿಕೊಂಡ ಗಟ್ಟಿ ಸೀಟುಗಳ ಆಧಾರದಲ್ಲಿ ಕೆಲವೇ ಶತಮಾನಗಳ ಹಿಂದೆ ಬಂದ ಹೊರಗಿನವರಾದರೂ ದೊಡ್ಡ ಸ್ಥಾನವನ್ನೇ ಆಕ್ರಮಿಸಿಬಿಟ್ಟರು. ಇಲ್ಲಿನವರೇ ಆದ ಮೂಲನಿವಾಸಿಗಳು 'ಸ್ಥಾನ'ಕ್ಕೆ ಗಮನ ಕೊಡದ ಕಾರಣ ಅವರಿಗಿಂತ ಹಿಂದೆಯೇ ಉಳಿದರು. ನೀವು ಹೊರಗಿನವರೇ ಅಥವ ಇಲ್ಲಿನವರೇ ಎನ್ನುವುದಕ್ಕಿಂತ ಕರ್ಚೀಫ್ ಇಟ್ಟು ಸೀಟ್ ರಿಸರ್ವ್ ಮಾಡುವ ತಾಕತ್ತೇ ನಿಮ್ಮ ಸಾಮಾಜಿಕ ಸ್ಥಾನವನ್ನಿಲ್ಲಿ ನಿರ್ಧರಿಸಿಬಿಡುತ್ತದೆ. ಕರಾವಳಿಯಲ್ಲಿ ನಡೆಯುತ್ತಿರುವುದೂ ಅದೇನೇ.

ಕರಾವಳಿಯಲ್ಲಿ ಅಲ್ಲಿನ ಮೂಲನಿವಾಸಿಗಳಿಗಿಂತ ಹೊರಗಿನಿಂದ ಬಂದ ವೈದಿಕರ ಅದಕ್ಕೂ ಹೆಚ್ಚು ಜಿಎಸ್‌ಬಿಗಳ ಆಟಾಟೋಪವೇ ಅಧಿಕ. ವೈದಿಕರ ಆಗಮನಕ್ಕೆ ಇಲ್ಲಿ ಸಾವಿರ ವರ್ಷಗಳ ಇತಿಹಾಸವಿದ್ದರೆ ಜಿಎಸ್‌ಬಿಗಳದ್ದು ಶತಮಾನಗಳ ಹಿಂದಿನ ವಲಸೆ. ಇಲ್ಲಿನ ಆರೆಸ್ಸೆಸ್ ಕವಾಯತು, ಶಾಲಾಕಾಲೇಜುಗಳಲ್ಲಿ ಚೆಡ್ಡಿ ತರಬೇತಿ, ಪೈಸೆ ಪೈಸೆ ಲೆಕ್ಕ ಹಾಕುವ ಮಂದಿಯಾದರೂ ಹಿಂದೂ ಸಮಾವೇಶಕ್ಕೆ ಬೇಜಾನ್ ಫಂಡು ನೀಡಿಕೆ, ಅನ್ಯಮತೀಯರ ವಿರುದ್ಧದ ದೊಂಬಿ ಗಲಭೆಗಳಲ್ಲಿ (ನೇರವಾಗಿ ಎಲ್ಲೂ ಕಾಣಿಸಿಕೊಳ್ಳದೇ) ದೊಡ್ಡ ಮಟ್ಟದ ಪಾಲ್ಗೊಳ್ಳುವಿಕೆ (ನಂದಿತಾ ಹಾಗು ಗಂಗೊಳ್ಳಿ ಪ್ರಕರಣ ಗೊತ್ತಲ್ಲ) ಮಾಧ್ಯಮಗಳ ಮೂಲಕ ಹಿಂದೂ ಪರ ಮತ್ತು ಪ್ರಚೋದಕ ಸುದ್ದಿ ಹರಡುವಿಕೆ ಎಲ್ಲದರಲ್ಲೂ ಇವರ ಪಾತ್ರಧಾರಿಕೆ ಬಹಳ. ಇದನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ ಕರ್ನಾಟಕದ ಬಿಜೆಪಿಯ ಕಿಂಗ್‌ಪಿನ್ ಸಂತೋಷ್ ಜಿ ಇದೇ ಕರಾವಳಿಯ ಕಾರ್ಕಳ ಮೂಲದವನಾದರೆ ಆರ್‌ಟಿಐ ಕಾರ್ಯಕರ್ತ ಬಾಳಿಗಾ ಹತ್ಯೆಯ ಕುರಿತು ಈಗ ತಲೆ ಮರೆಸಿಕೊಂಡು ಸುದ್ದಿಯಲ್ಲಿರುವ ನಮೋ ಬ್ರಿಗೇಡ್‌ನ ನಾಯಕ ನರೇಶ್ ಶೆಣೈ ಸಹ ಇದೇ ಕರಾವಳಿಯ ಬೆಂಕಿ ನವಾಬರ ಪಡೆಯವನೇ ಎನ್ನುವುದು ಗಮನಾರ್ಹ.

ವ್ಯಾಪಾರ ವ್ಯವಹಾರಗಳ ಮೂಲಕ ಹಣವಂತರಾಗಿ ಹಾಗು ರಾಜಕೀಯವಾಗಿಯೂ ಬಲಿಷ್ಠರಾಗಿರುವ ಇವರನ್ನು ಮುಟ್ಟುವುದು ಸುಲಭದ ಮಾತಲ್ಲ. ದೇಶಕ್ಕೆ ಸಾವಿರಾರು ಕೋಟಿ ಮುಂಡಾಮೋಚಿ ಪರಾರಿಯಾಗಿರುವ ಬಂಟ್ವಾಳ ಮೂಲದ ವಿಜಯ ಮಲ್ಯ, ಪಿಯುಸಿ ರಸಾಯನ ಶಾಸ್ತ್ರದ ಪ್ರಶ್ನೆಪತ್ರಿಕೆ ವಿವಾದದಲ್ಲಿ ಸಿಓಡಿ ದಾಳಿಗೊಳಗಾಗಿ ವಿದ್ಯೆಗೆ ಒಳ್ಳೆಯ ಹೆಸರಿರುವ ದಕ ಜಿಲ್ಲೆಯ ಮಾನ ಹರಾಜು ಮಾಡಿರುವ ಎಕ್ಸ್‌ಪರ್ಟ್ ವಿದ್ಯಾಸಂಸ್ಥೆಯ ನರೇಂದ್ರ ಎಲ್ ನಾಯಕ್, ನಮೊ ಬ್ರಿಗೇಡ್‌ನ ನರೇಶ್ ಶೆಣೈರಂತವರೇ ಈ ಸಮುದಾಯದಲ್ಲೀಗ ರಾರಾಜಿಸುತ್ತಿದ್ದು ಸಮುದಾಯದಲ್ಲಿ ಅಲ್ಲಲ್ಲಿರುವ ಒಳ್ಳೆಯ ವ್ಯಕ್ತಿಗಳಿಗೆ ಕಳಂಕವನ್ನು ಮೆತ್ತುತ್ತಿದ್ದಾರೆ. ಬಾಳಿಗ ಕೇಸನ್ನೀಗ ರಾಘವೇಶ್ವರ ಸ್ವಾಮಿಯನ್ನು ಬಚಾವ್ ಮಾಡಿದ ಶಂಭು ಶರ್ಮನೇ ನೋಡಿಕೊಳ್ಳುತ್ತಿದ್ದು ಇದೂ ಕೂಡ ಅದೇ ದಾರಿ ಹಿಡಿಯುವ ಲಕ್ಷಣ ಗೋಚರಿಸುತ್ತಿದೆ.

ರವಿಕಿರಣ ರೈಯವರ ಅನುಭವಕ್ಕೆ ಬಂದಂತಹ ಇಂತಹ ಮಾತಿನ ಹಾಗು ನಡೆಗಳ (ಡಬ್ಬಲ್ ಗೇಮ್) ಅನುಭವಗಳು ಇಲ್ಲಿನ ಸ್ಥಳೀಯರಿಗೆ ಆಗಾಗ ಆಗುತ್ತಲೇ ಇರುತ್ತದೆ. ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುವ ಈ ವರ್ಗಗಳ ಮುಖ್ಯ ಗಿರಾಕಿಗಳೆಂದರೆ ವಿದೇಶಕ್ಕೆ ಹೋಗಿಬರುವ ಹಣವಂತ ಮುಸಲ್ಮಾನ-ಕ್ರಿಶ್ಚಿಯನ್ನರೇ ಹೊರತು ಶೂದ್ರರಲ್ಲ. ಹಾಗಾಗಿ ಇವರ ವ್ಯವಹಾರಕ್ಕೆ ಅನ್ಯಮತೀಯರ ಒಡನಾಟವನ್ನು ಯಾವತ್ತೂ ಇವರು ಬಿಟ್ಟುಕೊಡುವುದೇ ಇಲ್ಲ (ಈ ಕಾರಣಕ್ಕೇ ಬಡಿದಾಟ ದೊಂಬಿಗಳಲ್ಲಿ, ಕೋಮು ಗಲಭೆಗಳಲ್ಲಿ ಶೂದ್ರರಂತೆ ಇವರ ನೇರ ಭಾಗವಹಿಸುವಿಕೆ ಯಾವತ್ತಿಗೂ ಇರದು). ದೇವಸ್ಥಾನಗಳಲ್ಲಿ ಸಾಬರ ಅಂಗಡಿಗೆ ನಿಷೇಧ ಅಂದಂತೆ ಇವರ ಅಂಗಡಿಗಳಿಗೆ, ಇವರ ಆಸ್ಪತ್ರೆಗಳಿಗೆ ಸಾಬರಿಗೆ ಪ್ರವೇಶವಿಲ್ಲ ಎಂಬ ಬೋರ್ಡು ತಗುಲಿಸಿಕೊಳ್ಳಲಿ ನೋಡುವ. ಖಂಡಿತಾ ಸಾಧ್ಯವಿಲ್ಲ. ಯಾಕೆಂದರೆ ರವಿಕಿರಣರು ಹೇಳಿದಂತೆ ಇವರ ಒಳಲೆಕ್ಕಾಚಾರಗಳೇ ಬೇರೆ.


ಸಾಬರು ಶೂದ್ರರು ಹಾದಿತಪ್ಪಿ ಕಚ್ಚಾಟ ಮಾಡಿಕೊಳ್ಳುತ್ತಲೇ ಇದ್ದರೆ ತಮ್ಮ ಮಕ್ಕಳ ಶಿಕ್ಷಣ ಉದ್ಯೋಗ ಏಳಿಗೆಗೆ ಯಾವ ತೊಡಕೂ ಇರದು ಎಂಬುದೇ ಇವರ ಒಳಲೆಕ್ಕಾಚಾರ.

- ಓದುಗ, ಮಂಗಳೂರು

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಗೆಲುವಿನ ಹಿಂದೆ ಸಾಕಷ್ಟು ನೋವಿದೆ!!

ಮೂರ್ನಾಲ್ಕು ವರ್ಷಗಳ ಹಿಂದೆ ಚಿತ್ರಾನ್ನಕ್ಕೂ ಪರದಾಡುತ್ತಿದ್ದ ಚಿಕ್ಕಣ್ಣ ಇಂದು ಲಕ್ಷ ಲಕ್ಷ ಸಂಪಾದಿಸುತ್ತಿದ್ದಾರೆ. ಸ್ಟಾರ್ ನಟರಷ್ಟೇ ಅಭಿಮಾನಿಗಳನ್ನು ಹೊಂದಿದ್ದಾರೆ.



ಸ್ಟಾರ್ ನಟರ ಕಾಲ್‌ಶೀಟ್ ಥಟ್ಟನೆ ಸಿಗಬಹುದು. ಆದರೆ ಕಾಮಿಡಿ ಕಲಾವಿದ ಚಿಕ್ಕಣ್ಣನ ಕಾಲ್‌ಶೀಟ್ ಸಿಗುವುದು ಸುಲಭದ ಮಾತಲ್ಲ, ದಿನವೊಂದಕ್ಕೆ ಎರಡು ಸಿನಿಮಾಗಳಲ್ಲಿ ನಟಿಸುವಷ್ಟು ಬಿಜಿ ಆಗಿದ್ದಾರೆ ಈ ನಟ. ಒಂದು ಕಾಲಕ್ಕೆ ಚಿತ್ರಾನ್ನಕ್ಕೂ ಪರದಾಡುತ್ತಿದ್ದ ಚಿಕ್ಕಣ್ಣ ಇಂದು ಸ್ಟಾರ್ ನಟ. ಈ ಬೆಳವಣಿಗೆಯ ಕುರಿತು ಚಿಕ್ಕಣ್ಣ ಮಾತಾಡಿದ್ದು ಇಲ್ಲಿದೆ.

** ಇವತ್ತು ನಿಮ್ಮ ಕಾಲ್‌ಶೀಟ್ ಸಿಗುವುದು ತುಂಬಾನೇ ಕಷ್ಟ ಅನ್ನುವ ಮಾತಿದೆ. ಈ ಬೆಳವಣಿಗೆಯ ಬಗ್ಗೆ ಏನು ಹೇಳುತ್ತೀರಿ?*

ಇಷ್ಟೊಂದು ಬಿಜಿ ಆಗುತ್ತೇನೆ ಅಂತ ನನಗೇ ಗೊತ್ತಿರಲಿಲ್ಲ. ಹಾಗಂತ ಕಾಲ್‌ಶೀಟ್ ಸಿಗುವುದಿಲ್ಲ ಅನ್ನುವುದನ್ನು ನಾನು ಒಪ್ಪುವುದಿಲ್ಲ. ಬಿಡುವು ಇದ್ದರೆ ಖಂಡಿತಾ ಸಿನಿಮಾ ಒಪ್ಪಿಕೊಳ್ಳುತ್ತೇನೆ. ಎಲ್ಲರಿಗೂ ಕಾಲ್‌ಶೀಟ್ ಕೊಟ್ಟರೆ, ಶೂಟಿಂಗ್‌ಗೆ ಸಮಸ್ಯೆಯಾಗಿ ಅವರಿಗೇ ತೊಂದರೆ ಆಗುತ್ತದೆ. ಹೀಗಾಗಿ ಎಲ್ಲಾ ಸಿನಿಮಾಗಳನ್ನೂ ಒಪ್ಪಿಕೊಳ್ಳುವುದು ಕಷ್ಟ ಆಗಬಹುದಷ್ಟೆ.

** ಹಾಗಾದರೆ, ನಿಮ್ಮ ಸಂಭಾವನೆ ಜಾಸ್ತಿ ಆಗಿದ್ಯಾ?*


ನಿಜ ಹೇಳುತ್ತೇನೆ, ನಾನು ಸಂಭಾವನೆಯ ಬಗ್ಗೆ ಯಾವತ್ತೂ ತಲೆ ಕೆಡಿಸಿಕೊಂಡವನು ಅಲ್ಲ. ಮೊದಲು ಪಾತ್ರದ ಬಗ್ಗೆ ಕೇಳುತ್ತೇನೆ. ನನಗೆ ಕ್ಯಾರೆಕ್ಟರ್ ಇಷ್ಟವಾದರೆ, ಎಷ್ಟೋ ಬಾರಿ ಕಡಿಮೆ ಸಂಭಾವನೆ ಪಡೆದೂ ನಟಿಸಿದ್ದೇನೆ.

** ಅದೆಷ್ಟೋ ನಿರ್ಮಾಪಕರಿಗೆ ಹಣ ವಾಪಸ್ಸು ಮಾಡಿದ್ದೀರಂತೆ?*

ನಿರ್ಮಾಪಕರ ಕಷ್ಟ ಏನು ಅಂತ ಅರ್ಥಮಾಡಿಕೊಂಡಿದ್ದೇನೆ. ಅವರನ್ನು ಕಷ್ಟಕ್ಕೆ ದೂಡಿ ನಾವು ನೆಮ್ಮದಿಯಿಂದ ಇರೋಕೆ ಆಗತ್ತಾ? ನಿರ್ಮಾಪಕ ಚೆನ್ನಾಗಿದ್ದರೆ ಖಂಡಿತಾ ಅವರು ಮತ್ತೊಂದು ಚಿತ್ರ ಮಾಡುತ್ತಾರೆ. ಆಗ ಇನ್ನಷ್ಟು ಕಲಾವಿದರಿಗೆ ಕೆಲಸ ಸಿಗುತ್ತದೆ. ಅಲ್ಲದೇ ನಾನು ವಾಪಸ್ಸು ಮಾಡಿದ್ದು ಸಣ್ಣ ಮೊತ್ತವಷ್ಟೇ. ಅದನ್ನೇ ಅವರು ದೊಡ್ಡದು ಅಂದುಕೊಂಡಿದ್ದಾರೆ. ಹಾಗಾಗಿ ಅವರ ಮನಸು ದೊಡ್ಡದು.

** 'ತಲೆ ಬಾಚ್ಕೊಳ್ಳಿ ಪೌಡ್ರು ಹಾಕ್ಕೊಳ್ಳಿ' ಚಿತ್ರದ ಮೂಲಕ ಹೀರೋ ಆಗುತ್ತಿದ್ದೀರಂತೆ?*

ಅಯ್ಯೋ, ಸುಮ್ನೆ ಇರಿ. ಹೀರೋ ಆಗುವಂಥ ಲಕ್ಷಣ ನನಗೆ ಇದೆಯಾ? ಈ ಚಿತ್ರದಲ್ಲಿ ವಿಕ್ರಮ್ ಆರ್ಯ ಅನ್ನುವವರು ಹೀರೋ. ನಾನಿಲ್ಲಿ ಮತ್ತೊಂದು ಪ್ರಮುಖ ಪಾತ್ರ ಮಾಡಿದ್ದೇನಷ್ಟೆ. ನನ್ನ ಮೇಲಿನ ಪ್ರೀತಿಗೆ ವಿಕ್ರಮ್ ಅವರು ಚಿಕ್ಕಣ್ಣ ಹೀರೋ ಅಂತಿದ್ದಾರೆ. ನಿಜವಾಗಿಯೂ ಅವರೇ ನಾಯಕ.



'ತಲೆ ಬಾಚ್ಕೊಳ್ಳಿ ಪೌಡ್ರು ಹಾಕ್ಕೊಳ್ಳಿ' ವಿಕ್ರಮ್ ಆರ್ಯ ಜೊತೆ....

** ಹೀರೋ ಅಂತ ನಿಮ್ಮನ್ನ ಕರೆಯಲು ಏನಾದರೂ ಒಂದು ಕಾರಣ ಇರಲೇಬೇಕು. ಏನಿರಬಹುದು ಆ ಕಾರಣ?*

ಆಗಲೇ ನಾನು ಹೇಳಿದಂತೆ, ಮತ್ತೊಂದು ಪ್ರಮುಖ ಪಾತ್ರ ನಿರ್ವಹಿಸಿದ್ದೇನೆ. ಆ ಪಾತ್ರಕ್ಕೆ ಸೋಲೋ ಸಾಂಗ್ ಇದೆ. ಮೊದಲ ಬಾರಿಗೆ ಅಂತಹ ಸಾಂಗ್‌ನಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಅಲ್ಲದೇ ನನ್ನದೇ ಸಪ್ರೇಟ್ ಕತೆ ಕೂಡ ಸಿನಿಮಾದಲ್ಲಿದೆ. ಇದೇ ಮೊದಲ ಬಾರಿಗೆ ನಾನು ಇಂಥದ್ದೊಂದು ಪಾತ್ರದಲ್ಲಿ ನಟಿಸಿದ್ದೇನೆ. ಹೀಗಾಗಿ ಅವರು ಹಾಗೆ ಕರೆಯುತ್ತಿದ್ದಾರೆ ಅನಿಸತ್ತೆ.

** ಕಾಮಿಡಿಯ ಜತೆಗೆ ಹೊಸದೇನಾದರೂ ಮಾಡಬೇಕು ಅಂತ ಅನಿಸ್ತಿದೆಯಾ?*

ನಿಜಕ್ಕೂ ಆಸೆ ಇದೆ. ಆದರೆ ಕಾಮಿಡಿ ಕಲಾವಿದರು ಕನ್ನಡದಲ್ಲಿ ಕಡಿಮೆ ಇದ್ದಾರಂತೆ. ನೀನು ಬೇರೆ ಏನೂ ಮಾಡಬೇಡ ಅಂತ ಗೆಳೆಯರು ಹೇಳುತ್ತಿದ್ದಾರೆ. ಹೀಗಾಗಿ ಕಾಮಿಡಿ ಕಲಾವಿದನಾಗಿಯೇ ಇರುತ್ತೇನೆ. ಪ್ರೇಕ್ಷಕರು ನನ್ನನ್ನು ಬೇರೆ ಪಾತ್ರದಲ್ಲಿ ನೋಡೋಕೆ ಇಷ್ಟಪಟ್ಟರೆ, ಖಂಡಿತಾ ಟ್ರೈ ಮಾಡ್ತೇನೆ.

** ಸ್ಟಾರ್ ನಟರಷ್ಟೇ ಅಭಿಮಾನಿಗಳು ನಿಮಗೂ ಇದ್ದಾರೆ. ಈ ಕುರಿತು ಏನು ಹೇಳುತ್ತೀರಿ?*

ಅಭಿಮಾನಿಗಳು ಇದ್ದಾರೆ ನಿಜ. ಆದರೆ ಸ್ಟಾರ್ ನಟರಷ್ಟು ಅನ್ನುವುದನ್ನು ನಾನು ಒಪ್ಪಲಾರೆ. ನನ್ನ ಪಾತ್ರ ತೆರೆಯ ಮೇಲೆ ಬಂದಾಗ ವಿಸಿಲ್ ಹಾಕುವುದನ್ನೂ ನಾನು ನೋಡಿದ್ದೇನೆ. ನಿಜಕ್ಕೂ ಖುಷಿ ಆಗುತ್ತದೆ. ಇಂತಹ ಖುಷಿಗಾಗಿ ನಾನು ಸಾಕಷ್ಟು ಕಷ್ಟಪಟ್ಟಿದ್ದೇನೆ. ಖಂಡಿತಾ ಇದನ್ನು ಉಳಿಸಿಕೊಂಡು ಹೋಗುತ್ತೇನೆ.

** ನಿಮ್ಮ ಇಷ್ಟದ ನಟ ಯಾರು? ಯಾರ ಕಾಂಬಿನೇಷನ್ ನಿಮಗೆ ಖುಷಿ ಕೊಡುತ್ತದೆ?*

ಈವರೆಗೂ ಯಾರೆಲ್ಲ ನಟರ ಜತೆ ಕೆಲಸ ಮಾಡಿದ್ದೇನೋ ಎಲ್ಲರೂ ನನ್ನಿಷ್ಟದ ನಟರು. ಮತ್ತೆ ಮತ್ತೆ ಅವರ ಸಿನಿಮಾದಲ್ಲಿ ನಟಿಸಿದ್ದೇನೆ ಅಂದರೆ, ಎಲ್ಲರ ಕಾಂಬಿನೇಷನ್ ನನಗೆ ಖುಷಿ ಕೊಟ್ಟಿದೆ. ಎಲ್ಲರ ಜತೆ ತೆರೆ ಹಂಚಿಕೊಳ್ಳಲು ಅವಕಾಶ ಸಿಕ್ಕಿದ್ದು ನನ್ನ ಪುಣ್ಯ ಕೂಡ.

** ಸದ್ಯ ಯಾವ ಯಾವ ಸಿನಿಮಾಗಳಲ್ಲಿ ನಟಿಸುತ್ತಿದ್ದೀರಿ?*

ಇದೇ ಶುಕ್ರವಾರ 'ತಲೆ ಬಾಚ್ಕೊಳ್ಳಿ ಪೌಡ್ರು ಹಾಕ್ಕೊಳ್ಳಿ' ಚಿತ್ರ ರಿಲೀಸ್ ಆಗುತ್ತಿದೆ. ಅಲ್ಲದೇ 'ರಾಜ್ ವಿಷ್ಣು', 'ಕೋಟಿಗೊಬ್ಬ-2', 'ಚೌಕ', 'ಹ್ಯಾಪಿ ಬರ್ತ್‌ಡೇ' ಹೀಗೆ ಹತ್ತಕ್ಕೂ ಹೆಚ್ಚು ಚಿತ್ರಗಳು ಕೈಯಲ್ಲಿವೆ. 'ಚೌಕ' ಸಿನಿಮಾದಲ್ಲಿ ಅಪರೂಪದ ಪಾತ್ರ ಮಾಡಿದ್ದೇನೆ.

** ಸಿನಿಮಾ ನಿರ್ಮಾಣ ಮಾಡುವ ಆಸೆ ಏನಾದರೂ ಇದೆಯಾ?*

ನನಗೆ ಸದ್ಯಕ್ಕೆ ಗೊತ್ತಿರೋದು ನಟನೆ ಮಾತ್ರ. ನಿರ್ಮಾಣದ ಬಗ್ಗೆ ಯೋಚನೆ ಮಾಡಿಲ್ಲ. ಇಲ್ಲಿ ದುಡಿದ ದುಡ್ಡನ್ನು ಇಲ್ಲಿಯೇ ವಿನಿಯೋಗಿಸಬೇಕು ಅನ್ನುವ ಆಸೆ ಇದೆ. ಅದು ಯಾವಾಗ ಆಗುತ್ತೋ ಗೊತ್ತಿಲ್ಲ. ಮುಂದಿನ ದಿನಗಳಲ್ಲಿ ನಿರ್ಮಾಣದ ಬಗ್ಗೆ ಯೋಚಿಸುತ್ತೇನೆ.

** ಕಾಮಿಡಿ ಕಲಾವಿದರಿಗೆ ಕನ್ನಡ ಸಿನಿಮಾರಂಗದಲ್ಲಿ ಪ್ರಾಶಸ್ತ್ಯ ಇದೆಯಾ?*

ಖಂಡಿತಾ ಇದೆ. ಹಾಗಾಗಿಯೇ ನಾವು ಇಲ್ಲಿ ಬದುಕ್ತಾ ಇರೋದು. ಕಾಮಿಡಿ ಕಲಾವಿದರ ಸಂಖ್ಯೆ ಕಡಿಮೆ ಇರಬಹುದು. ಆದರೆ ಪ್ರತಿ ಸಿನಿಮಾದಲ್ಲೂ ಅಂತಹ ಪಾತ್ರಗಳು ಇರುತ್ತವೆ. ಸಿನಿಮಾ ಅನ್ನುವುದೇ ಮನರಂಜನೆ ಮಾಧ್ಯಮ. ಹೀಗಾಗಿ ಕಾಮಿಡಿ ಪಾತ್ರಕ್ಕೆ ಪ್ರಾಮುಖ್ಯತೆ ಇದ್ದೇ ಇರುತ್ತದೆ.

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 18-05-2016 RNI No. KARKAN200



ರಾಗಿಣಿಯ ಕಣ್ಣೀರಿನ ಕತೆ

ಇತ್ತೀಚೆಗೆ ಪತ್ರಿಕಾಗೋಷ್ಠಿಯಲ್ಲಿ ರಾಗಿಣಿ ಅತ್ತಿದ್ದು ದೊಡ್ಡ ಸುದ್ದಿ ಆಯಿತು. ಆದರೆ ಅದರ ಹಿಂದಿನ ಇಂಟ್ರಸ್ಟಿಂಗ್ ಕಹಾನಿ ಮಾತ್ರ ಹಾಗೆಯೇ ಉಳಿಯಿತು. ಕೆಲವು ಪತ್ರಕರ್ತರಿಗೆ ಕಚಗುಳಿ ಇಡುತ್ತಲೇ ಸದಾ ರಂಜಿಸುತ್ತಿದ್ದ ರಾಗಿಣಿ ಇದ್ದಕ್ಕಿದ್ದಂತೆಯೇ ಅಳುಮುಂಜಿಯಾಗಲು ಕಾರಣ, ತನಗೆ ಡಿಮಾಂಡ್ ಕಡಿಮೆ ಆಗಿದೆ ಅನ್ನುವುದು. ತಾನೇ ನಂಬರ್ ಒನ್ ನಟಿ ಎಂದು ಹೇಳಿಕೊಳ್ಳುತ್ತಿರುವ ರಾಗಿಣಿ ಸದ್ಯ ಆನಂದ್ ಪಿ ರಾಜು ನಿರ್ದೇಶನದ ಚಿತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರಕ್ಕೆ ಇವರೇ ಹೀರೋ ಕಂ ಹಿರೋಯಿನ್. ಪಾತ್ರಕ್ಕಾಗಿ ಸುಖತ್ ಕಷ್ಟಪಟ್ಟಿದ್ದಾರಂತೆ. ಈ ಚಿತ್ರದ ಎಲ್ಲ ... ದೃಶ್ಯಗಳನ್ನು ತೋರಿಸಲು ಕನ್ನಡ ಚಿತ್ರರಂಗದ ಎಲ್ಲರಿಗೂ ಆಹ್ವಾನ ನೀಡಿದ್ದಾರೆ. ಆದರೆ ಚಿತ್ರತಂಡದ ಹೊರತಾಗಿ ಯಾರೂ ಬಂದಿಲ್ಲ. ಈ ನಡೆಯೇ ಅವರಿಗೆ ಬೇಸರ ತರಿಸಿದೆ. "ನಾನು ನಂಬರ್ ಒನ್ ನಟಿ ಅಲ್ಲವಾ? ನನ್ನನ್ನು ಪ್ರೀತಿಸುವಂಥವರು ಸಿನಿಮಾರಂಗದಲ್ಲಿ ಇಲ್ಲವಾ? ಯಾರೇ ಕರೆದರೂ ನಾನು ಹೋಗಿದ್ದೇನಲ್ಲ?" ಅಂತೆಲ್ಲ ತಮಗೆ ತಾವೇ ಪ್ರಶ್ನೆ ಹಾಕಿಕೊಂಡು ಕಣ್ಣೀರಿಟ್ಟಿದ್ದಾರೆ.

ನಾಗಾಭರಣ ಹೀರೋ

ನಿರ್ದೇಶಕ ಟಿ.ಎಸ್.ನಾಗಾಭರಣ ಹೀರೋ ಆಗುತ್ತಿದ್ದಾರೆ. ಬಿ.ಸುರೇಶ ನಿರ್ದೇಶನದಲ್ಲಿ ಮೂಡಿಬರಲಿರುವ 'ಉಪ್ಪಿನ ಕಾಗದ' ಚಿತ್ರಕ್ಕೆ ಅವರು ನಾಯಕರಾಗಿ ಆಯ್ಕೆ ಆಗಿದ್ದಾರೆ. ಸಿನಿಮಾದ ಶೂಟಿಂಗ್ ಶುರುವಾಗಲು ಇನ್ನೂ ಒಂದು ತಿಂಗಳಾದರೂ ಬೇಕು. ಆದರೆ ಅದಕ್ಕಿಂತ ಮುಂಚೆ ಟೀಸರ್ ಶೂಟ್ ಮಾಡಿದೆ ಚಿತ್ರತಂಡ. ಸಿನಿಮಾದಲ್ಲಿ ನಾಲ್ಕು ಪಾತ್ರಗಳಿವೆ. ಇಬ್ಬರು ಪ್ರಖ್ಯಾತ ನಿರ್ದೇಶಕರು ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ. [illegible] ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಜಾತಿಗಿಂತ ಬದುಕೇ ಮುಖ್ಯ ಅನ್ನುವುದನ್ನು ಈ ಚಿತ್ರದ ಮೂಲಕ ಹೇಳಲಿದ್ದಾರೆ ನಿರ್ದೇಶಕ ಸುರೇಶ.

ನಾಗಾಭರಣ ಈ ಸಿನಿಮಾದಲ್ಲಿ ವಿಭಿನ್ನ ಪಾತ್ರ ನಿರ್ವಹಿಸುತ್ತಿದ್ದಾರೆ. ರಥ ಮತ್ತು ಗುಡಿಯ ಬಾಗಿಲು ತಯಾರು ಮಾಡುವ ಶಿಲ್ಪಿಯ ಪಾತ್ರ ಅದಾಗಿದೆ. ಹಾಗಾಗಿ ಚಿತ್ರಕತೆಯು ಈ ಪಾತ್ರದ ಸುತ್ತಲೇ [illegible].

ಪದ್ಮಾ ಹಿಂದೆ ಕೋಮಲ್

ಕಾಮಿಡಿ ನಟ ಕೋಮಲ್ ನಟನೆಯ 'ಡೀಲ್ ರಾಜ' ಚಿತ್ರದ 'ಪದ್ಮಾವತಿ' ಹಾಡು ಇದೀಗ ಫೇಮಸ್ ಆಗಿದೆ. ಇತ್ತೀಚೆಗಷ್ಟೇ ರಿಲೀಸ್ ಆಗಿರುವ ಈ ಹಾಡಿಗೆ ಎಲ್ಲರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸಂಗೀತ ನಿರ್ದೇಶಕ ಅಭಿಮಾನ್ ಹಾಗೂ ಕೋಮಲ್ ಜೋಡಿ ಮತ್ತೊಮ್ಮೆ ಮೋಡಿ ಮಾಡಿದೆ.

ಈ ಹಿಂದೆ 'ಕರೋಡ್‌ಪತಿ' ಚಿತ್ರಕ್ಕಾಗಿ ಮಾಡಿದ್ದ 'ಸರಳ ಸರಳ...' ಹಾಡು ಇದೇ ಕಾಂಬಿನೇಷನ್‌ನಲ್ಲಿ ಮೂಡಿಬಂದಿತ್ತು. ಅದಾದ ಬಳಿಕ ಅದಕ್ಕಿಂತ ಭಿನ್ನವಾಗಿ ಮಾಡಬೇಕೆಂಬ ಚಾಲೆಂಜ್ ತೆಗೆದುಕೊಂಡು 'ಪದ್ಮಾವತಿ' ಹಾಡಿಗೆ ಟ್ಯೂನ್ ಹಾಕಿದ್ದಾರಂತೆ ಅಭಿಮಾನ್ ರಾಯ್. 'ನಿನ್ನನ್ನೇ ನಂಬಿರುವೆ ಪದ್ಮಾವತಿ...' ಎಂದು ಶುರುವಾಗುವ ಈ ಹಾಡು ಬಹುತೇಕ ಸೆಟ್‌ನಲ್ಲೇ ಶೂಟಿಂಗ್ ಆಗಿದ್ದು, ಮುರಳಿ ನೃತ್ಯ ನಿರ್ದೇಶನವಿದೆ. ನಾಯಕಿ ಭಾನುಶ್ರೀ ಹಾಗೂ ಕೋಮಲ್ ವಿಶೇಷ ಗೆಟಪ್‌ಗಳಲ್ಲಿ ಮಿಂಚಿದ್ದಾರೆ.

"ಈ ಹಾಡಿಗೆ ಟ್ಯೂನ್ ಹಾಕುವುದಕ್ಕೂ ಮುನ್ನವೇ ಒಂದಷ್ಟು ಚರ್ಚೆ ನಡೆದಿತ್ತು. ಮಿಕ್ಕೆಲ್ಲಾ ಹಾಡಿಗಿಂತ ಈ ಹಾಡು ಇನ್ನೂ ಚೆನ್ನಾಗಿ ಮೂಡಿಬರಬೇಕೆಂಬುದು ಎಲ್ಲರ ಆಸೆಯಾಗಿತ್ತು. ಕೊನೆಗೆ ಹಾಡು ರೆಡಿಯಾದ ಮೇಲೆ ಎಲ್ಲರಿಗೂ ಖುಷಿಯಾಯ್ತು. ಔಟ್‌ಪುಟ್ ಕೂಡ ಅಷ್ಟೇ ಚೆನ್ನಾಗಿ ಬಂದಿದೆ. ಎಲ್ಲರೂ ಹಾಡು ಮೆಚ್ಚಿದ್ದಾರೆ. ಹೀಗಾಗಿ ಸಹಜವಾಗಿಯೇ ಖುಷಿ ಆಗಿದೆ" ಅಂದಿದ್ದಾರೆ ಅಭಿಮಾನ್ ರಾಯ್.

ಥ್ಯಾಕರೆಯಾದ ಆದಿತ್ಯ

ಸೋತುಸುಣ್ಣವಾಗಿರುವ ಆದಿತ್ಯಗೆ ಹಲವು ಅವಕಾಶಗಳು ಹುಡುಕಿಕೊಂಡು ಬರುತ್ತಿವೆ. ಈಗಷ್ಟೇ ಇವರು ಪಿ.ಎನ್.ಸತ್ಯ ನಿರ್ದೇಶನದ 'ಬೆಂಗಳೂರು ಅಂಡರ್‌ವರ್ಲ್ಡ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಇದು ಮುಗಿಯುತ್ತಿದ್ದಂತೆಯೇ 'ಥ್ಯಾಕರೆ' ಪಾತ್ರಕ್ಕಾಗಿ ಸಿದ್ಧತೆ ಮಾಡಿಕೊಳ್ಳಬೇಕಿದೆ. ಭೂಗತ ಹಿನ್ನೆಲೆಯ ಚಿತ್ರಗಳಿಗೆ ಫೇಮಸ್ ಆಗಿದ್ದ ಆದಿತ್ಯ 'ಥ್ಯಾಕರೆ' ಮೂಲಕ ಅದನ್ನು ಬ್ರೇಕ್ ಮಾಡಲಿದ್ದಾರಂತೆ.

ಈ ಹಿಂದೆ ಆದಿತ್ಯ ನಟಿಸಿದ್ದ 'ಡೆಡ್ಲಿ ಸೋಮ' ಮತ್ತು ಒಂದೆರಡು ಇತರೆ ಚಿತ್ರಗಳು ಇವರಿಗೆ ಹೆಸರು ತಂದು ಕೊಟ್ಟವು. ಅದಾದ ಬಳಿಕ ಸಾಲು ಸಾಲು ಚಿತ್ರಗಳಲ್ಲಿ ಇವರು ನಟಿಸಿದರೂ ಹೇಳಿಕೊಳ್ಳುವಂತಹ ಗೆಲುವು ಸಿಗಲಿಲ್ಲ. ಅದರಲ್ಲೂ ನಿರೀಕ್ಷೆಯ 'ರೆಬೆಲ್' ಚಿತ್ರ ಕೂಡ ಮುಗ್ಗರಿಸಿತು. ಹೀಗಾಗಿ ಆದಿತ್ಯ ಮತ್ತೆ ಸಿನಿಮಾರಂಗದಲ್ಲಿ ಎದ್ದೇಳುವುದು ಕಷ್ಟ ಅನ್ನಲಾಗಿತ್ತು. ಈಗ ಮೂರು ಚಿತ್ರಗಳನ್ನು ಒಪ್ಪಿಕೊಳ್ಳುವ ಮೂಲಕ ಎಲ್ಲಾ ಮಾತಿಗೂ ತಕ್ಕ ಉತ್ತರ ಕೊಟ್ಟಿದ್ದಾರೆ.



'ಥ್ಯಾಕರೆ' ಚಿತ್ರದ ಕೆಲಸ ಇನ್ನೂ ಆರಂಭವಾಗಿಲ್ಲ. ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುತ್ತಿರುವ ಗುರು ದೇಶಪಾಂಡೆ ಕೂಡ ಮತ್ತೊಂದು ಸಿನಿಮಾದಲ್ಲಿ ಬಿಜಿ ಆಗಿದ್ದಾರೆ. ಹೀಗಾಗಿ ಈ ಸಿನಿಮಾ ಇನ್ನೆರಡು ತಿಂಗಳ ನಂತರ ಸೆಟ್ಟೇರಲಿದೆಯಂತೆ.

ವಿಭಿನ್ನ ಪಾತ್ರದಲ್ಲಿ ಸ್ಮಿ

ಕವಿತಾ ಲಂಕೇಶ್ ನಿರ್ದೇಶನದ 'ಅವ್ವ' ಸಿನಿಮಾ ಖ್ಯಾತಿಯ ಅಲಿಯಾಸ್ ನಿವೇದಿತಾ ಹೊಸ ರೀತಿಯ ಪಾತ್ರದಲ್ಲಿ ಕಾಣಿಸಿಕೊಂ ಅವರು ಒಂದು ಕಿರುಚಿತ್ರದಲ್ಲಿ ಬಾಡಿಗೆ ತಾಯಿಯಾಗಿ ನಟಿಸಿದ್ದಾರೆ. ತಾಯ್ತನಕ್ಕೆ ಒಪ್ಪುವ ಬಡ ಮಹಿಳೆಯರನ್ನು ಬಳಸಿಕೊಂಡು ಹಣ ನಿಂತ ಅದೆಷ್ಟೋ ಖಾಸಗಿ ಆಸ್ಪತ್ರೆಗಳು ಮತ್ತು ವೈದ್ಯರು ನಮ್ಮ ಇದ್ದಾರೆ. ಇಂಥದ್ದೇ ವಿಷಯವನ್ನಿಟ್ಟುಕೊಂಡು ನಿರ್ದೇಶಕ ಪ್ರಸನ್ನ ಕೊ ಹದಿನೈದು ನಿಮಿಷದ ಕಿರುಚಿತ್ರ ತಯಾರಿಸಿದ್ದಾರೆ.

ಅವಳು ಸೀತಾ. ಮದುವೆಯೂ ಆಗದ ಹುಡುಗಿ ಈಕೆ. ಹೂ ಮಾರು ಈಕೆಯ ಕಾಯಕ. ಗೆಳತಿಯ ಮಾತಿಗೆ ಮರುಳಾಗಿ ಬಾಡಿಗೆ ತಾಯ್ತ ಒಪ್ಪುತ್ತಾಳೆ. ಈಕೆಯ ಒಡಲಲ್ಲಿ ವಿದೇಶಿ ದಂಪತಿಯ ಭ್ರೂಣ ಅರಳುತ್ತದೆ. ಈಕೆ ಏಳು ತಿಂಗಳ ಗರ್ಭವತಿಯಾಗಿರುವ ಸಂದರ್ಭದಲ್ಲಿ ವಿದೇಶಿ ದಂಪತಿ ಜಗಳವಾಡಿಕೊಂಡು ಪರಸ್ಪರ ವಿಚ್ಛೇದನದ ಮೊರೆ ಹೋಗುತ್ತಾರೆ. ಆಗ ಸೀತಾ ಹೆತ್ತ ಮಗು ಯಾರ ಪಾಲಾಗುತ್ತದೆ ಅನ್ನುವ ಸೂಕ್ಷ್ಮ ಕತೆ ಇಲ್ಲಿದೆ. ಹೀಗಾಗಿಯೇ ಕಿರುಚಿತ್ರಕ್ಕೆ 'ಪರಾಗಸ್ಪರ್ಶ' ಎಂದು ಹೆಸರಿಟ್ಟಿದ್ದಾರೆ ನಿರ್ದೇಶಕರು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com